(ಶ್ರೀಮತಿ ಇ. ಇ. ವಾಜ್)

ಇರತಕ್ಕ ಅಭಾವವನ್ನು ಹೋಗಲಾಡಿಸುವುದಕ್ಕೆ ಎಲ್ಲ ಪ್ರಯತ್ನಗಳನ್ನು ಸರಕಾರದವರು ಈಗಾಗಲೇ ಮಾಡುತ್ತಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾನು ಇಷ್ಟು ಹೇಳಿದ ಮೇಲೆ ಮಾನ್ಯ ಸದಸ್ಯರೆಲ್ಲರೂ ಈಗ ಸಮಾಧಾನ ಮಾಡಿಕೊಳ್ಳಬಹುದೆಂದು ನನಗನಿಸುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಆ ವ್ಯಾಗನ್ ಸಿಕ್ ವ್ಯಾಗನ್ ಎಂಬುದಾಗಿ ಏಜೆಂಟ್ ಮತ್ತು ರೈಲ್ವೆ ಸಿಬ್ಬಂದಿಯವರು ಹೇಳಿದ್ದು......

ಶ್ರೀ ವಾಟಾಳ್ ನಾಗರಾಜ್.—ಇವರು ಆಹಾರ ಸಚಿವರಾದಮೇಲೆ ಈಗ ಸಕ್ಕರೆಗೆ ಸ್ಕೇರ್ಸಿಟಿ ಇದೆ. ಟೈರ್‌ಗೆ ಸ್ಕೇರ್ಸಿಟಿ ಇದೆ, ಸೀಮೆಯೆಣ್ಣೆಗೆ ಸ್ಕೇರ್ಸಿಟಿ ಇದೆ. ನಾಳೆ ಉಪ್ಪಿಗೂ ಅಭಾವ ಬರುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇವರ ಪೋರ್ಟ್‌ಫೋಲಿಯೋವನ್ನು ಚೇಂಜ್ ಮಾಡಿದರೆ ಬಹಳ ಒಳ್ಳೆಯದು. ಅವರಿಗೆ ಏನಾದರೂ ಬೇರೆ ಪೋರ್ಟ್‌ಫೋಲಿಯೊ ಕೊಡುವುದು ಒಳ್ಳೆಯದು.

2–30 P.M.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೇ, ಈಗ ಬೇಬಿ ಫುಡ್ ಸಿಗುತ್ತಾ ಇಲ್ಲ. ಅದನ್ನು ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರುತ್ತಿದ್ದಾರೆ. ಅದರ ಬಗ್ಗೆ ಸರ್ಕಾರದವರು ಜಾಗ್ರತೆಯಾಗಿ ಕ್ರಮ ತೆಗೆದುಕೊಳ್ಳಬೇಕು. ಈ ವಿಚಾರದಲ್ಲಿ ಮಂತ್ರಿಗಳು ಉತ್ತರ ಹೇಳಬೇಕು.

Mysore (Bombay and Hyderabad Areas) Religious and Charitable Inams Abolition Bill, 1972

Motion to Consider

(Debate Continued)

ಅಧ್ಯಕ್ಷರು :—ಈಗ 'ದಿ ಮೈಸೂರು (ಬಾಂಬೆ ಮತ್ತು ಹೈದ್ರಾಬಾದ್ ಪ್ರದೇಶಗಳ) ರಿಲಿಜಿಯಸ್ ಮತ್ತು ಛಾರಿಟೆಬಲ್ ಇನಾಂ ಅಬಾಲಿಷನ್ ಬಿಲ್ 1972 ಇದರ ಮೇಲೆ ಚರ್ಚೆ ಪ್ರಾರಂಭವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೆ: ಮಾನ್ಯ ರೆವಿನ್ಯೂ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಹೈದ್ರಾಬಾದ್ ಮತ್ತು ಮುಂಬೈ ಪ್ರದೇಶಗಳಿಗೆ ಸಂಬಂಧಪಟ್ಟ ರಿಲಿಜಿಯಸ್ ಮತ್ತು ಛಾರಿಟೆಬಲ್ ಇನಾಂ ರದ್ದಿಯಾತಿ ಮಸೂದೆಯನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಪೂರ್ವಭಾವಿಯಾಗಿ ಅವರು ಇದನ್ನು ಸುಧೀರ್ಘವಾಗಿ ಪರಿಶೀಲನೆ ಮಾಡಿ ಇದನ್ನು ತಂದಿಲ್ಲ ಅನ್ನುವುದು ನನಗೆ ಈ ಮಸೂದೆಯನ್ನು ಓದಿದ ಮೇಲೆ ಗೊತ್ತಾಯಿತು. ಹಳೇ ಮೈಸೂರಲ್ಲಿ ಈಗಾಗಲೇ ಇಂಥಾ ಒಂದು ಕಾನೂನು ಜಾರಿಯಲ್ಲಿದೆ. ಇಲ್ಲಿ ಅದು 1955 ರಲ್ಲೇ ಜಾರಿಗೆ ಬಂದಿತ್ತು. ಹಾಗೆ ಇಲ್ಲಿ ಒಂದು ಕಾನೂನು ಈಗಾಗಲೇ ಜಾರಿಯಲ್ಲಿದ್ದರೂ ಮತ್ತೆ ಈಗ ಈ ಒಂದು ಹೊಸ ಬಿಲ್ಲನ್ನು ತರತಕ್ಕ ಅಗತ್ಯವಾದರೂ ಏನಿತ್ತು ಎಂದು ಕೇಳುತ್ತೇನೆ? ಹಾಲಿ ಇದ್ದ ಕಾನೂನಿಗೇ ಒಂದು ತಿದ್ದುಪಡಿಯನ್ನು ತಂದಿದ್ದರೆ ಸಾಕಾಗುತ್ತಿತ್ತು. ಹೋಗಲಿ ಈಗ ಹೊಸದಾಗಿ ಈ ಒಂದು ಮಸೂದೆಯನ್ನು ತಂದಿದ್ದಾರೆ. ತರಲಿ. ಇದರ ಬಗ್ಗೆ ನನ್ನ ಅಭ್ಯಂತರವೇನೂ ಇರುವುದಿಲ್ಲ. ಆದರೆ ಒಂದು ಸಮಗ್ರವಾದ ಭೂಸುಧಾರಣೆಯನ್ನು ಜಾರಿಗೆ ತರತಕ್ಕ ಸನ್ನಿವೇಶ ಬಹಳ ಹತ್ತಿರದಲ್ಲೇ ಇದ್ದಾಗ ಈ ವಿಷಯವನ್ನೂ ಅದರಲ್ಲೇ ಅಳವಡಿಸಿ ತರಬಹುದಾಗಿತ್ತು. ಹೀಗೆ ಹಾಲಿ ಇರತಕ್ಕ ಇನಾಂ ಅಬಾಲಿಷನ್ ಶಾಸನಕ್ಕೆ ಒಂದು ತಿದ್ದುಪಡಿ ಮಾಡುವುದರ ಮೂಲಕವಾಗಲಿ, ಇಲ್ಲವೇ ಸಮಗ್ರ ಭೂಸುಧಾರಣೆಯ ಮಸೂದೆಯಲ್ಲಾಗಲೀ ಇದನ್ನು ಅಳವಡಿಸಿ ಮಾಡಬಹುದಾಗಿತ್ತು. ಅಂಥಾ ಅವಕಾಶವನ್ನೆಲ್ಲಾ ಕೈ ಬಿಟ್ಟು ಮಾನ್ಯ ಮಂತ್ರಿಗಳು ಇದನ್ನು ತಂದಿರುವುದನ್ನು ನೋಡಿದರೆ ಏನೋ ಒಂದು ಪ್ರಶಸ್ತಿಯನ್ನು ಪಡೆಯಬೇಕೆಂಬ ಉದ್ದೇಶದಿಂದ ಇದನ್ನು ತಂದಿರುವಂತೆ ಭಾಸವಾಗುತ್ತಿದೆ.

ಆದರೆ ಈ ದಿವಸ ಸರ್ಕಾರದವರು ತಂದಿರತಕ್ಕ ಈ ಮಸೂದೆಯ ವ್ಯಾಪ್ತಿಯಲ್ಲಿ ಬರತಕ್ಕ ಜನರ ಸಂಖ್ಯೆಯಾದರೂ ಎಷ್ಟು ? ಇದರಲ್ಲಿ ಯಾರಿಗೆ ಅನುಕೂಲ ಮಾಡಿಕೊಡಬೇಕು ಅನ್ನುವುದನ್ನು ಇವರು ವಿಚಾರಮಾಡಿ ಇದನ್ನು ತಂದಹಾಗೆ ಕಾಣುವುದಿಲ್ಲ. ಕಂದಾಯ ಮಂತ್ರಿಗಳು ತಮ್ಮ ಮನಸ್ಸಿನಲ್ಲಿ ಒಂದು ಸ್ಪಷ್ಟ ಕಲ್ಪನೆ ಇಲ್ಲದೇನೇ ಈ ಮಸೂದೆಯನ್ನು ತಂದಹಾಗೆ ಕಾಣುತ್ತಿದೆ. ಈ ಹಿಂದೆ ಮೈಸೂರು ರಾಜ್ಯದಲ್ಲಿ ಅಂದರೆ ಹಳೇ ಮೈಸೂರು ರಾಜ್ಯದಲ್ಲಿ ಜಾರಿಗೆ ತಂದಿದ್ದ ಇನಾಂ ಅಬಾಲಿಷನ್ ಶಾಸನ ಏನಿತ್ತು ಅದಕ್ಕೇ ಒಂದು ಈ ಸಂಬಂಧವಾದ ತಿದ್ದುಪಡಿಯನ್ನು ತಂದಿದ್ದರೆ ಅಷ್ಟೇ ಸಾಕಾಗುತ್ತಿರಲಿಲ್ಲವೇ ? ಈಗ ತಂದಿರತಕ್ಕ ಈ ಒಂದು ಮಸೂದೆಯಲ್ಲಾದರೂ ಯಾರಿಗೆ ಸರ್ಕಾರದವರು ರಕ್ಷಣೆ ಕೊಡಬೇಕೆಂದಿದ್ದಾರೆ ಎಂಬ ಬಗ್ಗೆ ತಮ್ಮ ಮನಸ್ಸಿನಲ್ಲೇನಾದರೂ ಒಂದು ಕಲ್ಪನೆ ಇದೆಯೇ ? ಇಂಥ ಯಾವ ಒಂದು ಅಂಶವನ್ನೂ ಪರಿಶೀಲನೆ ಮಾಡದೆ ಇದನ್ನು ತಂದಿದ್ದಾರೆಂದು ತಿಳಿಸುವುದಕ್ಕೆ ನಾನು ವಿಷಾದ ಪಡುತ್ತೇನೆ. ಈ ಒಂದು ಮಸೂದೆಯಿಂದ ಅಲ್ಲಿ ಯಾರು ಖಾಯಂ ಗೇಣೀದಾರರಾಗಿದ್ದಾರೋ ಅಂಥವರಿಗೆ ಮಾತ್ರ ಭೂಮಿಯ ಮಾಲೀಕತ್ವವನ್ನು ಕೊಡಿಸುವುದಕ್ಕೆ ಸಾಧ್ಯ ಅದಕ್ಕಾಗಿ ಇಂಥ ಒಂದು ಕಾನೂನನ್ನು ತರಬೇಕಾಗಿತ್ತೇ ? ಇನ್ನುಳಿದ ಬೇರೆ ಯಾವ ಗೇಣಿದಾರರಿಗೂ ಈ ಮಸೂದೆಯಿಂದ ಪ್ರಯೋಜನವಾಗುವುದಿಲ್ಲ. ಮುಂಬೈ ಮತ್ತು ಆ ಹೈದರಾಬಾದ್ ಪ್ರದೇಶದಲ್ಲಿ ಈಗಾಗಲೇ ಯಾರು ಮೂಗೇಣಿದಾರರಾಗಿ ತಮ್ಮಲ್ಲಿ ಆ ರಿಜಿಸ್ಟರ್ಡ್ ಪತ್ರವನ್ನು ಇಟ್ಟುಕೊಂಡಿದ್ದಾರೋ ಅಂಥವರಿಗೆ ಮಾತ್ರ ಇದರಿಂದ ಸ್ವಲ್ಪ ಅನುಕೂಲ. ಬಾಕಿ ಇನ್ನಾರಿಗೂ ಇದರಿಂದ ಅನುಕೂಲವಿಲ್ಲ. ಅಂದರೆ ಸರ್ಕಾರದವರ ಉದ್ದೇಶ ಇನ್ನುಳಿದ ಗೇಣಿದಾರರು ಹಾಗೆ ಮುಂದುವರಿಯಲಿ ಅನ್ನುವುದು ಇವರ ಆಶೆಯಾಗಿದ್ದಂತೆ ಕಾಣುತ್ತದೆ. ಅಂದಾಗ ಇವರಲ್ಲಿ ಆ ಸಮಾಜವಾದದ ಬಗ್ಗೆ ಅಭಿಮಾನ ವಿಶ್ವಾಸ ಎಷ್ಟುಮಟ್ಟಿಗೆ ಇದೆ ಅನ್ನುವುದು ಇದರಿಂದಲೇ ವೇದ್ಯವಾಗುವಾಗುತ್ತದೆ. ಇವರು ಬಾಯಲ್ಲಿ ಹೇಳುವುದು ಒಂದು ಮತ್ತು ಆಚರಣೆಯಲ್ಲಿ ನಡೆಯುವುದೇ ಮತ್ತೊಂದು. ಹೀಗಾದರೆ ರಾಜ್ಯದಲ್ಲಿ ಸಮತಾವಾದ ಸಮಾಜ ಜಾರಿಗೆ ಬರುವುದಕ್ಕೆ ಅವಕಾಶವಾದರೂ ಎಲ್ಲಿದೆ ? ಮಧ್ಯವರ್ತಿಜನರು ಯಾರೂ ಇರಬಾರದು—ಉಳುವವನೇ ಹೊಲದ ಒಡೆಯನಾಗಬೇಕು ಎಂದು ಸಾರುತ್ತ, ಘೋಷಣೆಗಳನ್ನು ಮಾಡುತ್ತಾ ಈ ದಿವಸ ಇನಾಂದಾರರ ಕೈಕೆಳಗಿದ್ದ ಗೇಣೀದಾರರನ್ನು ಸರ್ಕಾರದ ಕೈಕೆಳಗೆ ಗೇಣೀದಾರರನ್ನಾಗಿ ಮಾಡಿಕೊಳ್ಳಲು ಸರ್ಕಾರದವರು ಪ್ರಯತ್ನ ಮಾಡಿದ್ದಾರೆ. ಈ ಮಸೂದೆಯನ್ನು ಎಲ್ಲಾ ಗೇಣಿದಾರರಿಗೂ ಅನ್ವಯಿಸುವಂತೆ ತರಬೇಕಾಗಿತ್ತು. ಅಲ್ಲಿ ಈ ಶಾಸನಕ್ಕೆ ಒಳಗಾಗತಕ್ಕಂಥ ಮೂಲಗೇಣೀದಾರರು ಶೇಕಡ 5 ಇದ್ದಾರೋ ಇಲ್ಲವೋ ತಿಳಿಯದು. ಇನ್ನು ಶೇಕಡ 95 ರಷ್ಟು ಜನ ಗೇಣಿದಾರರಿಗೆ ಇದರಿಂದೇನೂ ಪ್ರಯೋಜನವಿಲ್ಲ. ಹಿಂದೆ ಅಖಿಲ ಭಾರತ ಕಾಂಗ್ರೆಸ್ಸಿನವರು ಎಲ್ಲಾ ಭೂಮಿಯನ್ನೂ ನಾನ್ ರೆಸ್ಯೂಮಬಲ್ ಲ್ಯಾಂಡನ್ನಾಗಿ ಮಾಡಬೇಕೆಂಬ ಸಿದ್ಧಾಂತಕ್ಕೆ ಅವರು ಕಟ್ಟುಬಿದ್ದಿದ್ದರು. ಇತ್ತೀಚಿನ ಚುನಾವಣೆಗಳ ಕಾಲದಲ್ಲೂ ಕೂಡ ಇದನ್ನೇ ಅವರು ಜನರಿಗೆ ಸಾರಿ ಘೋಷಣೆ ಮಾಡಿ ಈ ದಿವಸ ಒಬ್ಬರಿಗೊಂದು ಇನ್ನೊಬ್ಬರಿಗೊಂದನ್ನು ಮಾಡಲು ಹೊರಟಿದ್ದಾರೆ. ಈ ಮಸೂದೆಯಿಂದ ಕೆಲವರಿಗೆ ಅನ್ಯಾಯವಾಗುತ್ತದೆ. ಒಂದು ಸಮಗ್ರ ಭೂಸುಧಾರಣಾ ಮಸೂದೆಯನ್ನು ತಂದು ಗೇಣೀದಾರರಿಗೆ ಅನುಕೂಲ ಮಾಡತಕ್ಕ ದೆಶೆಯಲ್ಲಿ ಈ ಸರ್ಕಾರದವರು ವಿಫಲರಾಗಿದ್ದಾರೆ. ಕೆಲವರು ಹಿಂದಿನಿಂದ ಯಾವ ರೀತಿ ಗೇಣಿಕೊಡುತ್ತಿದ್ದರೋ ಇನ್ನು ಮುಂದಕ್ಕೂ ಹಾಗೇ ಅವರು ಗೇಣೀದಾರರಾಗೇ ಮುಂದುವರಿಯಬೇಕೆಂಬುದು ಸರ್ಕಾರದವರ ಆಸೆ ಇದ್ದಂತೆ ಕಾಣುತ್ತಿದೆ. ಅವರು ಹಾಗೇ ದಾರಿದ್ರ್ಯದಲ್ಲೇ ಇರಲಿ ಎನ್ನುವುದು ಈ ಸರ್ಕಾರದವರ ನೀತಿ. ಇದನ್ನೆಲ್ಲಾ ನೋಡಿದರೆ ಇವರ ನಿಜವಾದ ನಿಲುವು ಅಥವಾ ಧೋರಣೆಯೇನು ಎಂಬುದೇ ಗೊತ್ತಾಗುತ್ತಿಲ್ಲ. ಗೇಣಿ ಪದ್ಧತಿ ಇರಬೇಕೋ ಅಥವಾ ಇದು ರದ್ದಾಗಬೇಕೋ ಯಾವುದೂ ಇವರ ವರ್ತನೆಯಿಂದ ಗೊತ್ತಾಗುತ್ತಿಲ್ಲ. ಈ ಮಸೂದೆಯಲ್ಲಿ ಖಾಯಂ ಗೇಣಿದಾರರಲ್ಲದವರಿಗೆ ಆಕ್ಯೂಪೆನ್ಸಿ ರೈಟನ್ನು ಕೊಡುವುದಕ್ಕೆ ಯಾವ ಅವಕಾಶವನ್ನೂ ಮಾಡಿಲ್ಲ. ಒಂದು ವರ್ಗದ ಗೇಣೀದಾರರಿಗೆ ಅನ್ವಯಿಸಿ ಇನ್ನೊಂದು ವರ್ಗದ ಗೇಣೀದಾರರಿಗೆ ಇದನ್ನು ಅನ್ವಯ ಮಾಡುವುದಕ್ಕೆ ಕೈ ಬಿಟ್ಟಿದ್ದಾರೆ. ಅಂದಾಗ ಈ ಸರ್ಕಾರಕ್ಕೆ ಪ್ರಾಮಾಣಿಕವಾಗಿಯೂ ಗೇಣಿದಾರರಿಗೆ ಅನುಕೂಲ ಮಾಡಬೇಕೆಂಬ ಇರಾದೆ ಇವರಿಗೆ ಇದೆಯೇ ! ಹಿಂದೆ ಎರಡು ಇನಾಂ ರದ್ದಿಯಾತಿ ಕಾನೂನುಗಳನ್ನು ತಂದಾಗಲೂ ಕೂಡ ಸರಿಯಾದ ಪ್ರತಿಫಲ ದೊರೆಯಲಿಲ್ಲ. ಈಗ ಈ ಕಾನೂನಿಂದಲೂ ಕೂಡ ಹಾಗೆಯೇ ಆಗುವುದು. ಕಾನೂನು ತರುವುದಕ್ಕೆ ಮುಂಚೆ ಒಂದು ಕೆಲಸ ಮಾಡಬೇಕಾಗಿತ್ತು. ಈಗ ಹೈದರಾಬಾದು ಮತ್ತು ಮುಂಬಯಿ ಪ್ರದೇಶಗಳಲ್ಲೇನು ಇನಾಂ ಜಮೀನಿದೆ ಅದನ್ನೂ ಯಾರು ಸಾಗುವಳಿ ಮಾಡುತ್ತಿದ್ದಾರೆ ಅವರ ಹೆಸರಿನಲ್ಲಿ ಪಹಣಿ ಇದೆಯೇ, ಅವರ ಹಕ್ಕಿನ ಬಗ್ಗೆ ದಾಖಲೆ ಇದೆಯೇ ಅವರು ಜಮೀನನ್ನು ಸಾಗುವಳಿ ಮಾಡುತ್ತಿರುವ ವಿಚಾರದಲ್ಲಿ ಅದನ್ನು ತೋರಿಸಲು ದಾಖಲೆ ಇದೆಯೇ ಎಂಬುದನ್ನು ಪೂರ್ಣವಾಗಿ ಪರಿಶೀಲಿಸಬೇಕಾಗಿತ್ತು. ಈ ಕಾನೂನು ಜಾರಿಗೆ ಬಂದರೆ ಗೇಣೀದಾರರಿಗೆ ಮಾಲೀಕತ್ವ ಸಿಕ್ಕು

(ಶ್ರೀ ಕಾಗೋಡು ತಿಮ್ಮಪ್ಪ)

ವುದಿಲ್ಲ. ಗೇಣೀದಾರರು ಬಡವರು, ಅವರಿಗೆ ಬುದ್ಧಿ ಸಾಲದು. ಗೇಣೀ ಕೊಟ್ಟಿದ್ದಕ್ಕೆ ಅವರು ರಸೀದಿ ತೆಗೆದುಕೊಳ್ಳುವುದಿಲ್ಲ. ಕರಾರು ಬರೆಸಿ ಇಟ್ಟುಕೊಳ್ಳುವುದಿಲ್ಲ. ಆದುದರಿಂದ ಎಷ್ಟು ವರ್ಷಗಳಿಂದ ಗೇಣೀದಾರರಾಗಿದ್ದರೂ ಕೂಡ ಗೇಣಿದಾರ ಎಂದು ತೋರಿಸಲು ದಾಖಲೆ ಇಲ್ಲದಿರುವುದರಿಂದ ಇಂಥ ಕಾನೂನು ಬಂದರೂ ಸಹ ಕಾನೂನಿನ ಪ್ರಕಾರ ಹಕ್ಕನ್ನು ರೂಢಿಸಿಕೊಳ್ಳಲು, ಮಾಲಿಕನಾಗಲು ಸಾಧ್ಯವಾಗುತ್ತಿಲ್ಲ. ಇದು ಸ್ವತಃ ಕಂಡು ಹೇಳುತ್ತಿರುವ ವಿಚಾರ. ವಿದ್ಯಾ ಮಂತ್ರಿಗಳಾದ ಶ್ರೀ ಬದರಿನಾರಾಯಣರವರು ಕೂಡ ಇನಾಂದಾರರಾಗಿದ್ದರು, ಅವರ ಕೈಕೆಳಗೆ ನೂರಾರು ರೈತರು ಜಮೀನುಮಾಡುತ್ತಿದ್ದರು. ಅವರ ಇನಾಂ ರದ್ದಾದಾಗ ಅವರ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದ ನೂರಾರು ರೈತರಿಗೆ ಹಕ್ಕು ದೊರೆಯಲಿಲ್ಲ. ಇನಾಂದಾರರೇ ಮಾಲೀಕರಾಗಿದ್ದಾರೆ ಭೂಸುಧಾರಣೆ ಕಾನೂನಿನ ಪ್ರಕಾರ ಗೇಣಿದಾರರಿಗೆ ಹಕ್ಕು ದೊರೆಯಬೇಕಾಗಿದೆ. ಮುಖ್ಯವಾಗಿ ಗೇಣಿದಾರರನ್ನು ರಕ್ಷಣೆ ಮಾಡಲು ಇನಾಂ ರದ್ದುಮಾಡಬೇಕು. ಜಮೀನನ್ನು ಸಾಗುವಳಿ ಮಾಡುವವರಿಗೆ, ಗೇಣಿದಾರರಿಗೆ ರಕ್ಷಣೆ ಕೊಡಬೇಕು, ಅವರಿಗೆ ಜಮೀನು ಮಾಲಿಕತ್ವ ಸಿಕ್ಕುವಂತೆ ಮಾಡಬೇಕು ಎಂಬ ಗುರಿ ಏನಿದೆ ಅದು ಸಾಧನೆ ಆಗಲು ಈಗ ಅವಕಾಶವಿಲ್ಲದಂತಾಗಿದೆ. ಗುರಿ ಮುಟ್ಟಬೇಕಾದರೆ ಮೊದಲು ಪ್ರಾರಂಭದ ಕೆಲಸ ಮಾಡಬೇಕು. ಆ ಕೆಲಸವನ್ನು ಸರಕಾರ ಹಿಂದೆ ಇಂಥ ಕಾನೂನು ತಂದಾಗಲೂ ಮಾಡಿಲ್ಲ. ಆದುದರಿಂದ ಯಾವ ಉದ್ದೇಶದಿಂದ ಕಾನೂನನ್ನು ಮಾಡಲಾಗುವುದೋ ಆ ಉದ್ದೇಶ ಸಫಲವಾಗುವುದಿಲ್ಲ, ಗೇಣಿದಾರರಿಗೆ ಪ್ರಯೋಜನವಾಗುವುದಿಲ್ಲ ಎಂಬುದು ಅನುಭವದ ವಿಷಯ. ಆದುದರಿಂದ ಮಾನ್ಯ ಕಂದಾಯ ಮಂತ್ರಿಗಳಿಗೆ ಹೇಳುವುದು ಈ ಕಾನೂನನ್ನು ತರುವುದಕ್ಕೆ 6 ತಿಂಗಳು ತಡವಾದರೂ ಚಿಂತೆಯಿಲ್ಲ, ಜಮೀನನ್ನು ಯಾರು ಸಾಗುವಳಿ ಮಾಡುತ್ತಿದ್ದಾರೆ, ಅವರಿಗೆ ಸಾಕಾದಷ್ಟು ದಾಖಲೆಯಿದೆಯೇ, ಎಷ್ಟು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ ಎಂಬುದನ್ನು ತಿಳಿಸಲು ಕಾಗದಪತ್ರವಿದೆಯೇ ಎಂಬುದನ್ನು ಪರಿಶೀಲಿಸಿ ಸ್ಪಷ್ಟಪಡಿಸಿ ಇರುವ ದಾಖಲೆ ಒದಗಿಸಿ ಕಾನೂನು ತಂದರೆ ಸಹಾಯವಾಗುವುದು. ಇಲ್ಲದಿದ್ದರೆ ಈ ಸಭೆಯಲ್ಲಿ ಚರ್ಚೆಮಾಡಿ ಕಾಲ ಕಳೆದಂತಾಗುವುದು, ಅದರಿಂದ ಉದ್ದೇಶ ಸಫಲವಾಗುವುದಿಲ್ಲ. ನಾನು ವಕೀಲಿ ವೃತ್ತಿ ಮಾಡುವುದರಿಂದ ಮತ್ತು ಇನಂ ರೈತರ ಸಂಪರ್ಕ ಪಡೆದು ವಿಚಾರ ತಿಳಿದಿರುವುದರಿಂದ ಹೇಳುತ್ತಿದ್ದೇನೆ. ನೂರಾರು ವರ್ಷಗಳಿಂದ ಸಾಗುವಳಿ ಮಾಡಿ ಆಕ್ಯುಪೆನ್ಸಿ ರೈಟ್ ದೊರೆಯದಿರುವವರು ಅನೇಕರಿದ್ದಾರೆ. ಅವರಿಗೆ ದಾಖಲೆ ಇಟ್ಟುಕೊಳ್ಳಲು ಶಕ್ತಿಯಿಲ್ಲ. ಅವರು ತಮ್ಮ ಹಕ್ಕನ್ನು ಕಳೆದುಕೊಂಡು ಇಂದು ಚಾಲಗೇಣಿ ರೈತರಾಗಿರುತ್ತಾರೆ. ಇನಾಂದಾರರಿಗೆ ಒಂದು ಅವಕಾಶವಿದೆ, ಯಾವ ಗೇಣಿದಾರನಿಗೆ ಎಷ್ಟು ಭೂಮಿಯನ್ನು ಸಾಗುವಳಿಗೆ ಕೊಟ್ಟಿದೆ ಎಂಬ ದಾಖಲೆ ಇನಾಂದಾರರು ಇಡಬೇಕು. ಅವರು 14 ಮತ್ತು 15ನೆ ನಂಬರ್ ಅಕೌಂಟ್ ಇಡಬೇಕು. ಆದರೆ ಅದನ್ನು ಸಕಾಲದಲ್ಲ ಅವರು ಬರೆದು ಕಛೇರಿಗೆ ಕೊಡುತ್ತಿಲ್ಲ. ಕಾನೂನು ಜಾರಿಗೆ ಬಂದಮೇಲೆ ಒಂದು ದಿವಸ ಬರೆಯುವರು. 1955ರಲ್ಲಿ ರಾಮಪ್ಪ ಸಾಗುಮಾಡುತ್ತಿದ್ದ ಎಂದು ಬರೆದರೆ 56ರಲ್ಲಿ ಭೀಮಣ್ಣ ಸಾಗುವಳಿ ಮಾಡುತ್ತಿರುವುದಾಗಿ ಬರೆಯುವರು. ಮತ್ತೆ 57ರಲ್ಲಿ ಮತ್ತೊಬ್ಬರ ಹೆಸರು ಬರೆಯುವರು. ಸಾಗುವಳಿ ಮಾಡುವವರು ಒಬ್ಬರೇ ಆದರೂ ಪ್ರತಿ ವರ್ಷ ಹೆಸರು ಬದಲಾಯಿಸುವರು. ಸಾರೋದ್ಧಾರವಾಗಿ 10–20 ವರ್ಷ ಸಾಗುವಳಿ ಮಾಡುತ್ತಿದ್ದರೂ ಲೆಕ್ಕದ ಪುಸ್ತಕದಲ್ಲಿ ಪ್ರತಿ ವರ್ಷ ಒಬ್ಬೊಬ್ಬರು ಹಂಗಾಮಿಯಾಗಿ ಮಾಡುವರು ಎಂದು ತೋರಿಸಿ ಗೇಣಿದಾರರ ಹಕ್ಕನ್ನು ಮೊಟಕು ಮಾಡುವ ಕೆಲಸ ಮಾಡುತ್ತಿದ್ದಾರೆ. ಇಂಥ ಪ್ರಸಂಗವಿದೆ. ಅನುಭವದಿಂದ ಇದನ್ನು ಹೇಳುವುದು. ಆದುದರಿಂದ ಈ ಕಾನೂನು ಜಾರಿಗೆ ಬರುವುದು ನಿಧಾನವಾದರೂ ಚಿಂತೆಯಿಲ್ಲ ಸಾಗುವಳಿ ಮಾಡುವವರಿಗೆ ಬೇಕಾದ ದಾಖಲೆ ದೊರೆಯುವಂತೆ ಮಾಡಿ. ಗ್ರಾಮ ಲೆಕ್ಕಾಧಿಕಾರಿಗಳು ಗೇಣಿ ರೈತರಿಗೆ ಅಜಾತ ಶತ್ರುವಾಗಿದ್ದಾರೆ, ಅವರು ದಾಖಲೆ ಬರೆಯುವಾಗ ಗೇಣಿ ರೈತರ ಹೆಸರನ್ನು ನಮೂದು ಮಾಡುವುದಿಲ್ಲ. ಹಿಂದಿನ ಶಾನುಭೋಗರು ಮತ್ತು ಈ ದಿವಸ ಇರುವ ಗ್ರಾಮ ಲೆಕ್ಕಾಧಿಕಾರಿಗಳು ಇವರ ಕೈಗೆ ಗೇಣಿದಾರರು ಸಿಕ್ಕಿ ನರಳುತ್ತಿದ್ದಾರೆ. ಗೇಣಿದಾರರು ಸಾಗುವಳಿ ಮಾಡುತ್ತಿದ್ದರೂ ಮಾಡುತ್ತಿಲ್ಲವೆಂದು ನಮೂದು ಮಾಡುವರು. ಸೊರಬ ತಾಲ್ಲೂಕಿನಲ್ಲಿ ಪಹಣಿ ತಿದ್ದುಪಡಿ ಮಾಡಿದರು. ಇದನ್ನು ಕಂದಾಯ ಮಂತ್ರಿಗಳಿಗೆ ಮತ್ತು ವಿದ್ಯಾ ಮಂತ್ರಿಗಳಿಗೆ, ಸರಕಾರಕ್ಕೆ ತಿಳಿಸಿ ಲೋಪವನ್ನು ಸರಿಪಡಿಸುವಂತೆ ಬೇಡಿಕೊಂಡರೂ ಏನೂ ಆಗಲಿಲ್ಲ. ಬಡವರಿಗೆ ತೊಂದರೆಯಾದುದರಿಂದ ಸತ್ಯಾಗ್ರಹ ಮಾಡಿದರೂ ಪ್ರಯೋಜನವಾಗಲಿಲ್ಲ. ಗೇಣಿದಾರರಿಗೆ ಸರಿಯಾದ ದಾಖಲೆ ದೊರೆಯುವಂತೆ ನೋಡಿಕೊಳ್ಳದಿದ್ದರೆ ಅವರು ಉಳಿಯುವುದಿಲ್ಲ. ಭೂಸುಧಾರಣೆ ಕಾನೂನು ಬರುವುದೆಂದು ಹಂತಹಂತವಾಗಿ ಪಹಣಿಯನ್ನು ಬದಲಾಯಿಸಿ ಹೆಸರುಗಳನ್ನು ಬದಲಾಯಿಸಿದ್ದಾರೆ. ಆದುದರಿಂದ ಹೋರಾಟ ಮಾಡಬೇಕಾಗಿದೆ. ಇಂಥ ಪ್ರಸಂಗ

ಬಂದಿದೆ. ಸರಕಾರಕ್ಕೆ ಈಗ ಸೂಚನೆ ಕೊಟ್ಟಿದ್ದೇವೆ ಗ್ರಾಮಾಧಿಕಾರಿಗಳಿಂದ ಮತ್ತು ಹಳೆಯ ಶಾನುಭೋಗರಿಂದ ಇಂಥ ಪರಿಸ್ಥಿತಿ ಬಂದಿದೆ. ಹೀಗಿರುವಾಗ ರೈತರಿಗೆ ಭೂಮಿಯ ಹಕ್ಕನ್ನು ಕೊಡಲು ಹೊರಟಿದ್ದಾರೆ. ಸಾಗುವಳಿದಾರರಿಗೆ ದಾಖಲೆ ಏನೂ ಇಲ್ಲ, ರಕ್ಷಣೆ ಇಲ್ಲ. ಇದರ ಬಗ್ಗೆ ಹಿಂದಿನಿಂದಲೂ ಒತ್ತಾಯ ಮಾಡಿದ್ದೇವೆ. ಎಲ್ಲಿ ಗೇಣಿ ರೈತರು ಸಂಘಟಿತರಾಗಿರುವರೋ ಅಂಥ ಕಡೆ ಅಲ್ಪಸ್ವಲ್ಪ ಅವರಿಗೆ ಅನುಕೂಲವಾಗಿದೆ. ಬೇರೆ ಕಡೆ ಅವರ ಸರ್ವನಾಶವಾಗಿದೆ. ಮೊನ್ನೆ ವಿಚಾರ ಸಂಕೀರ್ಣವಾದಾಗ ಒಬ್ಬನಿಗೆ 1,500 ಎಕರೆ ಇದೆ, ಅದರಲ್ಲಿ 1,300 ಎಕರೆ ಗೇಣಿಗೆ ಕೊಟ್ಟಿದ್ದಾನೆ, ಹೀಗಿದ್ದರೂ ಗೇಣಿ ರೈತರ ಬಗ್ಗೆ ಪಹಣಿಯಲ್ಲಿ ದಾಖಲೆಯಿಲ್ಲ ಎಂಬುದು ಬೆಳಕಿಗೆ ಬಂತು. ಆದುದರಿಂದ ಭೂಸುಧಾರಣಾ ಕಾನೂನನ್ನು ತಂದರೂ ಗೇಣಿದಾರರಲ್ಲಿ ಒಬ್ಬರಿಗೂ ಜಮೀನು ಸಿಕ್ಕುವುದಿಲ್ಲ. ನಾಳೆ ಕಾನೂನು ತಂದರೆ ಯಾರಿಗೆ ಜಮೀನು ಕೊಡಬೇಕೆಂಬ ಪ್ರಶ್ನೆ ಬರುವುದು. ದಾಖಲೆ ಸರಿಯಾಗಿಲ್ಲದಿರುವುದರಿಂದ ನಾಳೆ ಜಮೀನಿಗೆ ಬೇರೆಯವರು ಅರ್ಜಿ ಹಾಕಿ ಯಾರೋ ಪ್ರಭಾವಶಾಲಿಗಳು ಜಮೀನನ್ನು ಪಡೆಯಲು ಅವಕಾಶವಿದೆ. ಇಂಥ ಪರಿಸ್ಥಿತಿ ಇದೆ. ಇಂದು ಪ್ರಭಾವಶಾಲಿಗಳು ಚುನಾವಣೆಯಲ್ಲಿ ಗೆಲ್ಲುವರು. ಅವರಿಗೆ ಸಮಾಜದಲ್ಲಿ ವ್ಯಕ್ತಿತ್ವವಿದೆ. ಕಾನೂನು ರೀತಿಯಲ್ಲಿ ಅವರು ಬಡವರಂತೆ ತೋರಿಸಿಕೊಳ್ಳುವರು. ಅಲ್ಲದೆ ಜಮೀನುದಾರರು ಪ್ರಭಾವ ಶಾಲಿಗಳು ಮತ್ತು ಪ್ರತಿಷ್ಠಾವಂತರು. ಗೇಣಿದಾರರು ಜಾಗೃತರಾಗಿರುವ ಕಡೆ ಮಾತ್ರ ಹಕ್ಕು ಬಾಧ್ಯತೆಗಳನ್ನು ಸ್ವಲ್ಪ ರಕ್ಷಣೆ ಮಾಡಿಕೊಂಡಿದ್ದಾರೆ.

ಆದರೆ ನಾನು ತಿಳಿದಿರತಕ್ಕಂಥ ಪ್ರದೇಶದಲ್ಲಿ ಅವರಿಗೆ ರಕ್ಷಣೆ ಇಲ್ಲ. ಅವರು ಜಮೀನ್ದಾರರ ಮರ್ಜಿಯಲ್ಲಿ ಅವರ ಅಂತಃಕರಣದಲ್ಲಿರುವಂತೆ ನಡೆದುಕೊಂಡು ಹೋಗಬೇಕು. ಇಲ್ಲದಿದ್ದರೆ ಅವರು ಉಳಿಯುವುದಿಲ್ಲ. ಏತಕ್ಕೆಂದರೆ ಅವರಲ್ಲಿ ದಾಖಲೆಗಳು ಏನೂ ಇಲ್ಲ. ನಮ್ಮ ರಾಜ್ಯದಲ್ಲಿ ಈ ಪರಿಸ್ಥಿತಿ ಇದೆ. ನೀವು ಭೂಸುಧಾರಣೆ ಕಾನೂನು ತಂದರೂ ಕೂಡ 100ಕ್ಕೆ 20 ಜನ ಪ್ರಯೋಜನ ಪಡೆಯುತ್ತಾರೆ. ಆದುದರಿಂದ ಒಂದು ಕಾನೂನು ತರುವಾಗ ಕಾನೂನಿನ ಪ್ರಯೋಜನವನ್ನು ಪೂರ್ಣವಾಗಿ ಜನರಿಗೆ ತಿಳಿಸಬೇಕು. ಇದರ ಬಗ್ಗೆ ಸರ್ಕಾರದವರು ಆಲೋಚನೆ ಮಾಡಬೇಕು. ಕಂದಾಯ ಮಂತ್ರಿಗಳು ಈ ಮಸೂದೆಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಇನಾಂಗೆ ಸಂಬಂಧಪಟ್ಟ ವಿಷಯಗಳನ್ನು ಸ್ವಲ್ಪ ದೀರ್ಘವಾಗಿ ಆಲೋಚನೆ ಮಾಡಿ ತರಬೇಕಾಗಿತ್ತು. ಇದರಲ್ಲಿ ಸಾಕಷ್ಟು ಪರಿಶ್ರಮ ಇಲ್ಲವೆಂದು ಗೊತ್ತಾಗಿದೆ. ಅವರು ಕಾನೂನನ್ನು ತರುವಾಗ ಇಲಾಖಾ ಕಾರ್ಯದರ್ಶಿಗಳು ಬರೆಯಿರಿ ಎಂದು ಹೇಳುತ್ತಾರೆ ಅವರು ಬರೆಯುತ್ತಾರೆ. ಕಾನೂನಿನಲ್ಲಿರ ತಕ್ಕಂಥಾ ಪ್ರತಿಯೊಂದು ಸೆಕ್ಷನ್‌ನ ಅಂಶವೂ ಕೂಡ ಹಿಂದೆ ಇರತಕ್ಕಂಥಾ ಕಾಪಿಯನ್ನು ಮಾಡಿದ್ದಾರೆಯೇ ವಿನಃ ಅದರಿಂದ ಪ್ರಗತಿಪರವಾಗಿ, ಕ್ರಾಂತಿಕಾರಕವಾಗಿ ಇನಾಂ ಕಾನೂನಿನ ರದ್ದಿಯಾತಿ ಬಗ್ಗೆ ಗೇಣಿದಾರನಿಗೆ ಸಮಗ್ರವಾಗಿ ಒದಗಿಸುವ ಪ್ರಯೋಜನ ಬರಲಿಲ್ಲ. ಇದು ಒಂದು ನಕಲೀ ಕಾನೂನು ಎಂದು ಹೇಳಬೇಕಾಗುತ್ತದೆ. ಉಳುವವನೇ ಭೂಮಾಲೀಕನೆಂದು ಮಾಡಿದ್ದರೆ ನಿಜ ವಾಗಿಯೂ ಪ್ರಶಂಸೆ ಮಾಡಬಹುದಾಗಿತ್ತು. ಆದುದರಿಂದ ನಾನು ಸರ್ಕಾರವನ್ನು ಕೇಳುವುದು ಏನೆಂದರೆ ಭೂಮಿಯ ಪ್ರಶ್ನೆಯನ್ನು ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕು ಎಂದು. ಗೇಣಿದಾರನ ರಕ್ಷಣೆ ಇನ್ನೂ ಆಗಿಲ್ಲ. 1952ನೇ ಇಸವಿಯಲ್ಲಿ ಗೇಣಿದಾರರ ಕಾನೂನು ಪ್ರಾರಂಭ ವಾಯಿತು. ಶ್ರೀಮಾನ್ ಕಡಿದಾಳ್ ಮಂಜಪ್ಪನವರ ನೇತೃತ್ವದಲ್ಲಿ ಆದ ಈ ಕಾನೂನು ಸುಮಾರು 20 ವರ್ಷಗಳಿಂದಲೂ ಗೇಣಿದಾರರ ರಕ್ಷಣೆ ಇನ್ನು ಆಗಿಲ್ಲ. ರೈತನಿಗೆ ತನ್ನ ಹಕ್ಕುಗಳಿಗೆ ಏನು ರಕ್ಷಣೆ ಮಾಡಬೇಕೋ ಅದನ್ನು ಇದುವರೆಗೂ ಮಾಡಿಕೊಟ್ಟಿಲ್ಲ. ಭೂಮಾಲೀಕರು ಇನಾಂದಾರರು ಪ್ರಭಾವಶಾಲಿಗಳಾಗಿರುವುದರಿಂದ ಅವರು ಜಾಗ್ರತೆಯಾಗಿ ತಮ್ಮ ತಮ್ಮ ಜಮೀನುಗಳನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಸಂಬಂಧಪಟ್ಟ ದಾಖಲೆಗಳಲ್ಲಿ ತಿದ್ದುಪಡಿ ಮಾಡುವುದರ ಮುಖಾಂತರ ವಾಗಿಯಾಗಲಿ ಪಹಣಿ ಬದಲಾವಣೆ ಮಾಡುವುದರ ಮುಖಾಂತರವಾಗಲಿ ತಮ್ಮ ಹಕ್ಕುಗಳನ್ನು ರಕ್ಷಿಸಿ ಕೊಳ್ಳುವುದಕ್ಕೆ ಏನೇನು ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕೋ ಮಾಡಿಕೊಂಡಿದ್ದಾರೆ. ಇಂಥಾ ಭಯಾನಕ ಪರಿಸ್ಥಿತಿ ನಮ್ಮ ಮುಂದೆ ಇದೆ. ಇಂಥ ಮುಗ್ಧ ರೈತನಿಗೆ ಬರೀ ಕಾನೂನಿನಿಂದ ಏನೂ ಪ್ರಯೋಜನವಿಲ್ಲ. ಹುಲಿ ಎದುರಿಗೆ ಗೋವನ್ನು ಕಳುಹಿಸಿದ ಹಾಗೆ ಆಗಿದೆ. ಈ ಭಯಂಕರವಾದ ಹುಲಿಯ ಎದುರಿನಲ್ಲಿ ಗೋವಿನ ರಕ್ಷಣೆ ಮಾಡತಕ್ಕಂಥ ಜವಾಬ್ದಾರಿ ಸರ್ಕಾರದ ಕೈಯ್ಯಲ್ಲಿ ಇದೆ. ಈ ರೀತಿಯಾಗಿ ಗೇಣಿದಾರರು ಪಶುವಿಗೆ ಸಮನಾಗಿರುವುದರಿಂದ ಅವರಿಗೆ ರಕ್ಷಣೆ ಕೊಡಬೇಕು. ಕಾನೂನಿನಲ್ಲಿ ಪ್ರಗತಿಪರವಾದ ಕ್ರಾಂತಿಕಾರಕವಾದ ಮಾರ್ಗವನ್ನು ಅನುಸರಿಸಿದರೆ ಮಾತ್ರ ರೈತನ ರಕ್ಷಣೆ ಮಾಡಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಹೇಳುವುದು ಒಂದು ಮಾಡುವುದು ಇನ್ನೊಂದು ಮಾಡಿದಂತಾಗುತ್ತದೆ. ಹೇಳಿದ್ದನ್ನು ಕಾರ್ಯರೂಪಕ್ಕೆ ತನ್ನಿ. ಮನಸ್ಸಿನಲ್ಲಿ ಮಾಡುವುದು ಒಂದು ಹೇಳುವುದು ಇನ್ನೊಂದು. ಇದನ್ನು ಬಿಟ್ಟು ತ್ರಿಕರಣಶುದ್ಧಿಯಿಂದ ನಡೆದುಕೊಳ್ಳಿ. ಇಲ್ಲದೇ

(ಶ್ರೀ ಕಾಗೋಡು ತಿಮ್ಮಪ್ಪ)

ಹೋದರೆ ಅಧಿಕಾರವನ್ನು ಕಳೆದುಕೊಳ್ಳುತ್ತೀರಿ. ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ದೇವರ ಸಮಾನರೆಂದು ಪೂಜಿಸಲ್ಪಡುತ್ತಿದ್ದರು. ಈಗ ಅದೇ ಜನರು ಅವರ ಬಗ್ಗೆ ಹೇಸಿಗೆ ಪಡುತ್ತಾರೆ. ಅಂಥಾ ಪರಿಸ್ಥಿತಿ ಬಂದಿದೆ. ಎರಡು ವರ್ಗದ ಜನರನ್ನು ನಾವು ಸ್ವತಃ ನೋಡಿ ತಿಳಿದುಕೊಂಡಿದ್ದೇವೆ. ಹೀಗಿರುವಾಗ ಅಧಿಕಾರ ಇದ್ದಾಗ ಅವರನ್ನು ಪೂಜಿಸುವುದು ಅಧಿಕಾರ ಕಳೆದುಕೊಂಡಾಗ ನಿಕೃಷ್ಟವಾಗಿ ಕಾಣುವುದು ಈ ಸಮಾಜದಲ್ಲಿರತಕ್ಕಂಥ ದೋಷ. ಈಗ ನಿಮಗೆ ಒಂದು ಅವಕಾಶ ದೊರೆತಿದೆ. ಆದುದರಿಂದ ಈಗ ನೀವು ಪ್ರಾಮಾಣಿಕತೆಯಿಂದ ಹೇಳ ತಕ್ಕಂಥಾದನ್ನು ಕಾರ್ಯರೂಪಕ್ಕೆ ತರುವುದಾದರೆ, ಅಷ್ಟೇ ಪ್ರಾಮಾಣಿಕತೆ, ಅಷ್ಟೇ ಕ್ರಾಂತಿಕಾರಕ ವಾಗಿ ನಿಮ್ಮ ಕಾನೂನು ಇರಬೇಕು. ಇಲ್ಲದೇ ಹೋದರೆ ಅದು ಏನೂ ಪ್ರಯೋಜನವಾಗುವುದಿಲ್ಲ. ಹಿಂದೆ ಇದ್ದವರು ಎಷ್ಟೋ ಕಾನೂನು ಮಾಡಿದ್ದಾರೆ. ಯಾವ ಸಮಸ್ಯೆಯೂ ಕೂಡ ಬಗೆಹರಿಸಲಿಲ್ಲ. ಯಾರೂ ಕೂಡ ರೈತನಿಗೆ ರಕ್ಷಣೆಯನ್ನು ಒದಗಿಸಿಕೊಡುವುದಕ್ಕಾಗಲಿಲ್ಲ. ಆದುದರಿಂದ ಕಾನೂನು ಮಾಡುವುದಾದರೆ ಈ ಒಂದು ಸಮಸ್ಯೆಗೆ ಸಮಗ್ರವಾಗಿ ಅಮೂಲಾಗ್ರವಾದಂಥ ಪರಿಹಾರವನ್ನು ಕಂಡುಕೊಳ್ಳುವುದೇ ಈ ಕಾನೂನಿನ ಮೂಲ ಉದ್ದೇಶವಾಗಿರಬೇಕು. ಹಿಂದೆ ತಂದಿರತಕ್ಕ ಕಾನೂನುಗಳನ್ನು ನೋಡಿದ್ದೇವೆ. ಯಾವುದೂ ಕಾರ್ಯಗತವಾಗಲಿಲ್ಲ. 1954ನೇ ಇಸವಿಯಲ್ಲಿ ಇನಾಂ ರದ್ದಿಯಾತಿ ಕಾನೂನು ಬಂತು. ಈವೊತ್ತಿನವರೆಗೂ ಅದು ಸಂಪೂರ್ಣವಾಗಿ ಕಾರ್ಯಗತ ವಾಗಲಿಲ್ಲ. ಇದಕ್ಕೆ ಯಾರು ಜವಾಬ್ದಾರರು ? ಮೈಸೂರು ರಿಲಿಜಿಯಸ್ ಅಂಡ್ ಛಾರಿಟಬಲ್ ಇನಾಂ ಅಬಾಲಿಷನ್ ಆಕ್ಟ್ 1956 ರಲ್ಲೇ ಜಾರಿಗೆ ಬಂತು ಅದನ್ನು ಇನ್ನೂ ಜಾರಿಗೆ ತಂದಿಲ್ಲ. ದೇವಸ್ಥಾನಕ್ಕೆ ಸಂಬಂಧಪಟ್ಟಂತೆ $1\frac{1}{2}$ ವರ್ಷದ ಹಿಂದೆ ಡೆಪ್ಯೂಟಿ ಕಮಿಷನರ್‌ರವರಿಗೆ ಇದರ ಬಗ್ಗೆ ವಿಚಾರಣೆ ಮಾಡಿ ಎಂದು ಅರ್ಜಿ ಹಾಕಿದರೆ ಈವೊತ್ತಿನವರೆಗೂ ವಿಚಾರಣೆ ಆಗಿಲ್ಲ. ಸಾವಿರಾರು ಅರ್ಜಿಗಳು ಸ್ಪೆಷಲ್ ಡೆಪ್ಯೂಟಿ ಕಮೀಷನರ್ ಫಾರ್ ಇನಾಂ ಅಬಾಲಿಷನ್ ಅವರಿಗೆ ಬಂದಿವೆ. ಇವನ್ನೆಲ್ಲಾ ಯಾವಾಗ ವಿಚಾರಣೆ ಮಾಡುತ್ತಾರೆ. ಇದನ್ನು ಯಾವಾಗ ಬಗೆಹರಿಸುತ್ತೀರಿ ? ಇನಾಂದಾರರು, ಜಮೀನ್ದಾರರು ಗೇಣಿದಾರರನ್ನು ಕೋರ್ಟಿಗೆ ಹತ್ತಿಸುತ್ತಾ ಇದ್ದಾರೆ. ನೀವು ಇನಾಂ ರದ್ದಿಯಾತಿ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ತಾಸೀಲ್ದಾರರೇ ಹೋಗಿ ದೇವಸ್ಥಾನಕ್ಕೆ ಸಂಬಂಧಪಟ್ಟ ಜಮೀನುಗಳು ಮುಂದೆ ಇರಲಾರದು ಎಂದು ಹೇಳುತ್ತಿದ್ದಾರೆ. ಮುಂದಿನ ಭೂಸುಧಾರಣೆ ಏನು ಎನ್ನುವುದೇ ಗೊತ್ತಿಲ್ಲ. 1955ನೇ ಇಸವಿಯಲ್ಲಿ ಬಂದಿರತಕ್ಕಂಥ ಕಾನೂನು ಇವೊತ್ತಿನವರೆಗೂ ಪೂರ್ಣವಾಗಿ ಕಾರ್ಯಗತವಾಗಿಲ್ಲ. ಅರ್ಧಂಬರ್ಧವಾಗಿದೆ. 20 ವರ್ಷವಾದರೂ ಕೂಡ ಇನ್ನೂ ಕಾರ್ಯಗತವಾಗಿಲ್ಲ. ಎಲ್ಲ ಭೂಮಿಗೂ ಸಂಬಂಧಪಟ್ಟಂತೆ ಒಂದೇ ಕಾನೂನು ಇರಬೇಕು. ಎಲ್ಲ ಭೂಮಿಗೂ ಮಧ್ಯವರ್ತಿ ಜನರನ್ನು ತೊಡೆದು ಹಾಕಬೇಕು. ಉಳುವವನ್ನೇ ಭೂಮಿ ಒಡೆಯನಾಗಬೇಕು. ಇದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಒಂದೇ ಒಂದು ಕಾನೂನು ಮಾಡಬೇಕು. ಆ ರೀತಿ ತಂದರೆ ದೇವಸ್ಥಾನದ ಜಮೀನುಗಳನ್ನು ಮತ್ತು ಇನಾಂ ಜಮೀನುಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ ಇಲ್ಲದೇ ಹೋದರೆ ಹೈದ್ರಾ ಬಾದ್‌ಗೆ ಒಂದು ಕಾನೂನು ಮಂಗಳೂರಿಗೆ ಒಂದು ಕಾನೂನು ತರಬೇಕಾದ ಸಂದರ್ಭ ಬರುತ್ತದೆ. ಪ್ರತಿಯೊಂದು ಭಾಗಕ್ಕೂ ಒಂದೊಂದು ಕಾನೂನು ತಂದರೆ ಸರಿಹೋಗುವುದಿಲ್ಲ. ಆದುದರಿಂದ ಎಲ್ಲ ಭೂಮಿಗೂ ಸಂಬಂಧಪಟ್ಟಂತೆ ಸಮಗ್ರವಾದ ಒಂದು ಕಾನೂನು ತರಬೇಕು, ಹೀಗಾದರೆ ರೈತನ ಉದ್ಧಾರವಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ. ನಾಳೆ ದಿವ- ನೀವು ಭೂಸುಧಾರಣೆ ಕಾನೂನು ತರುತ್ತೇವೆ ಎಂದು ಹೇಳುತ್ತಿದ್ದೀರಿ. ಪಹಣಿಯಲ್ಲಿ ಜಮೀನ್ದಾರರು ಅವರಿಗೆ ತಕ್ಕಂತೆ ಬರೆಸಿಕೊಂಡಿರುತ್ತಾರೆ. ಗೇಣಿ ರೈತರುಗಳಿಗೆ ಅವರ ಹತ್ತಿರ ದುಡ್ಡು ಇಲ್ಲದೆ ಅವನು ಏನೂ ಬರೆಸಿ ಕೊಳ್ಳುವುದಕ್ಕಾಗುವುದಿಲ್ಲ. ಈ ಕಾನೂನು ತಂದ ಮಾತ್ರಕ್ಕೆ ಗೇಣಿ ರೈತರಿಗೆ ಪೋಲೀಸರು ರಕ್ಷಣೆ ಕೊಡುವುದಿಲ್ಲ. ಅವರು ದೊಡ್ಡ ದೊಡ್ಡ ಜಮೀನ್ದಾರರ ಪ್ರಭಾವಕ್ಕೆ ಒಳಗಾಗಿರುತ್ತಾರೆ. ಗೇಣಿದಾರರ ರಕ್ಷಣೆ ಮಾಡುವುದಕ್ಕೆ ಸರ್ಕಾರ ಮುಂದಾಗುವುದಿಲ್ಲ. ಏತಕ್ಕೆಂದರೆ ಭೂ ಮಾಲೀ ಕತ್ವ ಜಮೀನ್ದಾರನ ಹೆಸರಿನಲ್ಲೇ ಇರುವುದರಿಂದ ಗೇಣಿದಾರನಿಗೆ ರಕ್ಷಣೆ ಇರುವುದಿಲ್ಲ. ಪಹಣಿ ಯಲ್ಲೂ ಜಮೀನ್ದಾರ ತನ್ನ ಹೆಸರನ್ನು ಬದಲಾವಣೆ ಮಾಡಿಕೊಳ್ಳುತ್ತಾನೆ. ಇವರು ಏತಕ್ಕೆ ಬದಲಾವಣೆ ಮಾಡಿಕೊಳ್ಳಬೇಕು ! ಪೋಲೀಸಿನವರು ಗೇಣಿದಾರರಿಗೆ ರಕ್ಷಣೆ ಕೊಡುವುದಿಲ್ಲ, ಏತಕ್ಕೆಂದರೆ ಗೇಣಿರೈತ ಇವರಿಗೆ ಏನೂ ಕೊಡುವುದಿಲ್ಲ ಎಂದು. ಆದುದರಿಂದ ಪೋಲೀಸ್ ಇಲಾಖೆ ಯವರು ಗೇಣಿ ರೈತನಿಗೆ ರಕ್ಷಣೆ ಕೊಡುವಂತೆ ನಡೆಯಬೇಕು ಎಂದು ಹೇಳುತ್ತೇನೆ.

3-00 P. M.

ಎಷ್ಟೋ ವರ್ಷದಿಂದ ಮಾಡಿಕೊಂಡು ಬಂದಿರುವ ಸೊರಬ ತಾಲ್ಲೂಕು ಮಾಗಡಿ ಗ್ರಾಮದ ಜಮೀನಿನ ಸಂಬಂಧದಲ್ಲಿ 145ನೇ ಸೆಕ್ಷನ್ ಪ್ರಕಾರ ಕೋರ್ಟಿಗೆ ಎಳೆಯುತ್ತಿದ್ದಾರೆ. ಬಿತ್ತಿರುವ ಫಸಲು ಕೊಳೆಯುತ್ತಿದೆ. ಅವನ್ನು ಉಳಿಸಿಕೊಳ್ಳುವುದಕ್ಕೆ ಸತ್ಯಾಗ್ರಹ ಮಾಡತಕ್ಕ ಪ್ರಸಂಗ ಬಂದಿದೆ. ಮೊದಲು ಗೇಣಿದಾರನಿಗೆ ರಕ್ಷಣೆಯಾಗಬೇಕು ಎಂಬ ದೃಷ್ಟಿಯಿಂದ ಇರತಕ್ಕ ಕಾಗದ ಪತ್ರಗಳನ್ನು ವ್ಯವಸ್ಥಿತವಾಗಿ ಇಟ್ಟಿದ್ದಾರೆಯೇ ಇಲ್ಲವೇ ಎನ್ನುವುದನ್ನು ಪರಿಶೀಲನೆ ಮಾಡಬೇಕು. ಕಂದಾಯ ಮಂತ್ರಿಗಳು ಇಲ್ಲಿ ಕುಳಿತುಕೊಂಡು ಆಲೋಚನೆ ಮಾಡಿದರೆ ಸಮಸ್ಯೆ ಬಗೆಹರಿಯುವುದಿಲ್ಲ. ಪ್ರತಿ ತಾಲ್ಲೂಕಿಗೆ ಹೋಗಿ, ಕುಳಿತು, ತಾಲ್ಲೂಕು ಆಫೀಸುಗಳಲ್ಲಿ ಏನಾಗಿದೆ, ಅಲ್ಲಿರುವವರು ಏನಾದರೂ ಕೆಲಸ ಮಾಡುತ್ತಾರೆಯೇ ಇಲ್ಲವೇ ಎನ್ನುವುದನ್ನು ಸ್ವತಃ ಕುಳಿತು ಪರಿಶೀಲಿಸುವುದಲ್ಲದೆ ಜನರಿಂದಲೇ ಸೇರಿರತಕ್ಕ ಕಮಿಟಿಗಳನ್ನು ಆಯಾ ಪಂಚಾಯಿತಿ ಕ್ಷೇತ್ರಗಳಲ್ಲಿ ನಡೆಸಿ, ಪಹಣಿ ದಾಖಲೆಯನ್ನು ಪ್ರಯತ್ನ ಮಾಡಬೇಕೆಂದು ದುರಸ್ತು ಮಾಡುವುದಕ್ಕೆ, ಸಮರ್ಪಕ ರೀತಿಯಲ್ಲಿ ಕಾನೂನು ಬದಲಾವಣೆ ಮಾಡುವುದಕ್ಕೆ ನಾನು ಒತ್ತಾಯ ಮಾಡುತ್ತೇನೆ. ನಾನು ಈ ಕಾನೂನನ್ನು ಸ್ವಾಗತಿಸುತ್ತೇನೆ. ಸ್ವಾಗತಿಸದೆ ಇರುವುದಕ್ಕಾಗುವುದಿಲ್ಲ. ನೀವು ತಂದಿರುವ ಕಾನೂನು ಮಾತ್ರ ಪ್ರಗತಿದಾಯಕವಾಗಿಲ್ಲ ನೀವು ನಿರೀಕ್ಷಣೆ ಮಾಡಿದಂಥ ಪರಿಹಾರ ಈ ಕಾನೂನಿನಿಂದ ಗೇಣಿ ರೈತನಿಗೆ ಒದಗಿಸಿಕೊಡುವುದಕ್ಕಾಗುವುದಿಲ್ಲ. ಪರ್ಮನೆಂಟ್ ಟೆನೆಂಟಿಗೆ ಮಾತ್ರ ಆಕ್ಯುಪೆನ್ಸಿ ರೈಟ್ಸ್ ಕೊಡುವ ದೃಷ್ಟಿಯಿಂದ ಕಾನೂನು ತಂದಿದ್ದಾರೆ. ಅದೇ ರೀತಿಯಲ್ಲಿ ಉಳಿದಿರುವ ಚಾಲು ಗೇಣಿದಾರರು ಮತ್ತು ಇತರ ಗೇಣಿದಾರರಿಗೆ ಕೂಡ ಆಕ್ಯುಪೆನ್ಸಿ ರೈಟ್ಸ್ ಕೊಡುವ ದೃಷ್ಟಿಯಿಂದ ಮತ್ತು ಸಂಪೂರ್ಣವಾಗಿ ಗೇಣಿದಾರರಿಗೆ ಜಮೀನಿನ ಮಾಲೀಕತ್ವ ಸಿಕ್ಕುವ ರೀತಿಯಲ್ಲಿ ಕಾನೂನಿನಲ್ಲಿ ಬದಲಾವಣೆ ಮಾಡಬೇಕೆಂದು ಆಗ್ರಹಪೂರ್ವಕವಾಗಿ ಈ ಸಂದರ್ಭದಲ್ಲಿ ಸರ್ಕಾರವನ್ನು ತಮ್ಮ ಮುಖಾಂತರ ಒತ್ತಾಯಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಪತಿಗಳೇ, ಮೈಸೂರು (ಬಾಂಬೆ ಅಂಡ್ ಹೈದರಾಬಾದ್ ಏರಿಯಾಸ್) ರಿಲಿಜಿಯಸ್ ಅಂಡ್ ಚಾರಿಟಬಲ್ ಇನಾಂಸ್ ಅಬಾಲಿಷನ್ ಬಿಲ್ 1972, ಇದನ್ನು ಒಂದು ಕಾಯಿದೆಯಾಗಿ ಮಾಡುವುದಕ್ಕೆ ಈಗ ನಮ್ಮ ಮುಂದೆ ಇಟ್ಟಿದ್ದಾರೆ. ಮೈಸೂರು ರಿಲಿಜಿಯಸ್ ಅಂಡ್ ಚಾರಿಟಬಲ್ ಇನಾಂಸ್ ಅಬಾಲಿಷನ್ ಆಕ್ಟ್ 1955 ಇತ್ತು, ಮೈಸೂರು ಇನಾಂಸ್ ಅಬಾಲಿಷನ್ ಆಕ್ಟ್ 1969 ಇತ್ತು. ಈ ಕಾಯಿದೆಗಳಿಗೆ ತಿದ್ದುಪಡಿ ತಂದು ಅದರಲ್ಲಿ ಹೈದರಾಬಾದ್ ಮತ್ತು ಬೊಂಬಾಯಿ ಪ್ರದೇಶಗಳು ಸೇರಬೇಕು ಎಂದು ಯಾವುದಾದರೂ ರೀತಿಯಲ್ಲಿ ಬದಲಾವಣೆ ಮಾಡಬೇಕಾಗಿತ್ತು. ಇಡೀ ಮೈಸೂರು ರಾಜ್ಯ ಕರ್ನಾಟಕವಾಗಬೇಕು, ಇಡೀ ಕರ್ನಾಟಕ ಒಂದೇ ಎಂದು ಹೇಳುವ ಕಾಲದಲ್ಲಿ ಬೊಂಬಾಯಿ ಏರಿಯಾ ಮದ್ರಾಸ್ ಏರಿಯಾ, ಹಳೇ ಮೈಸೂರು ಎಂದು ವ್ಯತ್ಯಾಸ ಮಾಡತಕ್ಕದ್ದು ಅನ್ಯಾಯ. ಈಗ ತಂದಿರುವ ಬಿಲ್ ಬೊಂಬಾಯಿ ಮತ್ತು ಹೈದರಾಬಾದ್ ಏರಿಯಾಸ್‌ಗೆ ಸಂಬಂಧಪಟ್ಟಿದೆ. ಹಳೇ ಮೈಸೂರಿಗೇ ಬೇರೆ ಇದೆ. ನಮ್ಮ ರಾಜ್ಯದ ಎಲ್ಲ ಭಾಗಗಳಿಗೂ ಅನ್ವಯವಾಗುವಂತೆ ಒಂದು ಸಮಗ್ರವಾದ ಬಿಲ್ ತಂದು ಕ್ರೋಢೀಕರಿಸಿ ಅಗತ್ಯ ತಿದ್ದುಪಡಿಗಳು ಏನೇನಾಗಬೇಕೋ ಅದನ್ನೆಲ್ಲ ಇಟ್ಟಿದ್ದರೆ ಚೆನ್ನಾಗಿತ್ತು. ಅದರ ಜೊತೆಗೆ ಇನಾಂ ಅಬಾಲಿಷನ್ ಆಕ್ಟ್ ಪಾಸಾಗಿ 17 ವರ್ಷವಾಯಿತು. 12 ವರ್ಷದ ಕೆಳಗೆ ಕೆಲವು ತಿದ್ದುಪಡಿಗಳನ್ನು ಮಾಡಿದ್ದಾರೆ. ಮೈಸೂರು ರಾಜ್ಯದಲ್ಲಿ ಬೊಂಬಾಯಿ ಪ್ರಾಂತ, ಹೈದರಾಬಾದ್ ಪ್ರಾಂತ ಸೇರಿಕೊಂಡರೂ ಕೂಡ ಕಳೆದ 10–12 ವರ್ಷಗಳ ಕಾಲ ಯಾವ ವಿಧವಾದ ಕಾಯಿದೆಯನ್ನೂ ಮಾಡದೆ ಬೊಂಬಾಯಿ ಭಾಗದಲ್ಲಿ ಒಂದು ಕಾಯಿದೆ, ಬೇರೆ ಮಾಡುವುದಾದರೆ ಮೈಸೂರಿನ ಒಂದು ಭಾಗಕ್ಕೆ ವ್ಯತ್ಯಾಸವಾಗುತ್ತದೆ. 10—12 ವರ್ಷಗಳ ಕಾಲದಲ್ಲಿ ಯಾವ ಯಾವ ಕಾಯಿದೆಗಳನ್ನು ಬದಲಾವಣೆ ಮಾಡಬೇಕು, ಯಾವ ಯಾವ ಹಕ್ಕುಬಾಧ್ಯತೆಗಳನ್ನು ಸರಿಪಡಿಸುವುದಕ್ಕೆ ಏನು ಬೇಕೋ ಅದನ್ನು ಮಾಡಲು ಅವಕಾಶವಿತ್ತು. ಚಿಲ್ಲರೆ ಚಿಲ್ಲರೆಯಾಗಿ ಬಿಲ್‌ಗಳನ್ನು ತರುತ್ತಿರುವುದರಿಂದ ಅದರಲ್ಲಿ ಲೋಪದೋಷಗಳು ಹೆಚ್ಚಾಗುತ್ತವೆ.

ನನ್ನ ಮುಖ್ಯವಾದ ಆರೋಪ, ಇಡೀ ರಾಜ್ಯದಲ್ಲಿ ಅಥವಾ ಇಡೀ ದೇಶದಲ್ಲಿ ಹಿಂದುಗಳಿಗೆ ಸಂಬಂಧಪಟ್ಟ ಹಾಗೆ ಎಲ್ಲವನ್ನೂ ತೆಗೆದುಕೊಂಡು ಬರುತ್ತಾರೆ. ಚರ್ಚುಗಳಿಗೆ ಬೇಕಾದಷ್ಟು ಆಸ್ತಿ ಬೇಕಾದಷ್ಟು ಜಮೀನು ಇರಬಹುದು. ಬೆಂಗಳೂರಿನ ಸುತ್ತಮುತ್ತ ಅನೇಕ ಚರ್ಚುಗಳು ಬೇಕಾದಷ್ಟು ಜಮೀನು ತೆಗೆದುಕೊಂಡು ಇಟ್ಟುಕೊಂಡಿರುತ್ತವೆ. ಅದೇ ರೀತಿ ಮುಸ್ಲಿಮರ ಸಂಸ್ಥೆಗಳೂ ಜಮೀನು ಇಟ್ಟುಕೊಂಡಿರುತ್ತವೆ. ಆದ್ದರಿಂದ ಹಿಂದುಗಳಿಗೇ ಒಂದು ಲಾ ಮತ್ತು ಬೇರೆಯವರಿಗೇ ಒಂದು ಲಾ ಮಾಡುವುದು ಸರಿಯಲ್ಲ. ಇಂಡಿಯಾ ದೇಶದ ಪ್ರಜೆಯಾಗಿ ಯಾರಿದ್ದಾರೆ, ಪ್ರತಿಯೊಬ್ಬರಿಗೂ

(ಶ್ರೀ ಟಿ. ಆರ್. ಶಾಮಣ್ಣ)

ಕೂಡ ಒಂದೇ ಕಾಯಿದೆ ಅನ್ವಯವಾಗುವ ಹಾಗೆ ಮಾಡಬೇಕು, ಒಂದೊಂದು ಜನಾಂಗಕ್ಕೆ ಒಂದೊಂದು ರೀತಿ ಮಾಡುವುದು ಖಂಡನೀಯವೆಂದು ಹೇಳುತ್ತೇನೆ. ಇಡೀ ರಾಜ್ಯದಲ್ಲಿರುವ 2 ಕೋಟಿ 75 ಲಕ್ಷ ಜನರೆಲ್ಲರೂ ಮೈಸೂರು ದೇಶದ ನಿವಾಸಿಗಳು. ಇವರೆಲ್ಲರಿಗೂ ಒಂದೇ ವಿಧವಾದ ಕಾನೂನು ಅನ್ವಯವಾಗಬೇಕು. ಹಿಂದೂಗಳು ಕುರಿಗಳ ಹಾಗೆ, ಏನು ಕಷ್ಟ ಬಂದರೂ ಸಹಿಸಿ ಕೊಳ್ಳಬೇಕು ಎನ್ನುವ ಮನೋಭಾವ ಇಟ್ಟುಕೊಂಡಿರುವುದರಿಂದ ಪ್ರತಿಯೊಂದು ವಿಚಾರದಲ್ಲಿಯೂ ಅವರಿಗೆ ಅನಾನುಕೂಲವಾಗುತ್ತಿದೆ.

ಗೇಣಿದಾರರು ಜಮೀನು ತಮ್ಮ ಹೆಸರಿಗೆ ಪಟ್ಟಾ ಆದಮೇಲೆ ಭೂಕಂದಾಯವನ್ನು ಭೂಮಾಲೀಕರಿಗೆ ಕೊಡುವ ಹಾಗೆ ಸರ್ಕಾರದವರಿಗೆ ಕೊಡಬೇಕೆಂದು ತಿದ್ದುಪಡಿಯಲ್ಲಿದೆ. ಅದರ ಜೊತೆಗೆ ಜಮೀನುಗಳಿಗೆ ಸಂಬಂಧಪಟ್ಟ ಹಾಗೆ 15 ವರ್ಷದಷ್ಟು ಗೇಣಿಯನ್ನು 10 ವರ್ಷದೊಳಗೆ ಸರ್ಕಾರಕ್ಕೆ ಕೊಡಬೇಕೆಂಬ ನಿಯಮವಿದೆ. 10 ವರ್ಷವೆಂದರೆ ಒಂದು ಕಡೆ ಕಂದಾಯ ಕೊಡಬೇಕು, ಇನ್ನೊಂದು ಕಡೆ ಕಂತು ಕೊಡಬೇಕು. ಇವೆರಡನ್ನೂ ಕೊಡುವುದಕ್ಕೆ ಕಷ್ಟವಾಗುತ್ತದೆ. ಹೆಚ್ಚು ದುಡ್ಡನ್ನು ಕೊಡುವುದಕ್ಕೆ ಆಗುವುದಿಲ್ಲ. ಆದುರಿಂದ 10 ವರ್ಷಗಳ ಕಂತುಗಳಲ್ಲಿ ಎನ್ನುವುದಕ್ಕೆ ಬದರಾಗಿ 20 ವರ್ಷದ ಕಂತುಗಳಲ್ಲಿ ಕೊಡುವಂತೆ ಮಾಡಬೇಕು. ಜಮೀನು ಹೊಸದಾಗಿ ತೆಗೆದು ಕೊಂಡಿರುವುದರಿಂದ, ಅದಕ್ಕೆ ಬೇಕಾದಷ್ಟು ದುಡ್ಡು ಖರ್ಚು ಮಾಡಿ ರೂಢಿಸುವುದಕ್ಕೆ ಪ್ರಯತ್ನ ಮಾಡಬೇಕು. ಅವನಿಗೆ ಕಂತು ಮತ್ತು ಕಂದಾಯ ಎರಡನ್ನೂ ಕೊಡುವುದಕ್ಕೆ ಕಷ್ಟವಾಗುವುದರಿಂದ 20 ವರ್ಷದ ಕಂತುಗಳಲ್ಲಿ ಹಣ ಕೊಡುವ ವ್ಯವಸ್ಥೆ ಮಾಡಬೇಕು ಎಂದು ಒತ್ತಿ ಹೇಳುತ್ತೇನೆ.

ಉಳುವವನಿಗೇ ಭೂಮಿ ಎನ್ನುವ ತತ್ವವನ್ನು ಎಲ್ಲರೂ ಒಪ್ಪಿಕೊಂಡಿರುವುದರಿಂದ ಇದರ ಬಗ್ಗೆ ವಿರೋಧ ಮಾಡುವುದಕ್ಕೆ ಅವಕಾಶವಿಲ್ಲ. ಆದರೂ ಕೂಡ ಸಮಾಜವಾದದಲ್ಲಿ ಪ್ರತಿಯೊಬ್ಬ ಪ್ರಜೆಯೂ ಕೂಡ ಬದುಕಿ ಬಾಳತಕ್ಕ ಅವಕಾಶವಿರಬೇಕು. ಒಬ್ಬರ ಆಸ್ತಿಯನ್ನು ಬೇರೆಯವರಿಗೆ ಕೊಡುವಾಗ ಅವರಿಗೆ ಸರಿಯಾದ ರೀತಿಯಲ್ಲಿ ಜೀವನ ಮಾಡುವುದಕ್ಕೆ ಅವಕಾಶವಿರಬೇಕು, ಅವರು ಬೀದಿ ಬಿಕಾರಿ ಗಳಾಗಬಾರದು. ನಾನು ಇನಾಂದಾರರ ಬಗ್ಗೆ ವಾದಿಸುತ್ತಿಲ್ಲ. ಫೈನಾನ್‌ಷಿಯಲ್ ಮೆಮೊ ರಾಂಡಂ ಪ್ರಕಾರ ರೈತರು 4.61 ಲಕ್ಷ ರೂಪಾಯಿ ಕಂದಾಯ ರೂಪದಲ್ಲಿ ಕೊಡುತ್ತಾರೆಂದು ತಿಳಿಸಿದ್ದಾರೆ. ಅದರ ಜೊತೆಗೆ ಭೂ ಆಸ್ತಿಯನ್ನು ತೆಗೆದುಕೊಂಡರೆ ಅದರ ಬಗ್ಗೆ 127 ಲಕ್ಷ ರೂಪಾಯಿ ಕೊಡುತ್ತಾರೆಂದು ಹೇಳುತ್ತಾರೆ. ತಸ್ತಿಕ್ ರೂಪವಾಗಿ 17.69 ಲಕ್ಷ ರೂಪಾಯಿಗಳನ್ನು ಪ್ರತಿ ವರ್ಷವೂ ದೇವಸ್ಥಾನಗಳು ಮತ್ತು ಚಾರಿಟಬಲ್ ಇನಾಂಗಳಿಗೆ ಕೊಡಬೇಕಾಗುತ್ತದೆ ಎಂದು ತಿಳಿಸಿದ್ದಾರೆ. ವರ್ಷಕ್ಕೆ ಸುಮಾರು 17 ಲಕ್ಷ ರೂಪಾಯಿಗಳನ್ನು ಕೊಡುವುದೆಂದರೆ ಬಹಳ ಹೆಚ್ಚಿನ ಮೊತ್ತವಾಗುತ್ತದೆ. 127 ಲಕ್ಷ ರೂಪಾಯಿ ಆಸ್ತಿಯನ್ನು ತೆಗೆದುಕೊಂಡು ವರ್ಷಕ್ಕೆ 17 ಲಕ್ಷ ರೂಪಾಯಿ ಪರಿಹಾರ ಕೊಟ್ಟರೆ ಬಹಳ ಜಾಸ್ತಿಯಾಗುತ್ತದೆ. ಆದುದರಿಂದ 127 ಲಕ್ಷ ರೂಪಾಯಿ ಗಳನ್ನು ಚಿಲ್ಲರೆ ಚಿಲ್ಲರೆಯಾಗಿ ಕೊಡುವುದಕ್ಕೆ ಬದಲು ಕೊಡಬೇಕಾದ ಹಣವನ್ನು ಪೂರ್ತಿಯಾಗಿ ಕೊಟ್ಟು ಮುಜರಾಯಿ ಇಲಾಖೆ ಅಥವಾ ಇನಾಂದಾರರನ್ನು ಟ್ರಸ್ಟ್ ಆಗಿ ಮಾಡಿ ಅದರಿಂದ ಬರ ತಕ್ಕ ಉತ್ಪನ್ನವನ್ನು ಉಪಯೋಗಿಸಬಹುದು ಎನ್ನುವ ಸಲಹೆಯನ್ನು ಕೊಡುತ್ತೇನೆ. ಆದ್ದರಿಂದ ಎಲ್ಲಿಯವರಿಗೆ ಇವು ನಡೆದು ಕೊಂಡುಹೋಗುತ್ತದೋ ಗೊತ್ತಾಗುವುದಿಲ್ಲ. ದೇವಸ್ಥಾನ ಸರಿಯಾಗಿ ನಡೆಯಬೇಕಾದರೆ, ಉತ್ಪನ್ನ ಬೇಕು. ಅನೇಕ ದೇವಸ್ಥಾನಗಳಿಗೆ ಉತ್ಪನ್ನ ಇಲ್ಲದೆ ಅರ್ಚಕರು ಉಪವಾಸವಿದ್ದಾರೆ. ಸರ್ಕಾರದವರು ದೇವಸ್ಥಾನಗಳನ್ನು ನಡೆಸುವ ದೊಡ್ಡ ಜವಾಬ್ದಾರಿ ತೆಗೆದುಕೊಳ್ಳುತ್ತಿದ್ದಾರೆ. ದೇವಸ್ಥಾನಕ್ಕೆ ಜಮೀನು ಇದ್ದರೂ ಕೂಡ ಉತ್ಪನ್ನ ಬರುತ್ತಾ ಇಲ್ಲ. ಅದನ್ನು ತೆಗೆದುಕೊಳ್ಳುವ ಶಕ್ತಿಯೂ ಅವರಿಗೆ ಇಲ್ಲ. ದೇವಸ್ಥಾನಕ್ಕೆ ಯಾರೂ ದುಡ್ಡು ಕೊಡುವು ದಿಲ್ಲ. ಆದ್ದರಿಂದ ಸರ್ಕಾರದವರು ಅವರಿಗೆ ಕೊಡಬೇಕಾದ ಮೊತ್ತವನ್ನು ನಿಗದಿ ಮಾಡಿ ಬಿಟ್ಟು ಪಾವತಿಮಾಡಿದರೆ ಅದನ್ನು ಟ್ರಜರಿ ಅಥವಾ ಬ್ಯಾಂಕಿನಲ್ಲಿ ಹಾಕಿಕೊಂಡು ಅದರಿಂದ ಜೀವನ ಮಾಡುವುದು ಉತ್ತಮವೆಂದು ಕಾಣುತ್ತದೆ. ಪ್ರತಿವರ್ಷ ಸರ್ಕಾರ 17.96 ಲಕ್ಷ ರೂಪಾಯಿ ವಸೂಲು ಮಾಡಬೇಕಾಗಿದೆ. ಅವರಿಗೂ ತೊಂದರೆ ಇರುತ್ತದೆ. ದೇವಸ್ಥಾನ ಸರಿಯಾಗಿ ನಡೆದು ಕೊಂಡು ಹೋಗುವುದಿಲ್ಲ. ಸಣ್ಣ ಹಿಡುವಳಿದಾರರ ಬಗ್ಗೆ ಕನಿಕರದ ಅಟಿಟ್ಯೂಡ್ ತೆಗೆದುಕೊಳ್ಳ ಬೇಕು. ಜಮೀನು ಅವರಿಗೆ ಸಿಕ್ಕುವುದಿಲ್ಲ. ಆದರೆ, ಅವರಿಗೆ ಜೀವನ ಮಾರ್ಗವನ್ನು ಹುಡುಕಿಕೊಡ ಬೇಕು. ಅವರಿಗೆ ಬೇಕಾದ ಹಣವನ್ನು ಒಟ್ಟಿಗೆ ಕೊಟ್ಟರೆ ಯಾವುದಾದರೂ ದಾರಿ ಮಾಡಿದಂತಾಗು ತ್ತದೆ. ದೇವಸ್ಥಾನಗಳು ಸಾರೋದ್ಧಾರವಾಗಿ ನಡೆದುಕೊಂಡು ಹೋಗಬೇಕೆಂದು ಅವಕ್ಕೆ ಜಮೀನು ಕೊಟ್ಟಿದ್ದರು. ಆದರೆ, ನಾನಾ ಕಾರಣಗಳಿಂದ ಉತ್ಪನ್ನ ವಸೂಲು ಆಗುತಿಲ್ಲ. ಅನೇಕ

ಕಡೆ ಮಂಗಳಾರತಿ ಆಗುವುದು ಕಷ್ಟವಾಗಿದೆ. ಆದ್ದರಿಂದ ನಮ್ಮ ಹಿಂದೂ ಧರ್ಮ ಉಳಿಯಬೇಕಾದರೆ, ಈ ದೇವಸ್ಥಾನಗಳಿರಬೇಕು. ಮಠಗಳಿರಬೇಕು. ಈ ಮಠಗಳು ರಾಜಕಾರಣದ ಮಠಗಳು, ಆಗಬಾರದು. ಧರ್ಮಬೋಧೆ ಮಾಡಬೇಕು. ಇದರ ಜೊತೆಗೆ ಚಾರಿಟಬಲ್ ಎಂಡೋವ್‌ಮೆಂಟ್ಸ್ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಗೋಖಲೇ ಇನ್‌ಟ್ಯೂಟ್ ಅವುಗಳ ಬಗ್ಗೆ ಏನು ಮಾಡುತ್ತೀರಿ ? ನೋಡಬೇಕು. ಕೆಲವು ಹಾಸ್ಟಲ್‌ಗಳನ್ನು ಮತ್ತು ಸ್ಕೂಲುಗಳನ್ನು ಈ ಮಠಗಳವರು ನಡೆಸುತ್ತಿದ್ದಾರೆ. ಈ ಮಠಗಳಿಗಿದ್ದ ಭೂಮಿಯ ಉತ್ಪನ್ನವನ್ನು ಇದಕ್ಕೆ ಉಪಯೋಗಿಸುತ್ತಿದ್ದಾರೆ. ಅಂಥದಕ್ಕೆ ಧಕ್ಕೆ ಬಾರದ ಹಾಗೆ ಅನುಕೂಲ ಮಾಡಿಕೊಡಬೇಕೆಂದು ಸೂಚಿಸುತ್ತೇವೆ. ಈ ಬಿಲ್ಲನ್ನು ನನಗೆ ತಿಳಿದ ಪ್ರಕಾರ ಸೆಲೆಕ್ಟ ಕಮಿಟಿಗೆ ಕಳುಹಿಸುತ್ತಾರೆ. ಅಲ್ಲಿ ಇಡೀ ರಾಜ್ಯಕ್ಕೆ ಏಕರೂಪದ ಬಿಲ್ ಬರುವುದಕ್ಕೆ ಪ್ರಯತ್ನ ಪಡಬೇಕು. ಏಕೆಂದರೆ, ಹಳೇ ಮೈಸೂರಿಗೆ ಹೊಸ ಮೈಸೂರಿಗೆ ಡಿಸ್‌ಕ್ರಿಮಿನೇಷನ್ ಆಗುತ್ತದೆ. ಎರಡು ಆಕ್ಟಗಳನ್ನು ಇಟ್ಟುಕೊಂಡು ನೋಡಿದರೆ ಅದಕ್ಕೆ ಇದಕ್ಕೆ ವ್ಯತ್ಯಾಸ ಕಂಡು ಬರುತ್ತದೆ. ಸಮಗ್ರವಾಗಿ ಇಡೀ ರಾಜ್ಯಕ್ಕೆ ಅನ್ವಯಿಸುವ ಏಕರೂಪದ ಬಿಲ್ಲನ್ನು ತಯಾರು ಮಾಡಿ ಜಾಯಿಂಟ್ ಕಮಿಟಿಯ ಪರ್ಯಾಲೋಚನೆಗೆ ಕೊಡುವುದು ಉತ್ತಮ. ಇಲ್ಲದೆ ಇದ್ದರೆ ಬಾಂಬೆ ಕರ್ನಾಟಕಕ್ಕೆ ಬೇರೆ, ಮತ್ತು ಹಳೇ ಕರ್ನಾಟಕಕ್ಕೆ ಬೇರೆ ರೀತಿಯನ್ನು ಅನುಸರಿಸಿದಂತಾಗುತ್ತದೆ. ಆದ್ದರಿಂದ ಈ ರಾಜ್ಯಕ್ಕೆ ಒಂದು ಸಮಗ್ರವಾದ ಬಿಲ್ ಬರುವ ಹಾಗೆ ಮಾಡಿದರೆ ಎಲ್ಲರಿಗೂ ಅನುಕೂಲ ಮಾಡಿದಂತಾಗುತ್ತದೆ. ಆದ್ದರಿಂದ ಮೊದಲೇ ಹೇಳಿದಹಾಗೆ ರೈತರು ಕೊಡಬೇಕಾದಂಥ ದುಡ್ಡನ್ನು ಹತ್ತು ಇನ್‌ಸ್ಟಾಲ್‌ಮೆಂಟ್‌ಗಳಲ್ಲಿ ಕೊಡಬೇಕೆಂದಿದೆ. ಅದನ್ನು 20 ಇನ್‌ಸ್ಟಾಲ್‌ಮೆಂಟ್‌ಗಳಾಗಿ ಮಾಡಬೇಕು ಸಂಬಂಧಪಟ್ಟ ಕಾಯಿದೆ ಎಲ್ಲಾ ಜಾತಿಗೂ ಅನ್ವಯಿಸುವ ಹಾಗೆ ಮಾಡಬೇಕು. ಸರ್ಕಾರದವರು ಕೊಡಬೇಕಾದ ದುಡ್ಡನ್ನು ಒಟ್ಟಿಗೆ ಕೊಟ್ಟು ಈ ಸಂಸ್ಥೆಗಳು ಚೆನ್ನಾಗಿ ನಡೆದುಕೊಂಡು ಹೋಗುವ ಹಾಗೆ ಮಾಡಬೇಕು. ಬೇಕಾದರೆ, ಸರ್ಕಾರದ ನಾಮಿನಿಯನ್ನು ಸಂಸ್ಥೆಗಳ ಮ್ಯಾನೇಜಮೆಂಟ್ ಕಮಿಟಿಯಲ್ಲಿ ಹಾಕುವುದರ ಮೂಲಕ ಈ ಸಂಸ್ಥೆಗಳು ಚೆನ್ನಾಗಿ ನಡೆಯಬೇಕೇ ಹೊರತು ಅವುಗಳ ಚಟುವಟಿಕೆ ಕುಂಠಿತವಾಗುವುದಕ್ಕೆ ಅವಕಾಶ ಇರಬಾರದು. ಇದು ಜಾಯಿಂಟ್ ಸೆಲೆಕ್ಟ್ ಕಮಿಟ್‌ಗೆ ಹೋಗುವ ಅವಶ್ಯಕತೆ ಇಲ್ಲ. ಹೋಗಲೇಬೇಕಾದರೆ, ಸಮಗ್ರ ಬಿಲ್ ಒಂದನ್ನು ತರಬೇಕು ಎಂದು ಹೇಳಿ ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ).—ಮಾನ್ಯ ಅಧ್ಯಕ್ಷಣಿಯವರೇ, ಈ ಮಸೂದೆಯನ್ನು ಬೆಂಬಲಿಸಬೇಕೋ ಅಥವಾ ವಿರೋಧಿಸಬೇಕೋ ಎಂದು ನನಗೆ ತಿಳಿಯುವುದಿಲ್ಲ. ಏಕೆಂದರೆ ಇದು ಯಾರಿಗಾಗಿ ಒಳ್ಳೆಯ ಪ್ರಗತಿಶೀಲವಾದಂಥ ಮಸೂದೆ ಎಂದು ಕಾಣುತ್ತದೆ, ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಈ ಮಸೂದೆಯನ್ನು 1951ರಲ್ಲಿ ಗುಂಡಪ್ಪ ಸಮಿತಿಯವರು ಶಿಫಾರಸ್ ಮಾಡಿದರು. ಆ ಶಿಫಾರಸ್‌ನ ಆಧಾರದಲ್ಲಿ ಮೇಲೆ ಈ ಮಸೂದೆಯನ್ನು ತಯಾರು ಮಾಡಿದ್ದಾರೆ. 1954ರಲ್ಲಿ ಹಳೆಯ ಮೈಸೂರಿನ ಸಂಸ್ಥಾನಕ್ಕೆ ಅನ್ವಯಿಸುವಂತೆ ದೇವಾಯ ಮತ್ತು ಧರ್ಮಾಯ ಸಂಸ್ಥೆಗೆ ಸಂಬಂಧಪಟ್ಟ ಮಸೂದೆ ಏನು ಇದೆ, ಅದರ ಚೌಕಟ್ಟಿನೊಳಗೆ ಈ ಮಸೂದೆಯನ್ನು ತಯಾರು ಮಾಡಿದ್ದಾರೆ. ಇದು ತಯಾರಾಗಿ ನಿಜವಾಗಿಯೂ ಬಹಳ ಕಾಲ ಕಳೆದುಹೋಗಿದೆ. 1951ರಿಂದ 1954ರಲ್ಲಿ ಆಗಬೇಕಾಗಿದ್ದರೆ, ನಮ್ಮ ದೇಶದ ಪರಿಸ್ಥಿತಿ, ಜನತೆಯ ಮನೋಭಾವ ಮತ್ತು ಸರ್ಕಾರದ ಧೋರಣೆ ಕೂಡ ಬದಲಾವಣೆಯಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ ಆದರೆ ಈ ಮಸೂದೆಯನ್ನು ನೋಡಿದರೆ, ಲೋಕವೇ ಬದಲಾವಣೆ ಆದರೂ ಕೂಡ ನಮ್ಮ ಸರ್ಕಾರದ ಧೋರಣೆ ಬದಲಾವಣೆ ಆದ ಹಾಗೆ ಕಾಣುವುದಿಲ್ಲ, ಇದರಲ್ಲಿ ಹೊಸದೂ ಏನೂ ಕಾಣುವುದಿಲ್ಲ. ಚಾರಿಟಬಲ್ ಮತ್ತು ರಿಲಿಜಿಯಸ್ ಎಂಡೋವ್‌ಮೆಂಟ್ಸ್, ಇನಾಂ ಆಕ್ಟ್ ಅನ್ನು ತರಬೇಕಾಗಿದ್ದರೆ ಎರಡು ಮುಖ್ಯ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಇಂಥ ಒಂದು ಮಸೂದಾ ಕಾನೂನನ್ನು ತರಬೇಕಾಗಿತ್ತು. ನಮ್ಮ ರಾಷ್ಟ್ರ ಮತಾತೀತ ರಾಷ್ಟ್ರ, ಅದರಲ್ಲೂ ಜನತೆಯ ಜೀವನದ ಮೇಲೆ ಮತೀಯ ಸಂಸ್ಥೆಗಳು ಶೋಷಣೆ ನಡೆಸುವಂಥಾದ್ದನ್ನು ಕೊನೆಗಾಣಿಸಿ, ಧಾರ್ಮಿಕ ಸಂಸ್ಥೆಗಳು, ಮತೀಯ ಸಂಸ್ಥೆಗಳು ಜಗತ್ತಿನ ಸಂಸ್ಕೃತಿಯ ಅಭಿವೃದ್ಧಿಗೆ ಮತ್ತು ಸಮಾಜದಲ್ಲಿ, ಜನತೆಯಲ್ಲಿ ಎಲ್ಲಾ ರೀತಿಯ ಸರ್ವತೋಮುಖವಾದ ಅಭಿವೃದ್ಧಿಗೆ ಪ್ರೋತ್ಸಾಹ ಕೊಡುವ ರೀತಿಯಲ್ಲಿ ಸಂಸ್ಥೆಗಳನ್ನು ನಡೆಸುವುದಕ್ಕೆ ಸರ್ಕಾರ ಪ್ರೋತ್ಸಾಹ ಕೊಡಬೇಕು. ಅದಕ್ಕೆ ಬೇಕಾದ ಒಂದು ತಳಹದಿಯನ್ನು ನಿರ್ಮಾಣ ಮಾಡಬೇಕು. ಈ ದೃಷ್ಟಿಕೋಣ ಈ ಮಸೂದೆಯನ್ನು ತರುವಾಗ ನಿಜವಾಗಿ ಇದ್ದಹಾಗೆ ಕಾಣಿಸುವುದಿಲ್ಲ. ರೈತರಿಂದ ಪ್ರತಿವರ್ಷ 4.61 ಲಕ್ಷರೂಪಾಯಿಗಳನ್ನು ವಸೂಲು ಮಾಡಿ 17.69 ಲಕ್ಷರೂಪಾಯಿಗಳನ್ನು ಈ ಸಂಸ್ಥೆಗೆ ಕೊಡುವ ವ್ಯವಸ್ಥೆಯನ್ನು ಸರ್ಕಾರದವರು ಈ ಮಸೂದೆಯಲ್ಲಿ ಮಾಡಿದ್ದಾರೆ ಎಂದು ಅಫಿಷಿಯಲ್ ಮೆಮೊರ್‍ಯಾಂಡಂ ನೋಡಿದರೆ ಅರ್ಥವಾಗು

(ಶ್ರೀ ಬಿ. ವಿ. ಕಕ್ಕಿಲಾಯ)

ತ್ತದೆ. ಧಾರ್ಮಿಕ ಸಂಸ್ಥೆಗಳಿಗೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸರ್ಕಾರದ ಖಜಾನೆಯಿಂದ ಹಣ ಕೊಡಬೇಕಾದಂಥ ಅವಶ್ಯಕತೆ ಇದೆಯೇ ಎನ್ನುವುದನ್ನು ಸರಿಯಾಗಿ ಯೋಚನೆ ಮಾಡಬೇಕು. ಧಾರ್ಮಿಕ ಸಂಸ್ಥೆಗಳ ಪೂಜೆ ಪುನಸ್ಕಾರಾದಿಗಳು ನಡೆಯಕೂಡದು ಎಂದು ನನ್ನ ವಿಚಾರ ಅಲ್ಲ; ನಡೆಯಬೇಕು ಅದನ್ನು ನಡೆಸಲಿಕ್ಕೆ ಸರ್ಕಾರದಿಂದ ಹಣ ಕೊಡಬೇಕಾಗಿದ್ದರೆ ಈ ಸಂಸ್ಥೆಗಳು ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡದೆ ಇದ್ದರೆ ಯಾವ ಕಾರ್ಯಗಳನ್ನು ಮಾಡುವುದಕ್ಕೋಸ್ಕರ ಇದೆ ? ಈ ಸಂಸ್ಥೆಗಳು ಸ್ಪೆಷಲ್ ಆಗಿ ಕಾರ್ಯಗಳನ್ನು ಮಾಡುವುದು ಆದರೆ ಮಾತ್ರ ಸರ್ಕಾರ ಅವುಗಳಿಗೆ ಸಹಾಯ ಕೊಡಬೇಕು. ಇವತ್ತು ಇರುವಂಥ ಸಂಸ್ಥೆಗಳು, ಧಾರ್ಮಿಕ ಮತ್ತು ವಿದ್ಯಾ ಸಂಸ್ಥೆಗಳು ಎಂದು ಏನು ಹೇಳುತ್ತೇವೆ ಆ ಸಂಸ್ಥೆಗಳು ತಮ್ಮ ಮೂಲ ಉದ್ದೇಶವನ್ನು ಮರೆತು ಬೇರೆ ರೀತಿಯಲ್ಲಿ ವರ್ತಿಸುತ್ತಿವೆ ಎನ್ನುವುದನ್ನು ನಮ್ಮ ಸ್ವಂತ ಅನುಭವದಿಂದ ಹೇಳಬಹುದು. ನಮ್ಮ ರಾಷ್ಟ್ರಕವಿ ಕುವೆಂಪು ಅವರ ಮಾತಿನಲ್ಲಿ ಹೇಳುವುದಾದರೆ, ಅವರು ಬಹಳ ಚನ್ನಾಗಿ ಹೇಳಿದ್ದಾರೆ. ಕಾಣಿಕೆ ಹೆಸರಿನಲ್ಲಿ ಕಾಂಚಾಣ ತೆಗೆದುಕೊಂಡು ಪ್ರಯಾಣಿಕರ ಹೋಟೇಲಿಗೆ ಸಾಲಕೊಡುವುದು; ಉಡುಪಿಯಲ್ಲಿ ಸಿನಿಮಾ ಕಟ್ಟುವುದು; ಬೆಂಗಳೂರು ನಗರದಲ್ಲಿ ಬೇಕಾದಂಥ ಮೋಜು ಮಾಡುವುದು ಸಮಾಜವಾದವನ್ನು ಮಾತನಾಡುವ ಕಾಲದಲ್ಲಿ ಇದನ್ನೆಲ್ಲಾ ಧರ್ಮ ಸಂಸ್ಥೆಗಳ ಮುಖಾಂತರ ಸರ್ಕಾರದ ಆಶ್ರಯದಲ್ಲಿ ನಡೆಸುತ್ತಿರುವುದನ್ನು ಸರ್ಕಾರದವರು ಗಮನಿಸಬೇಕು.

[Mr. DEPUTY SPEAKER in the Chair]

ಇದು ಸರ್ಕಾರದ ಬೊಕ್ಕಸದಿಂದ ಇಷ್ಟು ಹಣಖರ್ಚು ಮಾಡುವಾಗ ಹೈದರಾಬಾದ್, ಮುಂಬೈ ಕರ್ಣಾಟಕ ಭಾಗದಲ್ಲಿ ಎಷ್ಟು ಶೋಷಣೆ ನಡೆಯುತ್ತದೆ ಎನ್ನುವ ಪುರಾವೆಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಇನ್ನು ನಮ್ಮ ಜಿಲ್ಲೆಯ ಪುರಾವೆಗಳನು ಬೇಕಾದರೆ ಕೊಡುವುದಕ್ಕೆ ತಯಾರಿದ್ದೇನೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಸಾಮಾನ್ಯವಾಗಿ ಎಲ್ಲಾ ಕಡೆಯೂ ಇದೇ ರೀತಿ ನಡೆಯುತ್ತಿದೆ. ಎಲ್ಲಾ ಧಾರ್ಮಿಕ ಸಂಸ್ಥೆಗಳು ಮತ್ತು ಮಠೀಯ ಸಂಸ್ಥೆಗಳನ್ನು ಹತೋಟಿಗೆ ತೆಗೆದುಕೊಂಡು ಆ ಸಂಸ್ಥೆಗಳು ಯಾವ ಉದ್ದೇಶಕ್ಕಾಗಿ ಸ್ಥಾಪನೆ ಆಗಿವೆ, ಆ ಉದ್ದೇಶಕ್ಕಾಗಿ ನಡೆಯುವ ಹಾಗೆ ಆಗುವಂತೆ ಮಾಡಿ ಅವುಗಳಲ್ಲಿ ನಡೆಯುತ್ತಿರುವ ಸಾರ್ವಜನಿಕ ಶೋಷಣೆಯನ್ನು ತಪ್ಪಿಸುವುದಕ್ಕೆ ಶಾಸನವನ್ನು ತರತಕ್ಕದ್ದನ್ನು ಬಿಟ್ಟು ಇನಾಮತಿಯನ್ನು ರದ್ದು ಮಾಡುವ ಶಾಸನವನ್ನು ತಂದಿದ್ದಾರೆ. ಈ ದೃಷ್ಟಿಯಲ್ಲಿ ಇದು ಸಂಪೂರ್ಣ ವಿಪರ್ಯಾಸವಾಗಿದೆ ಎಂದು ಹೇಳಬೇಕಾಗಿದೆ. ಎರಡನೆಯದು ಶಾಸನವನ್ನು ತರುವಾಗ ಇನಾಮತಿಗೆ ಒಳಪಟ್ಟ ರೈತರಿಗೆ ರಕ್ಷಣೆ ಕೊಡುವುದು ಮುಖ್ಯ ಉದ್ದೇಶ ಆಗಬೇಕಾಗಿತ್ತು. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಮಾತನಾಡುವಾಗ ಇದರ ಬಗ್ಗೆ ವಿಶದವಾಗಿ ಹೇಳಿದರು. ಮಸೂದೆಯಲ್ಲಿ ಪರಮನೆಂಟ್ ಟೆನೆನ್ಸಿ—ಕಾಯಂ ಗೇಣಿದಾರರು ಯಾರು ಇದ್ದಾರೆ ಅವರಿಗೆ ಮಾತ್ರ ಸ್ವಲ್ಪ ರಕ್ಷಣೆ ಕೊಡುವ ವ್ಯವಸ್ಥೆಯನ್ನು ಇದರಲ್ಲಿ ಮಾಡಿದ್ದಾರೆ. ನಮ್ಮ ಅನುಭವದಲ್ಲಿ ಪರಮನೆಂಟ್ ಟೆನೆನ್ಸಿ ಎನ್ನುವವು ಮಾತ್ರ ಅಲ್ಲ, ಇನಾಂತಿಗೆ ಸಂಬಂಧಪಟ್ಟ ಜಮೀನುಗಳನ್ನು ಯಾವ ರೈತರು ವ್ಯವಸಾಯ ಮಾಡುತ್ತಾರೆ ಅಂತಹ ರೈತರಿಗೆ ರಕ್ಷಣೆಯನ್ನು ಕಾನೂನಿನಲ್ಲಿ ಕೊಡಬೇಕಿತ್ತು. ಅದು ಕೊಡದೆ ಇದ್ದರೆ ತಾವು ಈಗೇನು ಕಾನೂನು ಮಾಡುತ್ತೀರಿ, ಆದ್ದರಿಂದ ಉಪಯೋಗವೂ ಆಗುವುದಿಲ್ಲ. 1954ರಲ್ಲಿ ಇದೇ ಶಾಸನ ಸಭೆಯಲ್ಲಿ ಅಂಗೀಕಾರವಾದ ಹಳೆ ಮೈಸೂರಿಗೆ ಸಂಬಂಧಪಟ್ಟ ಶಾಸನ ಜಾರಿಯಾಗಿ 17 ವರ್ಷಗಳು ಆದಮೇಲೆ ಇದ್ದ ಕಾನೂನಿನಿಂದ ಯಾವ ಅನುಕೂಲವಾಗಿದೆ ಎನ್ನುವುದನ್ನು ಪರಿಶೀಲನೆಮಾಡಿ ನೋಡಿದರೆ ಜಮೀನಿನಲ್ಲಿ ವ್ಯವಸಾಯ ಮಾಡುವವರಿಗೆ ಹೆಚ್ಚಿನ ರಕ್ಷಣೆ ಸಿಕ್ಕುತ್ತಾ ಇಲ್ಲ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಪರಸನಲ್ ಅಂಡ್ ಮಿಸಿಲೇನಿಯಸ್ ಇನಾಂಸ್ ರದ್ದಿಯಾತಿ ಕಾನೂನಾಗಲೀ, ಚಾರಿಟೆಬಲ್ ಇನಾಂಸ್ ರದ್ದಿಯಾತಿ ಆಗಲಿ, ಈ ಎರಡು ಶಾಸನಗಳನ್ನು ರದ್ದು ಮಾಡುವುದರಿಂದ ಉಳುವವರಿಗೆ, ರೈತರಿಗೆ ನಿಜವಾಗಿ ರಕ್ಷಣೆ ಸಿಕುತ್ತಾ ಇಲ್ಲ. ಒಂದೆರಡು ಉದಾಹರಣೆಗಳನ್ನು ಕೊಡಬೇಕಾದರೆ 2--3 ವರ್ಷಗಳ ಹಿಂದೆ ಬಾಗೇಪಲ್ಲಿಯಲ್ಲಿ ಆಗಡಮತ್ತಿ ಮಾಜಿ ಇನಾಮುದಾರರು ಇದ್ದಾರೆ 50–60 ವರ್ಷಗಳಿಂದ ಉಳುಮೆ ಮಾಡುವ ರೈತರನ್ನು ಸುಳ್ಳು ಪಹಣಿ ಬರಸಿ ಜಮೀನಿನಿಂದ ಹೊರಕ್ಕೆ ಹಾಕುವುದಕ್ಕೆ ಹೊರಟಿದ್ದಾರೆ. ಬಾಗೇಪಲ್ಲಿ ತಾಲ್ಲೂಕು ತಹಸಿಲ್ದಾರ್‌ರು ಪಹಣಿ ಬರೆಯುವುದರಲ್ಲಿ ಅನ್ಯಾಯ ಮಾಡಿದ್ದಾರೆ ಎಂದು ತಾಲ್ಲೂಕಿನ ರೈತರ ಮುಂದಾಳುಗಳು ಅನ್ನ ಸತ್ಯಾಗ್ರಹ ಮಾಡುತ್ತಾ ಇದ್ದಾರೆ. ಒಂದು ಉದಾಹರಣೆ ಹೇಳುತ್ತೇನೆ, ಬೆಂಗಳೂರು ಕೂನೆರಾಜ್‌ಪುರದಲ್ಲಿ ಪಹಣಿ ಹೆಚ್ಚು ಕಡಮೆ ಮಾಡಿ, ವರ್ಷಕ್ಕೆ ಒಂದಾವರ್ತಿ ಬರಸಿ ರೈತರಿಂದ ಜಮೀನನ್ನು ಕಿತ್ತುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾ ಇರುವುದು

ತಮ್ಮ ಗಮನಕ್ಕೆ ತಂದಿದ್ದೇನೆ. ಇದು ರಾಜ್ಯದ ಎಲ್ಲಾ ಕಡೆಗಳಲೂ ಮತ್ತು ಕೋಲಾರ ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲೂ ನಡೆಯುತ್ತಾ ಇದೆ. ಜೋಡಿ ಇನಾಮತಿ ರದ್ದು ಆದಮೇಲೆ ಅಲ್ಲಿ ಉಳುವ ರೈತ ಹಕ್ಕನ್ನು ಪಡೆಯಲು ಸಾಧ್ಯವಾಗಿಲ್ಲ. ಕಾನೂನು ಆಗಿ ದೇವಾಲಯ ಮತ್ತು ಸಂಸ್ಥೆಗಳ ಮಾಲೀಕರಿಗೆ ಲಕ್ಷಾಂತರ ರೂಪಾಯಿ ಪರಿಹಾರ ಕೊಟ್ಟಿದ್ದು ಆಯಿತು. ಜಮೀನ್ದಾರರಿಗೆ ಲಕ್ಷಾಂತರ ರೂಪಾಯಿ ಪರಿಹಾರ ಕೊಟ್ಟಿದ್ದಾಯಿತು. ಪರಿಹಾರ ತೆಗೆದುಕೊಂಡು ರೈತರ ಭೂಮಿಯನ್ನು ಕಿತ್ತುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ. ತಾವು ಮಸೂದೆಯನ್ನು ತೆಗೆದುಕೊಂಡು ಬಂದಮೇಲೆ ಇದೇ ಕ್ರಮವನ್ನು ಹೈದರಾಬಾದ್ ಮತ್ತು ಮುಂಬೈ ಪ್ರದೇಶದಲ್ಲಿ ಕೂಡ ಇವೊತ್ತು ಜಾರಿಗೆ ತರವುದಾದರೆ ಬಹಳ ದೊಡ್ಡ ಅನ್ಯಾಯ, ದೇಶದ ರೈತರಿಗೆ ಮಾಡಿದಂತಾಗುತ್ತದೆ. ಇಂಥ ಅನ್ಯಾಯ ಮಾಡುವುದಕ್ಕೆ ಮಾನ್ಯ ಮಂತ್ರಿಗಳಿಗೆ ಉದ್ದೇಶ ಇಲ್ಲದೆ ಇದ್ದರೂ ಕೂಡ ಪರಿಣಾಮ ಹಾಗಾಗುತ್ತದೆ. ತಾವು ಮಾಡಿರುವ ಮಸೂದೆಯಲ್ಲಿ ಅದನ್ನು ನೋಡಿದರೆ ತಮ್ಮ ಉದ್ದಿಶ್ಯ ಏನೇ ಇದ್ದರೂ ಕೂಡ, ಸಾರ್ವಜನಿಕ ಬೊಕ್ಕಸದಿಂದ ಹಣವನ್ನು ಕೊಡುವುದು, ಆಮೇಲೆ ಆ ಜಮೀನನ್ನು ಕೂಡ ಬಿಟ್ಟು ಬಿಡುವುದು ಏನಿದೆ ಇದು ಬಹಳ ದೊಡ್ಡ ಅನ್ಯಾಯ ಮಾಡಿದಂತಾಗುತ್ತದೆ. ಆದ್ದರಿಂದ ಈ ಮಸೂದೆಯನ್ನು ಈಗ ಇದ್ದ ರೀತಿಯಲ್ಲೇ ಅಂಗೀಕಾರ ಮಾಡುವುದಕ್ಕೆ ಒಪ್ಪಿಗೆ ಕೊಡುವುದಕ್ಕೆ ಖಂಡಿತ ಸಾಧ್ಯವಿಲ್ಲ ಎಂದು ಸಭೆಯಲ್ಲಿ ನಾವು ಹೇಳಬೇಕಾಗುತ್ತದೆ. ಇಂಥ ಮಸೂದೆಯನ್ನು ತರುವ ಮೊದಲು ಇದಕ್ಕೆ ಸ್ವಲ್ಪ ತಯಾರಿ ಮಾಡಬೇಕಾಗಿತ್ತು. ಕಳೆದ 11 ವರ್ಷಗಳ ಅನುಭವ ಇದ್ದಮೇಲೆ ಅದನ್ನು ಉಪಯೋಗಿಸಿಕೊಂಡು ಅದಕ್ಕೆ ಅನುಗುಣವಾಗಿ ಕೆಲವು ತಯಾರಿ ಮಾಡಬೇಕಿತ್ತು. ಆ ತಯಾರಿ ಏನು ಎಂದರೆ ಪಹಣಿ ಮತ್ತು ರಿಕಾರ್ಡ್ ಆಫ್‌ರೈಟ್ಸ್ ಸಿದ್ಧಗೊಳಿಸಬೇಕಾಗಿತ್ತು. ಈ ಪಹಣಿ ಬರೆಯುವ ವಿಚಾರದಲ್ಲಿ ಮತ್ತು ರೆಕಾರ್ಡ್ ಆಫ್ ರೈಟ್ಸ್ ಮಾಡುವ ವಿಚಾರದಲ್ಲಿ ಸರ್ಕಾರ ಈಗ ಅಂಗೀಕಾರ ಮಾಡಿರುವ ಕಾರ್ಯ ರೈತರನ್ನು ಪೂರ್ತಿ ವಂಚನೆ ಮಾಡುವ ಕ್ರಮ ಎಂದು ಹೇಳಿದರೂ ಕೂಡ ಅದು ತಪ್ಪಾಗಲಾರದು. ನಿಜವಾಗಿ ಇವೊತ್ತಿನ ವಾಸ್ತವಿಕ ಸ್ಥಿತಿ ನಮ್ಮ ರಾಜ್ಯದಲ್ಲಿ ಏನು ಇದೆ ಎಂದರೆ ವ್ಯವಸಾಯ ಮಾಡುತ್ತಾ ಇರುವವನು ಒಬ್ಬ ಇದ್ದಾನೆ, ಟಿಲ್ಲರ್ ಆಫ್ ದಿ ಸಾಯಿಲ್ ಎನ್ನುವ ಒಂದು ವರ್ಗವಾಗಿದೆ. ಯಾವ ಕಾನೂನು ಮಾಡಿದರೂ ಕೂಡ ಅದರ ಪ್ರಕಾರ ಇವೊತ್ತು ಒಬ್ಬ ರೈತ ಇಂಥ ಜಮೀನನ್ನು ನಾನು ವ್ಯವಸಾಯ ಮಾಡುತ್ತಾ ಇದ್ದೇನೆ, ನನಗೆ ಇದರ ಹಕ್ಕು ಬರಬೇಕು. ಇದರ ಮಾಲಕತನ ಬರಬೇಕು ಎಂದು ಕೇಳುವುದಕ್ಕೆ ಬಹಳ ಕಷ್ಟವಾಗುತ್ತದೆ ಅಸಾಧ್ಯ ಎಂದು ಹೇಳಿದರೆ ಅದು ತಪ್ಪಾಗಲಾರದು. ಇಂಥ ಕಾನೂನುಗಳಿಂದ ನಮ್ಮ ಹಳ್ಳಿಗಳಲ್ಲಿ ಹೆಚ್ಚು ಗೊಂದಲಗಳನ್ನು ಮಾಡುತ್ತಾರೆ. ಮತ್ತು ಅವರಿಗೆ ಯಾವರೀತಿಯಿಂದಲೂ ಸಹಾಯ ಮಾಡಿದಂತಾಗುವುದಿಲ್ಲ. ಆದುದರಿಂದ ಈ ಕಾನೂನನ್ನು ತರುವುದಕ್ಕಿಂತ ಮೊದಲು ಪ್ರತಿಯೊಂದು ಗ್ರಾಮದಲ್ಲೂ ಕೂಡ ಅಲ್ಲಿ ಇರುವ ಎಲ್ಲಾ ರೈತರನ್ನು ಕೂಡಿಸಿ ಅವರ ಮುಂದೆ ಯಾರು ಯಾರು ರೆಕಾರ್ಡ್ ಆಫ್ ರೈಟ್ಸ್ ಮಾಡುವವರು ಇದ್ದಾರೆ, ಪಹಣಿ ಬರೆಯುವವರು ಇದ್ದಾರೆ ಅವರನ್ನು ಕೂಡಿಸಿ ಅವರ ಸಮಕ್ಷಮದಲ್ಲಿ ಅವರ ಹಕ್ಕುಗಳನ್ನು ಸಾಬೀತು ಮಾಡುವುದಕ್ಕೆ ಅವರವರ ಅಭಿಪ್ರಾಯ ಹೇಳಲು ಅವಕಾಶ ಮಾಡಿ ಕೊಟ್ಟರೆ ಉಳುವ ರೈತನಿಗೆ ಪ್ರಯೋಜನವಾಗುತ್ತದೆಯೇ ಹೊರತು ಬೇರೆ ಯಾವುದರಿಂದಲೂ ಪ್ರಯೋಜನ ಆಗುವುದಕ್ಕೆ ಸಾಧ್ಯವಿಲ್ಲ. ಈ ಕಾನೂನನ್ನು ಈಗ ಸಭೆಯಲ್ಲಿ ಇಂಟರ್‌ಡ್ಯೂಸ್ ಮಾಡುತ್ತಾ ಇದ್ದೀರಿ, ಚರ್ಚೆ ನಡೆಸುತ್ತಿದ್ದೀರಿ, ಇದು ಈ ಅಧಿವೇಶನದಲ್ಲಿ ಮುಂಜೂರು ಆಗುತ್ತದೋ ಇಲ್ಲವೋ ಗೊತ್ತಿಲ್ಲ. ಮಾನ್ಯ ಮಂತ್ರಿಗಳು ಹೇಳಬೇಕು ಇದು ಅಂಗೀಕಾರವಾಗಿ ಇದನ್ನು ಜಾರಿಗೆ ಕೊಡುವ ಮೊದಲು ಪ್ರತಿಯೊಂದು ಗ್ರಾಮದಲ್ಲೂ ಸರಿಯಾದ ರೆಕಾರ್ಡ್ ಆಫ್‌ರೈಟ್ಸ್ ಸಿದ್ಧಗೊಳಿಸಬೇಕು ಮತ್ತು ಪಹಣಿ ಬರೆಯುವ ಕ್ರಮವನ್ನು ಜಾರಿ ಮಾಡಲು ಸರ್ಕಾರದವರು ವಿಶೇಷವಾದ ಗಮನ ಕೊಡಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ. ಹಳೇ ಮೈಸೂರಿಗೆ ಸಂಬಂಧಪಟ್ಟಹಾಗೆ ಹಿಂದೆ ಈ ಮಸೂದೆ ಬಂದಾಗ ಇದೇ ಸಭೆಯಲ್ಲಿ ಇದಕ್ಕೆ ಬಹಳ ತೀವ್ರವಾದ ವಿರೋಧಗಳು ಬಂದಿದ್ದನ್ನು ತಮ್ಮ ಗಮನಕ್ಕೆ ತರಬೇಕೆಂದು ಇದ್ದೇನೆ.

3-30 P.M.

ಆ ಕಾಲದಲ್ಲಿ ಇಂತಹ ಶಾಸನ ಬಂದಾಗ ವಿರೋಧ ಪಕ್ಷದವರು ಯಾವ ರೀತಿ ವಿರೋಧ ಮಾಡುತ್ತಿದ್ದರು ಎನ್ನುವುದು ಹಿಂದೆ ಈ ಸಭೆಯಲ್ಲಿ ನಡೆದ ಪ್ರೊಸೀಡಿಂಗ್ಸ್ ಓದಿದರೆ ನಮಗೆ ಗೊತ್ತಾಗುತ್ತದೆ. ಅಂದು ಸರಕಾರದಲ್ಲಿ ಕಂದಾಯ ಸಚಿವರಾಗಿದ್ದ ಶ್ರೀಮಾನ್ ಕಡಿದಾಳ್ ಮಂಜಪ್ಪನವರಿಗೆ ಕೆಲ ಸದಸ್ಯರು ಶಾಪ ಹಾಕಿದರು ಎಂದೂ ಮತ್ತು ಆಗಿನ ಸಭೆಯಲ್ಲಿ ಕೆಲ ಸದಸ್ಯರು ಇಂತಹ ಒಂದು ಮಸೂದೆಯನ್ನು ತಾವು ತರುವುದಕ್ಕೆ ಹೊರಟಿರುವುದರಿಂದ ಇನ್ನು ಅರವತ್ತು ವರ್ಷಗಳ ಕಾಲ ನೀವು ಕ್ರಿಮಿಗಳಾಗಿ ಇಲ್ಲವೇ ಹುಳುವಾಗಿ ಹುಟ್ಟುತ್ತೀರಿ ಎಂದು ಹೇಳಿದ್ದಾರೆ. ಇವನ್ನೆಲ್ಲಾ ನಾವು

(ಶ್ರೀ ಬಿ. ವಿ. ಕಕ್ಕಿಲಾಯ)

ಆಗಿನ ಪ್ರೊಸೀಡಿಂಗ್ಸ್ ತೆಗೆದು ಓದಿದರೆ ಗೊತ್ತಾಗುತ್ತದೆ. ಆ ರೀತಿಯಾಗಿ ಆಗಿನ ಕಂದಾಯ ಸಚಿವರು ಅವರನ್ನು ಬಹಿರಂಗವಾಗಿ ಬೆದರಿಸುವ ಪರಿಸ್ಥಿತಿ ಇತ್ತು. ಆದರೆ ಇಂದು ಪರಿಸ್ಥಿತಿ ಬದಲಾಗಿದ್ದರೂ ಜನ ಬಾಯಿಗೆ ಬೀಗ ಹಾಕಿಕೊಂಡಿದ್ದರೂ ಬಹಿರಂಗವಾಗಿ ವಿರೋಧ ಮಾಡದೇ ಇದ್ದರೂ ಪರೋಕ್ಷವಾಗಿ ಇದಕ್ಕೆ ಇಲ್ಲದ ಅಡಚಣೆಗಳನ್ನು ತರುತ್ತಿದ್ದಾರೆ ಎಂದು ಇಲ್ಲಿ ಸ್ಪಷ್ಟವಾಗಿ ಹೇಳಲು ಇಷ್ಟಪಡುತ್ತೇನೆ. ಕೆಲವು ದಿವಸಗಳ ಹಿಂದೆ ನಮ್ಮ ಸರಕಾರದ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಬಸವಲಿಂಗಪ್ಪನವರು ಒಂದು ಹೇಳಿಕೆ ಕೊಟ್ಟರು. ಅದರಂತೆ ದೇಶದಲ್ಲಿರುವ ಹದಿಮೂರು ದೊಡ್ಡ ದೇವಾಲಯಗಳನ್ನು ಸರಕಾರವೇ ವಹಿಸಿಕೊಳ್ಳುತ್ತದೆ ಮತ್ತು ಇದರ ವ್ಯವಸ್ಥೆಯನ್ನು ಇನ್ನು ಮುಂದೆ ಸರಕಾರ ಮಾಡುತ್ತದೆ ಎಂದು. ಇದು ಬಂದ ಕೆಲವು ದಿನಗಳಾದ ಮೇಲೆ ರಾಜ್ಯದ ಮುಖ್ಯ ಮಂತ್ರಿಗಳು ಇಂತಹ ಯಾವ ದೇವಾಲಯಗಳನ್ನೂ ಸರಕಾರ ವಹಿಸಿಕೊಳ್ಳಲು ಉದ್ದೇಶಮಾಡಿಲ್ಲ ಎಂದು ಹೇಳಿಕೆ ಕೊಟ್ಟರು. ಹೀಗೆ ಒಂದಕ್ಕೊಂದು ವಿರುದ್ಧವಾದ ಹೇಳಿಕೆ ಕೊಟ್ಟು ಇದರಲ್ಲಿ ಮಂತ್ರಿಗಳು ಒಂದು ರೀತಿಯಾದ ನಾಟಕ ಮಾಡಲು ಹೊರಟಿದ್ದಾರೆ. ಇದರಿಂದೇನಾಗುತ್ತದೆ ಲಾಬಿ ಷುರುವಾಗುತ್ತದೆ, ಇದಕ್ಕೆ ಸಂಬಂಧಪಟ್ಟ ವ್ಯಕ್ತಿಗಳು ಅದಕ್ಕೆ ಬೇಕಾದ ವ್ಯವಸ್ಥೆಗಳನ್ನು ಮಾಡುತ್ತಾರೆ, ಇದರಲ್ಲಿ ಇಬ್ಬರು ಮಂತ್ರಿಗಳು ಅವರಿಗೆ ಗೊತ್ತಿಲ್ಲದ ಹೇಳಿಕೆಗಳನ್ನು ಕೊಟ್ಟರೋ ಇದು ಅವರ ಪಕ್ಷಕ್ಕೆ ಸಂಬಂಧಪಟ್ಟ ವಿಷಯ, ನಾನೇನೂ ಇದರ ಬಗ್ಗೆ ಹೇಳಬೇಕಾಗಿಲ್ಲ. ಇಂತಹ ಮಸೂದೆಗಳು ನಮ್ಮ ಮುಂದೆ ಬರುತ್ತವೆ ಎಂದು ರಾಜ್ಯದ ಮೂಲೆ ಮೂಲೆಗಳಿಂದ ಪ್ರಭಾವಶಾಲಿಗಳಾದ ವ್ಯಕ್ತಿಗಳು, ಜಮೀನುದಾರರು, ವಕೀಲರು, ಸಂಬಂಧಪಟ್ಟ ಜೋಡಿದಾರರುಗಳು, ಇನಾಂದಾರರುಗಳು ಇಲ್ಲಿಗೆ ಬಂದು ಮಂತ್ರಿಗಳಲ್ಲಿ ಅವರ ಪ್ರಭಾವವನ್ನು ಬೀರಿ ಮಂತ್ರಿಗಳೆಲ್ಲಾ ಅವರ ಜೋಬಿನಲ್ಲೇ ಇರುವಂತೆ ಹೇಳುತ್ತಾರೆ. ಆದುದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದು ಇಂತಹ ಮಸೂದೆಯನ್ನು ತರುವುದಕ್ಕೆ ಮೊದಲು ಈ ರೀತಿಯಾಗಿರುವ ಶಕ್ತಿಗಳನ್ನು ಮುರಿದರೆ ಅದರಿಂದೇನಾದರೂ ಪ್ರಯೋಜನವಾಗುತ್ತದೆ. ಅದೂ ಅಲ್ಲದೆ ಶ್ರೀ ಕಾಗೋಡು ತಿಮ್ಮಪ್ಪನವರು ಮತ್ತು ಇತರ ಸದಸ್ಯರುಗಳು ಹೇಳಿದ ಹಾಗೆ ಮೊದಲು ಭೂಸುಧಾರಣೆಗೆ ಆಗಬೇಕಾದ ತಿದ್ದುಪಡಿಗಳನ್ನು ಮಾಡಿ ಅದನ್ನು ಬೇಗನೆ ಶಾಸನವಾಗುವಂತೆ ಮಾಡಬೇಕು. ಇದರಲ್ಲಿರುವ ಪಾಳೆಯಗಾರಿಕೆಯನ್ನು ಮುರಿಯಬೇಕು ಈ ಪಾಳೇಗಾರರು ಧಾರ್ಮಿಕ ಹಾಗೂ ಮಠೀಯ ಸಂಸ್ಥೆಗಳನ್ನು ವಹಿಸಿಕೊಂಡು ಮೆರೆಯುತ್ತಿದ್ದಾರೆ. ಇವರ ಪ್ರಾಬಲ್ಯವನ್ನು ಮುರಿಯಬೇಕು. ಇಂತಹವರನ್ನು ಮುಂದುವರಿಸಿಕೊಂಡು ಇಂತಹ ಒಂದು ಮಸೂದೆ ತರುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಮಾನ್ಯ ಸಚಿವರು ಒಳ್ಳೆಯ ಉದ್ದೇಶದಿಂದ ಈ ಮಸೂದೆ ತಂದಿದ್ದರೂ ಮೊದಲು ಭೂಸುಧಾರಣೆಗೆ ಮಾಡಬೇಕಾದ ತಿದ್ದುಪಡಿಗಳನ್ನು ಮಾಡಿ ಈ ವರ್ಷದ ಕೊನೆಯೊಳಗಾಗಿ ಅದು ಜಾರಿಗೆ ಬರುವಂತೆ ಮಾಡಿ, ಇದಕ್ಕಾಗಿ ಬೇಕಾದರೆ ಈ ಶಾಸನ ಸಭೆಯನ್ನು ಮುಂದುವರಿಸಿ ಆದಷ್ಟು ಬೇಗ ಆ ಶಾಸನಕ್ಕೆ ಮಂಜೂರಾತಿ ಪಡೆಯಬೇಕೆಂದು ಹೇಳುತ್ತೇನೆ. ಅದೂ ಅಲ್ಲದೆ ಬರುವ ಆಗಸ್ಟು 15 ನೇ ತಾರೀಖು ಬೆಳ್ಳಿಯ ಹಬ್ಬವನ್ನು ಮಾಡಬೇಕೆಂದಿರುವ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಹೊಲ ಉಳುವವರೆಲ್ಲರಿಗೂ ಭೂಮಿ ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ ಮತ್ತು ಇದಕ್ಕಾಗಿ ರಿಕಾರ್ಡ್ ಆಫ್ ರೈಟ್ಸ್‌ಗಳ ಕಾರ್ಯವನ್ನೂ ಪೂರ್ಣವಾಗಿ ಆಗುವಂತೆ ವ್ಯವಸ್ಥೆ ಮಾಡಬೇಕು, ಇವೆರಡನ್ನೂ ಮಾಡಿದ ಮೇಲೆ ಧಾರ್ಮಿಕ ಸಂಸ್ಥೆಗಳ ಬಗ್ಗೆ ಸರಕಾರ ಯೋಚಿಸಬಹುದು. ಇಂದು ಧಾರ್ಮಿಕ ಸಂಸ್ಥೆಗಳ ಹೆಸರಿನಲ್ಲಿ ಭ್ರಷ್ಟಾಚಾರ ಭಕ್ತಾದಿಗಳು ಕೊಡುವ ಹಣದಿಂದ ನಡೆಯುತ್ತಿವೆ. ಇವನ್ನೆಲ್ಲಾ ಸರಿಯಾಗಿ ಪರಿಶೀಲಿಸಿ ಇವುಗಳ ವ್ಯವಸ್ಥೆಯನ್ನು ಸರಿ ಮಾಡಬೇಕು, ನಾನು ಹೇಳಿರುವ ಉದ್ದೇಶಗಳನ್ನು ಸರಕಾರ ಮನಸ್ಸಿಗೆ ತಗೆದುಕೊಂಡು ಮೊದಲು ಭೂಸುಧಾರಣೆ ಮಸೂದೆಗೆ ತಿದ್ದುಪಡಿ ತರಬೇಕೆಂದು ಹೇಳಿ ಅಧ್ಯಕ್ಷರು ನನಗೆ ಇಷ್ಟು ಮಾತಾಡಲು ಅವಕಾಶ ಕೊಟ್ಟದ್ದಕ್ಕೆ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಅಧ್ಯಕ್ಷರೇ, ಇಲ್ಲಿ ತಂದಿರುವ ಮಸೂದೆಯ ಒಂದು ಉದ್ದೇಶವನ್ನು ನೋಡಿದರೆ ಈ ಮಸೂದೆಯಿಂದ ಬಡವರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಇಂತಹ ಒಂದು ಮಸೂದೆಯನ್ನು ತರುವುದರಿಂದ ಸರಕಾರದ ಉದ್ದೇಶ ಪೂರ್ತಿಯಾಗುವುದಿಲ್ಲ ಎಂದು ಇಲ್ಲಿ ಹೇಳುತ್ತೇನೆ. ಇಂತಹ ಒಂದು ಮಸೂದೆ ಸರಕಾರ ತರುತ್ತದೆ ಎಂದು ಘೋಷಣೆ ಮಾಡಿದಾಗ ನಾನು ತಿಳಿದುಕೊಂಡಿದ್ದೆ ಇದರಲ್ಲಿ ಬಡಜನಕ್ಕೆ ಅನುಕೂಲವಾಗುತ್ತೆ ಎಂದು. ಇದರಲ್ಲಿ Exploitation of Riots will be removed, lock

stock barrel......ಎಂದು ತಿಳಿದುಕೊಂಡಿದ್ದೆ. ಆದರೆ ಇದನ್ನು ನೋಡಿ ತುಂಬಾ ನಿರಾಸೆಯಾಯಿತು. ಇದು ಬೊಂಬಾಯಿ ಹಾಗೂ ಹೈದರಾಬಾದು ಭಾಗಗಳ ಕಡೆಗೆ ಅನ್ವಯವಾಗುವ ಮಸೂದೆ ಎಂದು ದೇವರ ಹೆಸರಿನಲ್ಲಿ ತಂದು ಇಲ್ಲಿ ಎಕ್ಸ್‌ಪ್ಲಾಯಿಟ್ ಮಾಡುತ್ತಿದ್ದಾರೆ. ಎಷ್ಟು ಕೀಳು ದರ್ಜೆಗೆ ಇದರಲ್ಲಿ ಇಳಿದಿದ್ದಾರೆ ಎಂದು ಹೇಳಲು ಕೆಲವು ಉದಾಹರಣೆಗಳನ್ನು ಕೊಡಬಹುದು. ಉದಾಹರಣೆಯಾಗಿ ನಮ್ಮ ಭಾಗದಲ್ಲಿ ಒಂದೂರಿನಲ್ಲಿ ಕುಲಕರ್ಣಿ ಎನ್ನುವವರು ಒಬ್ಬರು ಇರುತ್ತಾರೆ ಅವರು ವರ್ಷಕ್ಕೆ ಐದು ರೂಪಾಯಿ ಕಂದಾಯ ಕೊಡುತ್ತಾರೆ. ಆದರೆ ಅವರ ಭೂಮಿ ಯಾರ ಹೆಸರಿನಲ್ಲಿದೆ ಎಂದು ನೋಡಿದರೆ ಅದು ಹನುಮಪ್ಪನ ಹೊಲ ಸರ್ವೆ ನಂಬರು 29 ಎಂದು ಇರುತ್ತದೆ, ಇಲ್ಲಿನ ಕುಲಕರ್ಣಿ ಇದರ ಅನುಭವ ಪಡೆಯುತ್ತಿರುತ್ತಾನೆ, ಹೀಗೆ ದೇವರ ಹೆಸರಿನಲ್ಲಿ ನೂರಾರು ಎಕರೆಗಳಷ್ಟು ಭೂಮಿ ಪಡೆದು ಅನುಭವಿಸುತ್ತ ಬರುತ್ತಿದ್ದಾರೆ. ಇದು ನೂರು ಹಾಗೂ ಇನ್ನೂರು ವರ್ಷಗಳಿಂದಲೂ ನಡೆಯುತ್ತಾ ಬರುತ್ತಿದೆ. ಹೆಸರು ಮಾತ್ರ ಹೊಲದಲ್ಲಿ ದೇವರ ಗುಡಿ ಹೆಸರು, ಇದರ ಅನುಭವ ಪಡೆಯುವವರು ಬೇರೆ ಯಾರೋ ಒಬ್ಬರು. ಇಲ್ಲಿ ಹೀಗೆ ಶ್ರೀಮಂತರು ಭೂಮಿಯನ್ನು ದೇವರ ಹೆಸರಿನಲ್ಲಿ ಇಟ್ಟುಕೊಂಡು ಅನುಭವಿಸಿಕೊಂಡು ಬರುತ್ತಿದ್ದಾರೆ ಮತ್ತು ಇದರ ದುರುಪಯೋಗ ದೇವರ ಹೆಸರಿನಲ್ಲಿ ನಡೆಯುತ್ತಿದೆ. ಈ ರೀತಿಯಾಗಿ ಜನ ತರ್ಡ್‌ರೇಟಿಗೆ ಇಳಿದು ಇಂದು ಲಕ್ಷಾಂತರ ಎಕರೆ ಭೂಮಿ ಪಡೆದು ಕಾರುಗಳಲ್ಲಿ ಅಡ್ಡಾಡುತ್ತಿದ್ದಾರೆ, ಕೋರ್ಟಿನಲ್ಲಿ ಪರ್ಸನಲ್ ಪ್ರಾಪರ್ಟಿ ಎಂದು ಡಿಕ್ಲರೇಷನ್ ಪಡೆದರೆ ಸಾಕು ಇವರ ಹೆಸರಿನಲ್ಲೇ ಎಲ್ಲ ಕಾರು ಇತ್ಯಾದಿ ಸಾಮಾನುಗಳೂ ಇರುತ್ತವೆ. ಹಿಂದೆ ಯಾವ ರೀತಿ ಸರಕಾರ ಇದನ್ನು ನೋಡಿಕೊಂಡು ಕಣ್ಣುಮುಚ್ಚಿಕುಳಿತುಕೊಂಡು ಬರುತ್ತಿತ್ತು? ಇಂದೂ ಕೂಡ ಬೇರೆ ಸರಕಾರ ಬಂದರೂ ಕೂಡ ಇದರಲ್ಲಿರುವ ನಮ್ಮ ಅಣ್ಣ ತಮ್ಮಂದಿರು ಕೂಡ ಅದೇ ತಪ್ಪನ್ನು ಇನ್ನೂ ಮುಂದುವರಿಸುತ್ತಾ ಬರುತ್ತಿದ್ದಾರೆ. ಇದರ ಜೊತೆಗೆ ಸಹಕಾರ ಕೊಡಬೇಕು ಎಂದರೆ ನಾವು ಹೇಗೆ ಸಹಕಾರ ಕೊಡುವುದು ? ಇದರಲ್ಲಿ ಯಾವ ಪಾರ್ಟಿಗಳ ವಿಚಾರ ಬರುವುದಿಲ್ಲ. ಇದಕ್ಕಾಗಿ ಮಾನ್ಯ ಸರಕಾರದವರು ಅಪೋಸಿಷನ್‌ನಲ್ಲಿರುವ ಸದಸ್ಯರನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಇದರ ಬಗ್ಗೆ ಏನಾದರೂ ಪರಿಶೀಲನೆ ಮಾಡುತ್ತಿದ್ದಾರೆಯೋ ಎಂದು ಕೇಳಬೇಕಾಗಿದೆ, ಸುಮ್ಮನೆ ಇಲ್ಲಿ ಒಂದು ಮಸೂದೆಯನ್ನು ಬರೆಸಿ ಇಲ್ಲಿ ಪಾಸು ಮಾಡಬೇಕೆಂದು ತಂದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಈಗ ಸರ್ಕಾರದವರು ಏನು ಬಿಲ್ ತಂದಿದ್ದಾರೆ, ಅದರ ಉದ್ದೇಶ ಏನೂ ಕೆಟ್ಟದ್ದು ಇಲ್ಲ. ಆದರೆ ಅದನ್ನು ತರುವುದಕ್ಕೆ ಮೊದಲು ವಿರೋಧಪಕ್ಷದ ಸದಸ್ಯರ ಅಭಿಪ್ರಾಯವನ್ನು ಅದರಲ್ಲೂ ಮುಖ್ಯವಾಗಿ ಹೈದರಾಬಾದ್ ಮತ್ತು ಮುಂಬೈ ಕರ್ನಾಟಕ ಪ್ರದೇಶದಿಂದ ಬಂದಿರುವ ಸದಸ್ಯರ ಅಭಿಪ್ರಾಯವನ್ನು ಪಡೆದುಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ವಿರೋಧಪಕ್ಷದ ಸದಸ್ಯರ ಅಭಿಪ್ರಾಯ ಪಡೆದುಕೊಳ್ಳುವುದಕ್ಕೆ ಸರ್ಕಾರದವರಿಗೆ ಇಚ್ಛೆ ಇಲ್ಲದಿದ್ದರೆ, ಅವರ ಪಕ್ಷದ ಸದಸ್ಯರ ಅಭಿಪ್ರಾಯವನ್ನಾದರೂ ಪಡೆದುಕೊಳ್ಳಬಹುದಾಗಿತ್ತು. ಆದರೆ ಅದನ್ನು ಸಹ ಮಾಡಿಲ್ಲ. ಇದರಿಂದಲೇ ನಮಗೆ ಸಂಶಯಕ್ಕೆ ಎಡೆ ಕೊಡುತ್ತದೆ. ನಮ್ಮ ದೇಶದಲ್ಲಿ ಯಾವುದೇ ಒಂದು ಮತಕ್ಕೆ ಸಂಬಂಧಿಸಿದ ಭೂಮಿ ಏನಿದೆ ಅದನ್ನು ರೈತನ ಜಮೀನು ಎಂದು ಸಾರುವ ಬಗ್ಗೆ ಈ ಬಿಲ್‌ನಲ್ಲಿ ಒಂದು ಶಬ್ದವಿಲ್ಲ. ಇಂದು ನಮ್ಮ ರಾಜ್ಯದಲ್ಲಿ ಹಿಂದೂ ಧರ್ಮಕ್ಕೆ, ಮುಸ್ಲಿಂ ಧರ್ಮಕ್ಕೆ, ಕ್ರೈಸ್ತ ಧರ್ಮಕ್ಕೆ ಸೇರಿದ ಜಮೀನುಗಳಿವೆ. ದೇವರಿಗೇನೂ ಜಮೀನು ಬೇಕಾಗಿಲ್ಲ. ಆದರೆ ದೇವರ ಹೆಸರಿನಲ್ಲಿ ದಳ್ಳಾಳಿಗಳು ಅದರ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಇನ್ನು ಮುಂದೆ ದೇವರ ಹೆಸರು ಹೇಳಿಕೊಂಡು ಜಮೀನನ್ನು ಅನುಭವಿಸುವುದಕ್ಕೆ ಅವಕಾಶ ಕೊಡಬೇಡಿ. ಅದನ್ನು ಕೂಡಲೆ ಬಂದ್ ಮಾಡಿ. ಟೆನೆನ್ಸಿ ಆಕ್ಟ್ ಮತ್ತು ಲ್ಯಾಂಡ್‌ರಿಫಾರಮ್ಸ್ ಆಕ್ಟ್‌ಗಳಿಗೆ ಏನು ಡೆಫೆನಿಷನ್ ಕೊಡಲಾಗಿದೆಯೋ ಅದನ್ನೇ ಈ ಬಿಲ್‌ಗೂ ಸಹ ಕೊಡಬೇಕೆಂದು ನಾನು ಹೇಳುತ್ತೇನೆ. ಒಬ್ಬ ರೈತ ಒಂದು ವರ್ಷದಿಂದ ಜಮೀನು ಸಾಗುವಳಿ ಮಾಡುತ್ತಿದ್ದರೂ ಸಹ ಅದನ್ನು ಅವನಿಗೇ ಖಾಯಂ ಮಾಡುವ ವ್ಯವಸ್ಥೆ ಮಾಡಬೇಕು. ಆದರೆ ಈಗ ಈ ಒಂದು ಗ್ಯಾರಂಟಿಯನ್ನು ಮತ್ತು ರಕ್ಷಣೆಯನ್ನು ಅವನಿಗೆ ಕೊಡುತ್ತಿಲ್ಲ. ಏಕ್‌ಸಾಲ್ ಲಾವಣಿ ಎಂಬುದು ನಮ್ಮ ಭಾಗದಲ್ಲಿ ಇದೆ. ಅಂದರೆ ಸಾಗುವಳಿ ಮಾಡುವವರು ಒಬ್ಬರಾದರೆ ಅದರ ಆದಾಯವನ್ನು ಅನುಭವಿಸುವರು ಊರಿನ ಪುಡಾರಿಗಳು, ಕುಲಕರ್ಣಿಗಳು ಮುಂತಾದವರು ಆಗಿರುತ್ತಾರೆ. ಮತ್ತು ಒಬ್ಬನೇ 25 ವರ್ಷದಿಂದ ಸಾಗುವಳಿ ಮಾಡುತ್ತಿದ್ದರೂ ಸಹ, ಒಂದು ವರ್ಷದಿಂದ ಆ ಜಮೀನನ್ನು ಸಾಗುವಳಿ ಮಾಡುತ್ತಿದ್ದಾನೆ ಎಂಬುದಾಗಿ ರೆಕಾರ್ಡ್‌ನಲ್ಲಿ ಬರೆಯುತ್ತಾರೆ. ಇದರಿಂದ ಆತನಿಗೆ ಜಮೀನಿನ ಹಕ್ಕು ಸಿಗುವುದಕ್ಕೆ ಅವಕಾಶವಾಗುವುದಿಲ್ಲ. ಪ್ರತಿವರ್ಷವೂ ಸಹ ಜಮೀನು ಸಾಗುವಳಿ ಮಾಡುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಹರಾಜು ಹಾಕುತ್ತಾರೆ. ಆದರೆ ಅದನ್ನು ಪಡೆಯುವುದು ಹಿಂದಿನಿಂದ ಮಾಡಿಕೊಂಡು ಬಂದಿರುವ ರೈತರೇ. ಇನ್ನೊಂದು ಮುಖ್ಯವಾದ ಅಂಶವೆಂದರೆ ಹಿಂದೂ ದೇವಾಲಯಗಳಿಗೆ ಸೇರಿದ ಜಮೀನನ್ನು ಹರಿಜನರು ಸಾಗುವಳಿ ಮಾಡುತ್ತಿರುತ್ತಾರೆ. ಆದರೆ ಅವರಿಗೆ ಆ ಜಮೀನಿನ ಮೇಲೆ ಹಕ್ಕು ಮಾತ್ರ ಇರುವುದಿಲ್ಲ.

(ಶ್ರೀ ವಿ. ಎನ್. ಪಾಟೀಲ್)

ಇಂದು ಲೋಕೋಪಯೋಗಿ ಇಲಾಖೆಯಲ್ಲಿಯೂ ಸಹ 30 ದಿವಸ ಕೆಲಸ ಮಾಡಿಸಿಕೊಂಡು 29 ದಿವಸಕ್ಕೆ ಸಂಬಳ ಕೊಡುತ್ತಿದ್ದಾರೆ. ಈ ರೀತಿ ಕೆಲಸ ಮಾಡುವವರನ್ನು ವರ್ಕ್ ಚಾರ್ಜ್ಡ್ ಎಂಪ್ಲಾಯೀಸ್ ಎಂದು ಕರೆಯಲಾಗುತ್ತದೆ. ಅಂದರೆ ಇವರು ಯಾವಾಗಲೂ ಹಂಗಾಮಿ ನೌಕರರಾಗಿಯೇ ಇರಬೇಕು. ಕಾಯಂ ಮಾಡುವ ಪ್ರಶ್ನೆಯೇ ಇಲ್ಲ. ಮಾನ್ಯ ಚನ್ನಬಸಪ್ಪನವರ ಕಾಲದಲ್ಲಿಯಾದರೂ ವರ್ಕ್ ಚಾರ್ಜ್ಡ್ ಎಂಬ ಶಬ್ದವನ್ನು ತೆಗೆಯುತ್ತಾರೆಂದು ನಾನು ನಂಬಿದ್ದೇನೆ. ಕಾಯಂ ಮಾಡುವುದು ಅವಶ್ಯಕವಿದ್ದರೂ ಸಹ ಮಾಡುತ್ತಿಲ್ಲ. ಅಂದಮೇಲೆ fictitious personality, juridical personality, and factual personality ಏನಾದರೂ ವ್ಯತ್ಯಾಸ ಇದೆಯೇ ಎಂದು ಕೇಳುತ್ತೇನೆ. ಬಾಯಿ ಮಾತಿನಲ್ಲಿ ಸಮಾಜವಾದದ ಮಾತನಾಡುತ್ತಾರೆಯೇ ಹೊರತು ಅದನ್ನು ಜಾರಿಯಲ್ಲಿ ತರುತ್ತಿಲ್ಲ. ಇಂದು ಗೇಣಿದಾರರಿಗೆ ಎಷ್ಟೆಷ್ಟು ರೀತಿಯಿಂದ ಅನ್ಯಾಯಗಳಾಗುತ್ತಿವೆ ಎಂಬುದನ್ನು ಸರ್ಕಾರದವರು ಗಮನದಲ್ಲಿ ಇಟ್ಟುಕೊಂಡು, ಅದನ್ನೆಲ್ಲಾ ಸರಿಪಡಿಸಬೇಕು. ಇಂದು ದೇವರ ಹೆಸರಿನಲ್ಲಿ ಅನ್ಯಾಯವಾಗುತ್ತಿದೆ. ಇಂದು ದೇವರ ಹೆಸರು ಹೇಳಿಕೊಂಡು ಎಷ್ಟು ಜನರು ಜಮೀನನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ, ಆ ರಾಕ್ಷಸರ ಕೈಯಿಂದ ಆ ಜಮೀನುಗಳನ್ನು ಬಿಡಿಸಿ ಗೇಣಿದಾರರಿಗೇ ಕಾಯಂ ಮಾಡಬೇಕೆಂದು ಹೇಳುತ್ತೇನೆ. ನಮ್ಮಲ್ಲಿ ಗೋಸ್ವಾಮಿ ಪಂಗಡ ಎಂಬುದು ಇದೆ. ಅವರು ಸುಮಾರು 400 ವರ್ಷಗಳ ಹಿಂದೆ ರಾಜರ ಆಶೀರ್ವಾದ ಪಡೆದುಕೊಂಡು ಪಡೆದುಕೊಂಡ ಜಮೀನನ್ನು ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ. ಸರ್ಕಾರದವರು ಯಾವ ಒಂದು ಸೈಂಟಿಫಿಕ್ ಅಪ್ರೋಚ್ ಇಟ್ಟುಕೊಂಡು ಅವರೇ ಅನುಭವಿಸಿಕೊಂಡು ಬರುವುದಕ್ಕೆ ಅವಕಾಶ ಕೊಟ್ಟಿದ್ದಾರೆಂದು ಕೇಳುತ್ತೇನೆ. If you say that one year's tenant is not a permanent tenant, is it not an insult to democracy ; an insult to the Constitution ; and if it is so, please remove it or wipe it out. ಮಾನ್ಯ ಮಂತ್ರಿಯವರು ಗೇಣಿದಾರರಿಗೆ ಎಲ್ಲ ರೀತಿಯ ರಕ್ಷಣೆಯನ್ನು ಕೊಡುವ ಬಗ್ಗೆ ಭರವಸೆ ಕೊಡಬೇಕು. ನೆನ್ನೆ ದಿವಸ ನಾವು ಫ್ಯಾಮಿನ್ ರಿಲೀಫ್ ಬಗ್ಗೆ ಕೇಳಿದ ನಾನಾ ಪ್ರಶ್ನೆಗಳಿಗೆ ಮಾನ್ಯ ಮಂತ್ರಿಯವರು ಎಲ್ಲವನ್ನು ಗಮನದಲ್ಲಿ ಇಟ್ಟುಕೊಂಡಿದ್ದೇನೆ, ಅದಕ್ಕೆಲ್ಲಾ ಗಮನ ಕೊಡುತ್ತೇನೆ ಎಂದು ಹೇಳಿಬಿಟ್ಟರು. ಅದೇ ರೀತಿಯ ಉತ್ತರವನ್ನು ಇಂದು ಸಹ ಗೇಣಿದಾರರ ಬಗ್ಗೆ ಕೊಡಬಾರದು. ತಮ್ಮ ಕಡೆ ಮೆಜಾರಿಟಿ ಇದೆ ಎಂದು ಸದಸ್ಯರ ಕೈಎತ್ತಿಸಿ ಬಿಲ್‌ನ್ನು ಪಾಸ್ ಮಾಡಿಬಿಡಬಹುದು. ಆದರೆ ಅದರಿಂದ ಗೇಣಿದಾರರಿಗೆ ರಕ್ಷಣೆ ಕೊಟ್ಟಂತಾಗುವುದಿಲ್ಲ. ಮತ್ತು ಸಮಾಜವಾದವನ್ನು ಜಾರಿಗೆ ತಂದಂತಾಗುವುದಿಲ್ಲ. ಈಗ ಏನು ಬೋನಾಫೈಡ್ ಮಿಸ್ಟೇಕ್‌ಗಳು ಆಗುತ್ತಿವೆ ಅವನ್ನು ಮುಖ್ಯವಾಗಿ ತಡೆಗಟ್ಟಬೇಕು. ವಕ್ಫ್ ಲ್ಯಾಂಡ್ಸ್ ಬಗ್ಗೆ ಈ ಬಿಲ್‌ನಲ್ಲಿ ಯಾವ ಮಾತನ್ನು ಸಹ ಹೇಳಿಲ್ಲ. ಅದನ್ನು ಸಹ ಇದರಲ್ಲಿ ಸೇರಿಸಬೇಕಾಗಿತ್ತು. ಮುಖ್ಯವಾಗಿ ನಾನು ಸರ್ಕಾರದವರನ್ನು ಕೇಳಿಕೊಳ್ಳುವುದೇನೆಂದರೆ, ಯಾವ ಒಂದು ಮಠಧರ್ಮಕ್ಕೆ ಸೇರಿದ ಜಮೀನೇ ಇರಲಿ, ಆ ಎಲ್ಲ ಜಮೀನನ್ನು ಸಹ ಈಗ ಯಾರು ಗೇಣಿಗೆ ಮಾಡುತ್ತಿದ್ದಾರೋ ಅವರಿಗೇ ಕಾಯಂ ಮಾಡಬೇಕೆಂದು ಹೇಳುತ್ತೇನೆ. ಆ ರೀತಿ ಮಾಡುವುದು ಸರ್ಕಾರದ ಧರ್ಮ ಎಂದು ನಾನು ತಿಳಿದುಕೊಂಡಿದ್ದೇನೆ. ಮತ್ತು ಅಪ್ಪರ್‌ಮೋಸ್ಟ್ ಡ್ಯೂಟಿ ಎಂದು ತಿಳಿದುಕೊಳ್ಳುತ್ತೇನೆ. ಈಗ ನಾವು ತಿಳಿದುಕೊಂಡಂತಹ ರೀತಿಯಲ್ಲಿ ಬಿಲ್‌ನ್ನು ಸಭೆಯ ಮುಂದೆ ತಂದಿಲ್ಲ.

ನಮ್ಮ ದೇಶದಲ್ಲಿ ಪ್ರತಿಯೊಂದು ಕಾಯಿದೆಯೂ ಕೂಡ ಧಾರ್ಮಿಕವಾಗಿ ಕಾಣುತ್ತವೆ. ಯಾವುದೇ ಒಂದು ಧರ್ಮವಾಗಲೀ ನ್ಯಾಯವಾಗಿರತಕ್ಕದ್ದು ಅನ್ಯಾಯವಾಗಲಾರದು. ಜಹಗೀರಿಗಳು ಹಿಂದೆ ಬೇಕಾದಷ್ಟು ಆಗಿವೆ. ಒಂದು ಟಾಮ್ ಟಾಮ್ ಹಾಕುವುದಕ್ಕೆಲ್ಲಾ ಒಂದು ಇನಾಮ್ ಇದೆ. ಅಂಥ ಇನಾಮ್ದಾರರಾಗಿರುವವರೆಲ್ಲರೂ ಇವೊತ್ತು ಕಾಂಪೆನ್‌ಸೇಷನ್ ತೆಗೆದುಕೊಳ್ಳುವಂತೆ ಪರಿಸ್ಥಿತಿ ಬರುತ್ತಿದೆ. ನಮ್ಮ ಬೀದರ್ ಜಿಲ್ಲೆಯಲ್ಲಿ ಏಕ್‌ಸಾಲ್ ಲಾವಣಿದಾರರು ಎಂದು 100ಕ್ಕೆ 90 ಜನ ಟೆನೆಂಟ್ಸ್ ಇದ್ದಾರೆ. ಅವರಿಗೆ ಇದರಲ್ಲಿ ಯಾವರೀತಿ ರಕ್ಷಣೆ ಕೊಡುತ್ತೀರಿ. ಪ್ರತಿಯೊಂದು ಗ್ರಾಮದಲ್ಲಿಯೂ ಇನಾಮ್ ಜಮೀನು ಮಾಡತಕ್ಕ ಎಷ್ಟೋ ಜನ ರೈತರು ಇದ್ದಾರೆ. ಆದ್ದರಿಂದ ಆ ಹಳ್ಳಿಗಳಿಗೆ ರೆವಿನ್ಯೂ ಇನ್‌ಸ್ಪೆಕ್ಟರ್ ಮತ್ತು ತಹಶೀಲ್ದಾರರನ್ನು ಕಳುಹಿಸಿ ಎನ್‌ಕ್ವೈರಿ ಮಾಡಿ ಈ ಇನಾಮ್ ಜಮೀನುಗಳಿಗೆ ಸಂಬಂಧಪಟ್ಟ ಜಮೀನನ್ನು ಯಾರು ಯಾರು ವ್ಯವಸಾಯ ಮಾಡುತ್ತಿದ್ದಾರೆಯೋ ಅದನ್ನು ಅವರಿಗೆ ಕೊಡುವಂತಹ ಒಂದು ವ್ಯವಸ್ಥೆ ಮಾಡಬೇಕು. ಇನ್ನು ಕೆಲವರು ಸುಮಾರು 100 ವರ್ಷಗಳಿಂದಲೂ ಇನಾಮ್ ಭೂಮಿಯನ್ನು ಗೇಣಿಗೆ ಮಾಡಿಕೊಂಡು ಬರುತ್ತಿದ್ದಾರೆ. ಅವರಿಗೆ ಯಾವುದೇ ಒಂದು ರೆಕಾರ್ಡ್ಸ್ ಇಲ್ಲದಿದ್ದರೂ ಕೂಡ ಅವರ ಹೆಸರಿನಲ್ಲಿ ಪಹಣಿ ಇದ್ದರೆ

ಅಂಥವರಿಗೂ ಕೂಡ ಈ ಇನಾಮ್ ಜಮೀನು ಮಾಡಿಕೊಡುವಂತಹ ವ್ಯವಸ್ಥೆ ಮಾಡಬೇಕು. ನಮ್ಮಲ್ಲಿ 100 ಕ್ಕೆ 75 ಜನ ಗೇಣಿದಾರರು ಇದ್ದಾರೆ. ಅವರ ಆರ್ಥಿಕ ಸ್ಥಿತಿ ಅಷ್ಟೊಂದು ಚೆನ್ನಾಗಿಲ್ಲ. ಎಷ್ಟೋ ಜನ ರೈತರು ಜಮೀನಿಗೆ ಕಂದಾಯವನ್ನು ಕಟ್ಟಿ ಶ್ಯಾನುಭೋಗರಿಂದ ರಶೀತಿಯನ್ನು ತೆಗೆದುಕೊಳ್ಳುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿ ಇದೆ. ಮಾನ್ಯ ರೆವಿನ್ಯೂ ಮಂತ್ರಿಗಳು ನಮ್ಮ ಹೈದರಾಬಾದ್ ಕರ್ನಾಟಕಕ್ಕೆ ಮೂರು ದಿವಸ ಟೂರ್ ಪ್ರೋಗ್ರಾಮ್ ಹಾಕಿಕೊಂಡು ಬಂದ್ರೆ ಅಲ್ಲಿ ಏನು ನಿಜವಾದ ಪರಿಸ್ಥಿತಿ ಇದೆ ಎಂಬುದು ಗೊತ್ತಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ನಾನಾ ನಮೂನೆಯ ರಾಜಕೀಯ ಮಾಡುತ್ತಿದ್ದಾರೆ. ಒಬ್ಬವ್ಯಕ್ತಿಗೆ ಅವನು ಕಮ್ಯುನಿಸ್ಟ್ ಪಾರ್ಟಿಗೆ ಸೇರಿದವನು ಎನ್ನುವ ದ್ವೇಷದಿಂದ ಅವನಿಗೆ ಅನ್ಯಾಯ ಮಾಡಬೇಕೆಂದು ಅವನನ್ನು ಹಿಡಿದುಕೊಂಡು ಹೋಗಿ ಪೋಲೀಸ್‌ಸ್ಟೇಷನ್‌ನಲ್ಲಿ ಲಾಕಪ್‌ನಲ್ಲಿ ಇಟ್ಟಿದ್ದರು. ಕೆಲವು ಜಮೀನ್ದಾರರು ಪಹಣಿಯನ್ನು ಬದಲಾಯಿಸಿ ಜಮೀನನ್ನು ವಶಪಡಿಸಿಕೊಳ್ಳುವಂತಹ ಪ್ರಯತ್ನ ಕೂಡ ನಡೆದಿದೆ. ಗೇಣಿ ಜಮೀನಿನ ಸಂಬಂಧದಲ್ಲಿ ರೈತರಿಗೆ ನಾನಾ ರೀತಿಯಾದ ತೊಂದರೆಗಳಾಗುತ್ತಿವೆ. ಯಾವುದೇ ಒಂದು ಜಮೀನಿನ ಸಂಬಂಧ ರೈತರು ಪೋಲೀಸಿನವರಿಗೆ ಕಂಪ್ಲೇಂಟ್ ಕೊಟ್ಟರೆ ಅದನ್ನು ತೆಗೆದುಕೊಳ್ಳದೇ ಇರುವಂತಹ ಎಕ್ಸ್‌ಪ್ಲಾಯ್‌ಟೇಷನ್ ನಡೆಯುತ್ತಿದೆ. ಈ ಕಾನೂನನ್ನು ಜಾರಿಗೆ ತರುವ ಮುನ್ನ ಗೇಣಿದಾರನಿಗೆ ಸಾಕಷ್ಟು ಜಮೀನು ಹಕ್ಕು ಸಾಧಿಸುವ ಸಾಮರ್ಥ್ಯ ಮತ್ತು ಅದಕ್ಕೆ ಸಂಬಂಧಿಸಿ ಪಹಣಿ ಕಾಗದ ಪತ್ರಗಳು ಇವೆಯೋ ಎಂಬುದನ್ನು ಸರ್ಕಾರದವರು ಪರಿಶೀಲಿಸಿ ಒಂದುವೇಳೆ ಅವು ಇಲ್ಲದೇ ಹೋದರೆ ಅವನಿಗೆ ರಕ್ಷಣೆಕೊಡಲು ಅವುಗಳನ್ನು ಒದಗಿಸಿ ಅವನಿಗೆ ಜಮೀನು ದೊರಕುವಂತಹ ಅವಕಾಶವನ್ನುಂಟು ಮಾಡಬೇಕು. ಇವೊತ್ತಿನ ಪ್ರಜಾಪ್ರಭುತ್ವದಲ್ಲಿ ಸಮಾಜವಾದ ತತ್ವಕ್ಕೆ ಅನುಗುಣವಾಗಿ ನೀವು ಕಾಯಿದೆಯನ್ನು ತರುವುದಾದರೆ ಹೈದರಾಬಾದ್ ಕರ್ನಾಟಕದ ಧರ್ಮಾದಾಯ ಜಮೀನಿನಲ್ಲಿ ಉಳುವ ಎಲ್ಲ ವರ್ಗಗಳ ಗೇಣಿದಾರರಿಗೆ ಜಮೀನು ಖಾಯಂ ಆಗುವಂತೆ ಮಾಡಬೇಕು. ನಮ್ಮ ಬೀದರ್ ಜಿಲ್ಲೆಗೆ ಮಾನ್ಯ ರೆವಿನ್ಯೂ ಮಂತ್ರಿಗಳು ಪ್ರವಾಸಬರಬೇಕು. ತಾವೇನಾದರೂ ಅಲ್ಲಿಗೆ ಪ್ರವಾಸ ಬಂದರೆ ನಾವು ತಮಗೆ ಹೂವಿನ ಹಾರ, ಸುಗಂಧದ್ರವ್ಯ ಯಾವುದನ್ನೂ ಹಾಕುವುದಿಲ್ಲ. ಆ ಹಳ್ಳಿಗಳ ಪ್ರತಿ ಕಾರ್ಮಿಕರ ರೈತರ ಕಣ್ಣೀರು ಹನಿಗಳ ಸರವನ್ನು ನಾವು ತಮಗೆ ಹಾರವನ್ನು ಹಾಕುತ್ತೇವೆ. ಅದರ ಸಲುವಾಗಿ ತಾವು ನಮ್ಮ ಬೀದರ್ ಜಿಲ್ಲೆಗೆ ಬರಬೇಕು. ಅಲ್ಲಿನ ರೈತರ ಕಷ್ಟಪರಿಸ್ಥಿತಿಯನ್ನು ಕಣ್ಣಾರೆ ನೋಡಬೇಕು. ಈಗ ತಾವು ತಂದಿರತಕ್ಕ ಕಾಯಿದೆ ಏನಿದೆ ಅದರ ಪ್ರಕಾರ ಹೈದರಾಬಾದ್ ಕರ್ನಾಟಕ ಮತ್ತು ಬೊಂಬಾಯಿ ಕರ್ನಾಟಕ ಪ್ರದೇಶಗಳಿಗೂ ಈ ಕಾಯಿದೆಯನ್ನು ಅನ್ವಯಿಸುವುದಕ್ಕೆ ತಾವು ಹೊರಟಿದ್ದೀರಿ, ಹೈದರಾಬಾದ್ ಕರ್ನಾಟಕದಲ್ಲಿ ರೈತರಿಗೆ ಬಹಳ ಎಕ್‌ಪ್ಲಾಯ್‌ಟೇಷನ್ ನಡೆಯುತ್ತಿದೆ. ಆದ್ದರಿಂದ ಇದರ ಉದ್ದೇಶ ಸಫಲವಾಗಬೇಕಾದರೆ ಇದನ್ನು ಸ್ವಲ್ಪ ಯೋಚನೆ ಮಾಡಿ ಇದರಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕು ಮತ್ತು ಇದು ಎಲ್ಲಾ ಮತೀಯ ಧರ್ಮಸಂಸ್ಥೆಗಳಿಗೂ ಅನ್ವಯಿಸುತ್ತದೆ ಎಂದು ಹಾಕಬೇಕು. ದೇವರಿಗೆ ಜಮೀನು ಬೇಕಾಗಿಲ್ಲ. ಆದರೆ ದೇವರ ಏಜೆನ್ಸಿಗಳಿಗೆ ಈ ಜಮೀನು ಬೇಕಾಗಿದೆ. ಗೇಣಿದಾರರು ಎಲ್ಲರೂ ಜಮೀನಿನ ಮಾಲಿಕರಾಗುವಂತೆ ಕ್ರಮ ಕೈಗೊಳ್ಳಬೇಕು. ಈ ಇನಾಮ್ ಜಮೀನನ್ನು ಗೇಣಿದಾರ ಒಂದು ವರ್ಷ ಗೇಣಿಗೆ ಮಾಡಿದ್ದರೂ ಕೂಡ ಅವರಿಗೂ ಈ ಒಂದು ಕಾಯಿದೆ ಅನ್ವಯವಾಗುವಂತೆ ಮಾಡಬೇಕು. ಏಕ್‌ಸಾಲ್ ಲಾವಣಿ ಜಮೀನಿನ ಟೆನೆಂಟ್ಸ್ ಏನಿದ್ದಾರೆ ಅವರಿಗೂ ಸಹ ಜಮೀನಿನ ಮಾಲೀಕತ್ವ ಸಿಕ್ಕುವಂತೆ ಮಾಡಬೇಕು. ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಮಾನ್ಯ ಉಪಾಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಇವೊತ್ತು ಈ ಸಭೆಯ ಮುಂದೆ ಮಾನ್ಯ ಕಂದಾಯ ಮಂತ್ರಿಗಳು ತಂದಿರತಕ್ಕ ಮೈಸೂರು ರಾಜ್ಯದ (ಮುಂಬಯಿ ಹಾಗೂ ಹೈದರಾಬಾದ್ ಪ್ರದೇಶಗಳ) ಮತ ಸಂಬಂಧವಾದ ಹಾಗೂ ಧರ್ಮಾದಾಯ ಇನಾಂ ರದ್ದಿಯಾತಿಗೆ ಸಂಬಂಧಿಸಿದ ವಿಧೇಯಕವನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತಾ ಅನೇಕ ವಿಷಯಗಳನ್ನು ನಾನು ತಮ್ಮ ಮುಂದೆ ಹೇಳಬೇಕಾಗಿದೆ. ನನ್ನ ಸ್ನೇಹಿತರು ಈಗಾಗಲೇ ಹೇಳಿದರು. ಶೃಂಗೇರಿಯಿಂದ ಬಂದಿರತಕ್ಕ ಸದಸ್ಯರಿಗೆ ಈ ಮಸೂದೆಯಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡಿ, ಅವರು ಈ ಬಗ್ಗೆ ಚೆನ್ನಾಗಿ ಮಾತನಾಡುತ್ತಾರೆ ಎಂದು, ಅದು ನಿಜ. ನಾವು ನಮ್ಮ ಅಪ್ಪ ಮತ್ತು ನಮ್ಮ ಅಜ್ಜನ ಕಾಲದಲ್ಲಿ ಎಲ್ಲಾ ದೇವರಿಗೂ ಕಾಣಿಕೆ ಇತ್ಯಾದಿಗಳನ್ನು ಕೊಟ್ಟಿದ್ದೇವೆ. ಇತ್ತೀಚೆಗೆ ಜಹಗೀರಿ ಮತ್ತು ಇನಾಮ್ ಅಬಾಲಿಷ್ ಆದಮೇಲೆ ಸ್ವಲ್ಪಮಟ್ಟಿಗೆ ಸರ್ಕಾರಕ್ಕೂ ಹಣವನ್ನು ಕೊಡುತ್ತಿದ್ದೇವೆ. ಆದರೆ ಹೆಚ್ಚು ಭಾಗ ದೇವರಿಗೆ ನಾವು ಕೊಟ್ಟಿದ್ದೇವೆ. ಆದರೆ ಇದು ಎಷ್ಟರಮಟ್ಟಿಗೆ ಪ್ರಯೋಜನವಾಗಿದೆ ಎಂಬುದನ್ನೂ ಸಹ ನಾವು ನೋಡಬೇಕಾಗಿದೆ. ರಾಜಮಹಾ

(ಶ್ರೀ ಕೆ. ಎನ್. ವೀರಪ್ಪಗೌಡ)

ರಾಜರುಗಳ ಕಾಲದಲ್ಲಿ ಅವರು ಬೇಕಾದಷ್ಟು ದೇವಸ್ಥಾನಗಳನ್ನು ಸ್ಥಾಪನೆ ಮಾಡಿದ್ದಾರೆ. ಅವರು ದೇವಸ್ಥಾನಕ್ಕೆ ಬರತಕ್ಕ ಕಾಲದಲ್ಲಿ ದೇವಸ್ಥಾನದ ಅರ್ಚಕರು ಅವರನ್ನು ಪೂರ್ಣಕುಂಭ, ಮಂತ್ರ, ಮತ್ತು ವಾದ್ಯಸಮೇತ ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಿದ್ದರು.

4-00 P.M.

ಹೀಗಿದ್ದರೂ ಕೂಡ ಸ್ವಾತಂತ್ರ್ಯ ಬಂದ ಮೇಲೆ ನಮ್ಮ ಮಂತ್ರಿಗಳು ಇಲ್ಲಿ ಕೂತು ಮಾತನಾಡುತ್ತಾರೆ, ಬಿಲ್ಲುಗಳನ್ನು ತರುತ್ತಾರೆ—ಎಲ್ಲಾ ಮಾಡುತ್ತಾರೆ. ಆದರೆ ಅವರು ನಾಳೆಯ ದಿವಸ ಅಲ್ಲಿ ಹೋದರೆ, ಅಲ್ಲಿ ಯಾವ ಸಾಮಾನ್ಯ ಜನರಿಗೂ ಸಹ ಅವರನ್ನು ನೋಡುವಂತಹ ಅವಕಾಶ ಸಿಗುವುದಿಲ್ಲ. ಇವರಿಗೆ ಪೂರ್ಣ ಕುಂಭದಿಂದ ಮೆರವಣಿಗೆ ಮಾಡಿಕೊಂಡು ಹೋದರೆ ಹಿಂದೆ ಇವರ ಪ್ರತಿನಿಧಿ ಇರತಕ್ಕದ್ದನ್ನು ಸಹ ಮರೆತು ಬಿಡುತ್ತಾರೆ. ಹಿಂದೆ ಒಂದು ಸಾರಿ ಒಬ್ಬರು ಹರಿಜನರು ಜಿಲ್ಲಾಧಿಕಾರಿಗಳು ಇದ್ದರು. ಮಾನ್ಯ ಕಡಿದಾಳ್ ಮಂಜಪ್ಪನವರನ್ನು ಬರಮಾಡಿಕೊಳ್ಳುವ ಸಂದರ್ಭದಲ್ಲಿ ಈ ಜಿಲ್ಲಾಧಿಕಾರಿಗೆ ಎಲ್ಲಿಗೆ ಹೋಗಬೇಕೆಂದು ಗೊತ್ತಾಗಲಿಲ್ಲ. ಅಲ್ಲೇ ಅವರು ಇದ್ದರು. ನಂತರ ನಾನು ಅವರನ್ನು ''ಬನ್ನಿ ಸ್ವಾಮಿ'' ಎಂದು ಕರಕೊಂಡು ಹೋದೆ. ಇದರಿಂದಾಗಿ ಎಲ್ಲರಿಗೂ ನನ್ನ ಮೇಲೆ ಕಣ್ಣು ಬಿತ್ತು. ಕಡಿದಾಳ್ ಮಂಜಪ್ಪನವರು ಬಿಟ್ಟು ಹೋದರೂ ವೀರಪ್ಪಗೌಡರು ಅವರನ್ನು ಕರಕೊಂಡು ಹೋದರು ಎಂದು ಹೇಳಲಿಕ್ಕೆ ಪ್ರಾರಂಭ ಮಾಡಿದರು. ಅದರ ಬಗ್ಗೆ ಸ್ವಾಮಿಗಳಿಗೂ ದೂರು ಹೋಯಿತು, ನಾನು ಹೇಳುವುದಾದರೂ ಇಷ್ಟೆ. 1917ನೇ ಇಸವಿಯಲ್ಲಿ ಏನು ನಡೆಯುತ್ತಿತ್ತು ಅದು ಈಗಲೂ ನಡೆಯುತ್ತಿದೆ. ಹಿಂದೆ ಒಂದು ಸಾರಿ ಜಾಗೀರಿ ಅಬಾಲಿಷ್ ಆಯ್ತು; ಇನಾಂ ಆ ಮೇಲೆ ಅಭಾಲಿಷ್ ಆಯ್ತು. ಈಗ ದೇವಸ್ಥಾನಗಳ ಬಗ್ಗೆ ಒಂದು ಮಸೂದೆಯನ್ನು ತಂದಿದ್ದಾರೆ. ಹೀಗೆ ತಂದರೂ, ಇವರು ಅಲ್ಲಿಗೆ ಹೋದ ತಕ್ಷಣ ಇವರಿಗೆ ಶಾಲು ಹೊದಿಸಿ ಸತ್ಕರಿಸಿ ಬಿಟ್ಟಾಗ ಎಲ್ಲವನ್ನೂ ಮರೆತು ಬಿಡುತ್ತಾರೆ. ಹಿಂದೆ ಮಾನ್ಯ ಕಡಿದಾಳ್ ಮಂಜಪ್ಪನವರು ಮಾತನಾಡಿ ಮಾತನಾಡಿ ಒಂದು ಸಾರಿ ನೂರಾರು ಎಕರೆ ಜಮೀನನ್ನು ಕೊಟ್ಟು ಬಿಟ್ಟರು. ಅದೇ ರೀತಿ ತಾಲ್ಲೂಕು ಬೋರ್ಡ್ ಹೈಸ್ಕೂಲನ್ನು ಸಹ ಕೊಟ್ಟುಬಿಟ್ಟರು. ಈಗಿನ ರೆವೆನ್ಯೂ ಮಂತ್ರಿಯವರಾದರೂ ಸಹ ಬಹಳ ಆಸಕ್ತಿ ವಹಿಸಿ ಇದನ್ನು ತಂದಿದ್ದಾರೆ. ಇದನ್ನು ಇನ್ನೂ ಸ್ವಲ್ಪ ಪೂರ್ತಿಯಾಗಿ ವಿಮರ್ಶೆ ಮಾಡಿ ತಂದಿದ್ದರೆ ಚೆನ್ನಾಗಿತ್ತು. ಇವೊತ್ತಿನ ದಿವಸ ಜಮೀನು ಎಲ್ಲೆಲ್ಲಿ ಇದೆ, ಅದು ಯಾವ ಭೂಮಿಯೇ ಆಗಿರಲಿ, ಅಥವಾ ಯಾವ ಸಂಸ್ಥೆಯದ್ದೇ ಆಗಿರಲಿ, ಅವುಗಳಿಗೆ ಎಲ್ಲದಕ್ಕೂ ಒಂದೇ ರೀತಿಯ ನಿಯಮಗಳು ಇರಬೇಕು. ಆ ಮಠಕ್ಕೆ ರಕ್ಷಣೆ ಕೊಡುವುದು, ಈ ಮಠಕ್ಕೆ ವಿನಾಯಿತಿ ಕೊಡುವುದು; ಇದು ಇನ್ನೊಂದು ಸಂಸ್ಥೆಗೆ ಸೇರಿದ್ದು; ಅದು ಮತ್ತೊಂದು ವ್ಯಕ್ತಿಗೆ ಸೇರಿದ್ದು ಎಂದು ಮಾಡಬಾರದು. ಅದು ಯಾವ ಭೂಮಿಯೇ ಆಗಿರಲಿ, ಅವೆಲ್ಲವನ್ನೂ ಒಟ್ಟು ಸೇರಿಸಿ, ಯಾರು ಗೇಣಿದಾರ ಭೂಮಿ ಇಲ್ಲದೆ ಇರುತ್ತಾನೋ, ಅವನಿಗೆ ಕೊಡುವಂತಹ ಏರ್ಪಾಡು ಮಾಡಬೇಕು. ಇವತ್ತು ದೇವರ ಹೆಸರಿನಲ್ಲಿರುವಂತಹ ಭೂಮಿ ಯಾವ ವ್ಯವಸಾಯ ಮಾಡತಕ್ಕ ಗೇಣಿದಾರನಿದ್ದಾನೆಯೋ, ಅವನಿಗೆ ಹೋಗಬೇಕಾಗುತ್ತದೆ. ಅವನು ಲ್ಯಾಂಡ್‌ಲೆಸ್ ಆಗಿರಬೇಕು. ಏಕೆಂದರೆ ಅನೇಕ ಜಮೀನು ಇದ್ದಂತಹ ಜನರು ನಿಮ್ಮ ಭೂಸುಧಾರಣೆ ಬರುತ್ತದೆಂದು ಪಹಣಿಗಳನ್ನು ಸಹ ಸುಟ್ಟು ಹಾಕಿ ಗೇಣೀದಾರರನ್ನು ಅಲ್ಲಿಂದ ಓಡಿಸಿದ್ದಾರೆ. ಇಂಥವರ ಬಗ್ಗೆ ತಾವು ಹೆಚ್ಚಿನ ಮಾಹಿತಿಗಳನ್ನು ಪಡೆದು, ಅವರಿಗೆ ನೇರವಾಗಿ ಭೂಮಿಯನ್ನು ಒದಗಿಸತಕ್ಕಂತಹ ಅವಕಾಶವನ್ನು ಮಾಡಬೇಕು. ಉದಾಹರಣೆಗೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಕಿಗ್ಗಾ ಎಂಬಲ್ಲಿ ಒಂದು ಮುಜರಾಯಿ ಇನ್‌ಸ್ಟಿಟ್ಯೂಶನ್ ಇದೆ. ಅದಕ್ಕೆ 960 ಎಕರೆ ಜಮೀನು ಇದೆ. ಇದು ಸ್ವಲ್ಪ ಮಟ್ಟಿಗೆ ಶ್ರೀಮಂತರ ಕೈಯಲ್ಲಿಯೇ ಇದೆ. ಈ ಶ್ರೀಮಂತ ಜನರು ದೇವಸ್ಥಾನಕ್ಕೆ ಸಲ್ಲಿಸಬೇಕಾದ ಗೇಣಿಯನ್ನು ಪಾವತಿ ಮಾಡುವುದು. ಅದರೆ ಇನ್ನೊಬ್ಬ ಗೇಣೀದಾರ ಸಾಗುವಳಿ ಮಾಡಿ ಈ ಶ್ರೀಮಂತನಿಗೆ ಗೇಣಿ ಕೊಡುವುದು. ಇದರಿಂದ ದೇವಸ್ಥಾನಕ್ಕೆ 50 ರೂಪಾಯಿ ಬಂದರೆ ಇವನಿಗೆ 500 ರೂಪಾಯಿ ಗೇಣಿದಾರನಿಂದ ಬರುತ್ತದೆ. ಈ ರೀತಿಯಲ್ಲಿ ದುಡ್ಡು ಹೊಡೆಯುತ್ತಿದ್ದಾರೆ. ಇದರ ಬಗ್ಗೆ ರಿಪೋರ್ಟ್ ತರಿಸಿಕೊಂಡು ಇದನ್ನು ವಿಮರ್ಶೆ ಮಾಡುವುದಾದರೆ ಅಂಥವರಿಗೆ ಖಾಯಂ ಮಾಡುವ ಸಂದರ್ಭ ಇರುತ್ತದೆ. ಅದೇ ರೀತಿ ಯಾರಹತ್ರ ಪಹಣಿ ಇದೆ ಅಂಥವರಿಗೆ ಭೂಮಿಯನ್ನು ಕೊಡುವುದಾದರೆ ಆದನ್ನು ಸಹ ಸರಿಯಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಏಕೆಂದರೆ ಇವತ್ತು ಪಹಣಿ ಒಬ್ಬರ ಹತ್ತಿರ ಇರಬಹುದು, ಸಾಗುವಳಿ ಇನ್ನೊಬ್ಬ ಮಾಡುತ್ತಿರಬಹುದು. ಅಥವಾ ಸಾಗುವಳಿ ಮಾಡುತ್ತಿರುವವರಲ್ಲಿ ಪಹಣಿ ಇಲ್ಲದೆ ಇರಬಹುದು. ಆದ್ದರಿಂದ ಗೇಣಿದಾರರ

ಬಗ್ಗೆ ನಿಜವಾಗಿಯೂ ಬಹಳ ಕೂಲಂಕಷವಾಗಿ ಪರಿಶೀಲನೆಮಾಡಿ ಯಾರು ನಿಜವಾಗಿ ಸಾಗುವಳಿ ಮಾಡುತ್ತಾರೆ, ಯಾರಿಗೆ ನಿಜವಾಗಿ ಭೂಮಿ ಇಲ್ಲ ಎಂದು ನೋಡಿ ವಿತರಣೆ ಮಾಡಬೇಕಾಗಿದೆ. ಇದಕ್ಕೆ ಮಾನ್ಯ ಮಂತ್ರಿಯವರು ಒಂದು ಕಮಿಟಿ ಮಾಡಿ, ಯಾರು ಯಾರು ಎಷ್ಟೆಷ್ಟು ವರ್ಷಗಳಿಂದ ನಿಜವಾಗಿ ಗೇಣಿಗೆ ಸಾಗುವಳಿ ಮಾಡುತ್ತಾರೆಂಬುದನ್ನು ನೋಡಿ ಮಾಡಿದರೆ ಆ ಗೇಣೀದಾರರು ಬದುಕುತ್ತಾರೆ· ಇಲ್ಲದಿದ್ದರೆ ಅವರು ಬದುಕುವುದಕ್ಕೆ ಸಾಧ್ಯವಿಲ್ಲ. ನನಗೆ ಇವರ ಬಗ್ಗೆ ದಿನಾಲೂ ಪತ್ರಗಳು ಬರುತ್ತಿವೆ. ಎಷ್ಟೋ ಜನರು ನಾನು 15-20 ವರ್ಷಗಳಿಂದ ಗೇಣಿಗೆ ಸಾಗುವಳಿ ಮಾಡುತ್ತಿದ್ದೇವೆ, ಗೇಣಿ ರಸೀದಿ ಭೂಮಾಲಿಕರು ಕೊಡುತ್ತಾ ಇಲ್ಲ; ಈ ವರ್ಷ ಗೊಬ್ಬರ ಹಾಕಿದ್ದೇನೆ; ಆದರೂ ಅವರು ಬಂದು ಸಾಗುವಳಿ ಮಾಡುತ್ತಿದ್ದಾರೆ ಇತ್ಯಾದಿ ವಿಷಯಗಳನ್ನು ಕಾಗದದಲ್ಲಿ ಬರೆದು ತಿಳಿಸಿದ್ದಾರೆ. ಇವೊತ್ತಿನ ದಿವಸ ಈ ಒಂದು ಪಹಣಿಗೆ ರಜಿಸ್ಟ್ರೇಷನಿಗಿಂತಲೂ ಹೆಚ್ಚಿನ ಪ್ರಾಶಸ್ತ್ಯ ದೊರಕಿದ ಹಾಗೆ ಕಾಣುತ್ತದೆ. ಇವತ್ತು ಪಹಣಿ ಇದ್ದರೆ, ಖರೀದಿ ಮಾಡಿದ್ದು ಸಹ ನ್ಯಾಯವಾಗಿರುತ್ತದೆ; ಪಹಣಿ ಇಲ್ಲದಿದ್ದರೆ ಅದಕ್ಕೆ ಬೆಲೆ ಇರುವುದಿಲ್ಲ. ಪರಿಸ್ಥಿತಿ ಹೀಗೆ ಇರುವಾಗ, ಸಾಮಾನ್ಯ ಜನರು ಈ ಪಹಣಿಯನ್ನು ಬರೆಯುವಂತಹ ಸಂದರ್ಭ ಇರುವಾಗ, ತಾಹಸೀಲ್ದಾರರು ಯಾರು ನಿಜವಾಗಿ ಸಾಗುವಳಿ ಮಾಡುತ್ತಾರೆಂಬುದನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲದಿರುವಾಗ, ಇಂಥ ಅನ್ಯಾಯಗಳು ಬಹಳವಾಗಿ ಆಗಿ ಗೇಣೀದಾರರು ಪಡಬಾರದ ಕಷ್ಟಗಳನ್ನು ಅನುಭವಿಸಿದ್ದಾರೆ. ನಮ್ಮ ದೇಶದಲ್ಲಿ ಗೇಣೀದಾರರಿಗೆ ಅನ್ಯಾಯ ಆಗಿರುವಷ್ಟು ಪ್ರಪಂಚದಲ್ಲಿ ಬೇರೆ ಯಾರಿಗೂ ಆಗಿಲ್ಲ. ಆದ್ದರಿಂದ ಈ ಜನರಿಗೆ ಯಾವ ರೀತಿಯ ಅನುಕೂಲ ಮಾಡಿಕೊಡಬೇಕೆಂಬುದರ ಬಗ್ಗೆ ಪುನಃ ಆಲೋಚನೆ ಮಾಡಬೇಕಾದ ಸಂದರ್ಭ ಬಂದಿದೆ. ಅದೇ ರೀತಿಯಲ್ಲಿ ಶೃಂಗೇರಿಯಲ್ಲಿ ಜಹಗೀರ್ ಅಬಾಲಿಶ್ ಆಯ್ತು. ಎಲ್ಲ ಏರಿಯಾಗಳು ಸರ್ಕಾರಕ್ಕೆ ಪೂರ್ತಿಯಾಗಿ ಬಂದಿವೆ. ಅದರ ಮಧ್ಯೆ ಅಲ್ಲಿ ಒಂದು ಮಲ್ಲಿಕಾರ್ಜುನ ದೇವಸ್ಥಾನ ಇದೆ. ಅದಕ್ಕೆ ಒಬ್ಬರು ಏಜೆಂಟರು ಇದ್ದಾರೆ. ಅವರು ಗೇಣಿ ವಸೂಲು ಮಾಡುವುದು. ಅದೇ ರೀತಿ ಇನ್ನೊಂದು ಗಣಪತಿ ದೇವಸ್ಥಾನ ಇದೆ. ಅಲ್ಲಿಗೆ ಸಹ ಒಬ್ಬ ಏಜೆಂಟರು ಇದ್ದಾರೆ. ಅವರೇ ಎಲ್ಲಾ ವ್ಯವಹಾರವನ್ನು ನೋಡಿಕೊಂಡು ಗೇಣಿ ವಸೂಲು ಮಾಡುತ್ತಾರೆ. ಈ ರೀತಿ ಪುನಃ ಅವರಿಗೆ ಅಧಿಕಾರವನ್ನು ಕೊಟ್ಟುಕೊಂಡು ಬಂದರೆ ಹೇಗೆ ? ಇದರ ಬಗ್ಗೆ ನನಗೆ ಏನೂ ಅರ್ಥವಾಗುವುದಿಲ್ಲ. ಹೀಗೆ ಅನೇಕ ರೀತಿಯಲ್ಲಿ ನೋಡಿದಾಗ ಈ ದೇವರ ಹೆಸರು ಹೇಳಿ ಆಗುವಂತಹ ಅನ್ಯಾಯ ಅಷ್ಟಿಷ್ಟಲ್ಲ. ಅದಕ್ಕೆ ಸಾಕಷ್ಟು ಉದಾಹರಣೆಗಳನ್ನು ಕೊಡಬಹುದು.

ಇನ್ನೊಂದು ವಿಚಾರ. 1965ನೇ ಅಕ್ಟೋಬರ್ 2 ರ ಒಳಗೆ ಸಾಗುವಳಿ ಮಾಡತಕ್ಕವರು ಡಿಕ್ಲೇರ್ ಮಾಡಬೇಕೆಂದು ಡಿವಿಜನಲ್ ಕಮಿಶನರ್ ಹೇಳಿದರು. ಅದನ್ನು ಪುನಃ 1970 ಮಾರ್ಚಿ 30ಕ್ಕೆ ಮುಂದುವರಿಸಿದರು. ಇದರ ಪ್ರಕಾರ ಕೆಲವರು ಅರ್ಜಿ ಹಾಕಿದರು. ಆದರೆ ಆ ಅರ್ಜಿಗಳು ಎಲ್ಲಿಗೆ ಹೋಯಿತೆಂದು ಯಾರಿಗೂ ಗೊತ್ತಾಗಿಲ್ಲ. ಅದನ್ನು ವಿಮರ್ಶೆ ಮಾಡುತ್ತೇವೆಂದು ಹೇಳಿದ್ದರು. ಆದರೆ ಇದುವರೆಗೂ ಯಾವ ವಿಮರ್ಶೆಯೂ ಇಲ್ಲ, ಯಾವ ಕ್ರಮವೂ ಇಲ್ಲ. ಇಷ್ಟು ಮಾಡಿಬಿಟ್ಟು ಸರ್ಕಾರದವರು ಕೈಬಿಟ್ಟದ್ದು ಏಕೆ ? ಇದನ್ನು ಈಗಲಾದರೂ ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಶೃಂಗೇರಿ ಮಠಕ್ಕೆ ಪ್ರತಿ ವರ್ಷ ನಮ್ಮ ಬಜೆಟ್‌ನಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಒದಗಿಸಿ ಕೊಡುತ್ತಿದ್ದಾರೆ. ಅದರ ಬಗ್ಗೆ ಏನಾದರೂ ಬಂದರೆ ಅದು ಖಾಸಗೀಯಾಗಿದೆ ಎಂದು ಹೇಳುತ್ತಿದ್ದೀರಿ. ಇದು ಏನೆಂದು ನನಗೆ ಅರ್ಥವಾಗುವುದಿಲ್ಲ. ಅದೂ ಅಲ್ಲದೆ ಅಲ್ಲಿಗೆ ಸಾವಿರಾರು ರೂಪಾಯಿ ಕಾಣಿಕೆ ಬರುತ್ತಿದೆ. ಇದನ್ನೆಲ್ಲಾ ಅವರಿಗೆ ಇಷ್ಟ ಬಂದ ಹಾಗೆ ಖರ್ಚು ಮಾಡಬಹುದು. ಇದು ಯಾವ ಜನಾಂಗದ ಧರ್ಮಪ್ರಚಾರಕ್ಕೆ ಹೀಗೆ ಮಾಡುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಅದೂ ಅಲ್ಲದೆ ಯಾರಾದರೂ ಬ್ಲಾಕ್ ಮನಿ ಇಟ್ಟಂಥವರು ಸಹ ಅಲ್ಲಿ ತಂದು ಹಾಕುತ್ತಿದ್ದಾರೆ. ಅಂಥ ಹಣ ಏನಿದೆ, ಅದಕ್ಕೆ ಲೆಕ್ಕವೇ ಇಲ್ಲದಂತೆ ಆಗಿದೆ. ಅವುಗಳನ್ನು ತಮಗೆ ಖುಷಿ ಬಂದಹಾಗೆ, ತಮಗೆ ಬೇಕಾದವರಿಗೆ ಏನು ಬೇಕಾದರೂ ಕೊಟ್ಟು ಖರ್ಚು ಮಾಡುತ್ತಿದ್ದಾರೆ. ಹೇಗೆ ಒಂದು ಮೊನಾಪಲಿಯಾಗಿ ಅಲ್ಲಿ ನಡೆಯುತ್ತಿದೆ. ಆದ್ದರಿಂದ ಇಂತಹ ಪದ್ಧತಿಯನ್ನು ಪೂರ್ತಿಯಾಗಿ ಬದಲಾವಣೆ ಮಾಡಬೇಕಾಗುತ್ತದೆ. ಅದೇರೀತಿ ಅವರು ಶಾಲು ಹೊದಿಸತಕ್ಕ ಪದ್ಧತಿಯನ್ನು ಸ್ವಲ್ಪ ಮಟ್ಟಿಗಾದರೂ ವಿರೋಧಿಸಿ, ಅದನ್ನು ತೆಗೆದುಹಾಕುವುದಕ್ಕೆ ಸಿದ್ಧರಾಗಬೇಕೆಂದು ಮಾನ್ಯ ಮಂತ್ರಿಯವರಿಗೆ ಹೇಳುತ್ತೇನೆ. ಅವರು ಯಾವ ರೀತಿಯಲ್ಲಿ ಬುಕ್ ಮಾಡುತ್ತಾರೋ ಗೊತ್ತಾಗುವುದಿಲ್ಲ. ಅಲ್ಲಿ ಸಾಮಾನ್ಯ ಜನಗಳಿಗೆ ಪ್ರವೇಶವಿಲ್ಲದಿರುವ ಹಾಗೆ ಸ್ವಾಮಿಗಳು ಆಶೀರ್ವಾದ ಮಾಡಿ ಬಂದಿದ್ದಾರೆ. ಪ್ರಸಾದವನ್ನು ಕೈಗೆ ಇಟ್ಟು ಹೋಗುತ್ತಾರೆ. ಸಾಮಾನ್ಯವಾಗಿ ರೆವೆನ್ಯೂ ಇನ್‌ಸ್ಪೆಕ್ಟರ್ ಹೇಳಿದರು, ಅಸೆಂಬ್ಲಿ ಸದಸ್ಯರು, ತಾಲ್ಲೂಕು ಬೋರ್ಡಿನ ಸದಸ್ಯರು, ಪ್ರೆಸಿಡೆಂಟರಿಗೆ ಇರುವ ಹಾಗೆ ಎಲ್ಲರಿಗೂ ಅವರ ಆಶೀರ್ವಾದ ಇರುವುದಿಲ್ಲವೆಂದು ಮಾನ್ಯ ಶ್ರೀ ಹುಚ್ಚಮಾಸ್ತಿಗೌಡರು ಏನು ಹೇಳಿದರೋ ಅದನ್ನು ನೋಡಬೇಕು.

(ಶ್ರೀ ಕೆ. ಎನ್. ವೀರಪ್ಪಗೌಡ)

ಈಗಾಗಲೇ ಇದು ಹೋಗಿಬಿಡುತ್ತದೆಂದು ನಾನು ತಿಳಿದುಕೊಂಡಿದ್ದೆ. ಅಂತೂ ಇದು ಹೋಗುತ್ತದೆಂದು ನನಗೆ ಒಂದು ನಂಬಿಕೆ ಇದೆ. ಹಣ ಕೊಡುತ್ತಿದ್ದಾರೆ. ಸಾರ್ವಜನಿಕರಿಗೆ ಪ್ರವೇಶ ಉಂಟೇ ? ಅದಕ್ಕೇನಾದರೂ ಕಮಿಟಿ ಬೇಕೇ ? ಮುಖ್ಯವಾಗಿ ದರಿದ್ರನಾರಾಯಣರಿಗೆ ಉಪಯೋಗವಾಗುವ ಮಟ್ಟಕ್ಕೆ ನಿಜವಾಗಿ ತರುತ್ತಾರೆಯೇ ಎಂಬುದನ್ನು ಇವರು ವಿಮರ್ಶೆಮಾಡಬೇಕೆಂದು ನಮ್ಮ ಸ್ನೇಹಿತರು ಹೇಳಿದರು. ಈಗ ದೇವಾಸ್ಥಾನಗಳು ಬಹಳಜಾಸ್ತಿ ಇವೆ. ನಮ್ಮಲ್ಲಿ ಅನ್ ಎಂಪ್ಲಾಯಮೆಂಟ್ ಬಹಳ ಜಾಸ್ತಿಯಾಗಿದೆ. ಜನರಿಗೆ ಎಂಪ್ಲಾಯ್‌ಮೆಂಟ್ ಹೇಗಾದರೂ ಕೊಡಲೇಬೇಕು. ಆದ್ದರಿಂದ ದೇವಾಸ್ಥಾನಗಳಲ್ಲಿ ಕೂಡ ಜನರಿಗೆ ಎಂಪ್ಲಾಮೆಂಟ್ ಕೊಡಬಹುದು. ಈಗ ದೇವಸ್ಥಾನಗಳಲ್ಲಿ ಯಾರೋ ಒಬ್ಬರ ಒಂದು ಗುಂಪು ಅಥವಾ ಒಂದು ಪಂಗಡದವರು ಪೂಜೆ ಮಾಡುತ್ತಾ ಇದ್ದಾರೆ. ಮಾನ್ಯ ಶ್ರೀ ಚನ್ನಬಸಪ್ಪನವರು ಒಳ್ಳೆಯ ಅನುಭವಶಾಲಿಗಳು. ಅವರು ಒಂದು ವಿಷಯವನ್ನು ಗಮನಿಸಬೇಕು. ಮುಖ್ಯವಾಗಿ ಪೂಜೆ ಮಾಡುವುದಕ್ಕೆ ನಾಲ್ಕು ಮಂತ್ರಗಳನ್ನು ಹೇಳಬೇಕು. ಶೃಂಗೇರಿಯಲ್ಲಿ ಸಂಸ್ಕೃತ ಪಾಠಶಾಲೆಗಳಲ್ಲಿ ಅನೇಕರಿಗೆ ಇದು ಅಭ್ಯಾಸವಾಗಿರುತ್ತದೆ. ಅದೇ ರೀತಿ ಮಂತ್ರಹೇಳುವುದನ್ನು ಕಲಿತುಕೊಂಡಂತಹವರಿಗೆ ಎಂಪ್ಲಾಮೆಂಟ್ ಎಕ್ಸ್‌ಚೇಂಜ್‌ನಲ್ಲಿ ರಿಜಿಸ್ಟರ್ ಮಾಡಿಸಿಕೊಂಡು ಎಲ್ಲಾ ಪಂಗಡಗಳವರಿಗೂ ಪೂಜೆ ಮಾಡತಕ್ಕ ಸಂದರ್ಭವನ್ನು ಒದಗಿಸಿಕೊಟ್ಟು ಆ ಒಂದು ರೀತಿಯಲ್ಲಿ ಅವರಿಗೂ ಜೀವನಕ್ಕೆ ಅನುಕೂಲವಾಗುವಂತೆ ಏರ್ಪಾಡುಮಾಡಬೇಕು. ಈಗ ಕೆಲವು ಸಮಸ್ಯೆಗಳು ಬರುತ್ತಿವೆ. ಒಂದು ಕಡೆ ಇದಕ್ಕೆ ಸಂಬಂಧಪಟ್ಟ ಹಾಗೆ ಕೆಲವು ಕಾನೂನುಗಳನ್ನು ಮಾಡುವುದು, ಮತ್ತೆ ಕೆಲವು ಕಾನೂನುಗಳನ್ನು ಅಭಾಲಿಷ್ ಮಾಡುವುದು. ಕೆಲವು ಕಡೆಗಳಲ್ಲಿ ಬೇರೆ ಯಾವುದಾದರೂ ಸಂಸ್ಥೆಗಳನ್ನು ಮಾಡಿಕೊಂಡು ಬಂದರೆ ಅವರಿಗೆ ಮನ್ನಣೆ ಕೊಡುವುದು—ಈ ರೀತಿ ಆಗುತ್ತಿದೆ.

ಇನ್ನು ಭೂದಾನ, ವಿದ್ಯಾದಾನ ಮಾನ್ಯ ಶ್ರೀ ಹನುಮಂತಯ್ಯನವರ ಕಾಲದಲ್ಲಿ ಬಂತು. ಈ ಭೂದಾನದಲ್ಲಿ ಲಕ್ಷಾಂತರ ಎಕರೆ ಭೂಮಿಯನ್ನು ಕೊಟ್ಟಿದ್ದಾರೆ. ಆ ಕಾಲದಲ್ಲಿ ಒಂದು ಕಮಿಟಿ ಮಾಡಿ ಅದಕ್ಕೆ ಒಬ್ಬ ಛೇರ್‌ಮನ್ನರನ್ನು ನೇಮಕಮಾಡಿದ್ದರು. ಸಾವಿರಾರು ರೂಪಾಯಿಗಳನ್ನು ಅದರ ಬೆಟರ್‌ಮೆಂಟಿಗೆ ಉಪಯೋಗಿಸಿಕೊಂಡಿದ್ದಾರೆ. ಸಾಗುವಳಿ ಮಾಡುವವರೂ ಸಹ ಉಪಯೋಗಿಸಿಕೊಂಡಿದ್ದಾರೆ. ಆದ್ದರಿಂದ ಈಗ ಎಲ್ಲಾ ಕ್ಷೇತ್ರಗಳಿಗೂ ಅನ್ವಯವಾಗುವ ಹಾಗೆ ಒಂದು ಕಾನೂನು ಮಾಡಬೇಕೇ ಹೊರತು ಬೇರೆ ಬೇರೆ ರೂಪದಲ್ಲಿ ಮಾಡುವುದು ಸರಿಯಾದ ವ್ಯವಸ್ಥೆಯಲ್ಲ. ಅಂತೂ ದೇವಾಲಯಗಳ ವಿಷಯದಲ್ಲಿ ಏನೂ ಸುಧಾರಣೆಮಾಡಲಿಲ್ಲ. ರೈತರಿಗೆ ಇದರಿಂದ ಹೆಚ್ಚಿನ ಸುಧಾರಣೆಯಾಗಬೇಕು. ಜಮೀನು ನಿಜವಾಗಿ ಉಳತಕ್ಕ ರೈತರಿಗೇ ಸಿಗಬೇಕು. ಭೂಸುಧಾರಣೆಯನ್ನು ಮುಂದೆ ಜಾರಿಗೆ ತರುವಾಗ ಯಾವನು ವ್ಯವಸಾಯಗಾರನಾಗಿದ್ದಾನೋ, ಯಾವನಿಗೆ ಜಮೀನು ಇಲ್ಲವೋ ಅಂತಹವರಿಗೆ ಜಮೀನು ದೊರೆಯಬೇಕು. ಅದಕ್ಕಾಗಿ ತಹಸೀಲ್ದಾರರ ನೇತೃತ್ವದಲ್ಲಿ ಒಂದು ಕಮಿಟಿಮಾಡಿ ಅದರ ಮೂಲಕ ರೈತರಿಗೆ ಜಮೀನು ದೊರೆಯುವ ಹಾಗೆ ಮಾಡದೇ ಹೋದರೆ ನಿಜವಾಗಿ ಇನ್ನು ಕೆಲವು ದಿವಸಗಳಲ್ಲಿ ನಿರುದ್ಯೋಗ ಸಮಸ್ಯೆಗೆ ಬಡ ಜನರೂ ಸಹ ಬಲಿ ಬೀಳುತ್ತಾರೆ. ಈಗಾಗಲೇ ಅನೇಕರು ಬಿದ್ದಿದ್ದಾರೆ.

ಎಷ್ಟೋ ಕಡೆಗಳಲ್ಲಿ ಲ್ಯಾಂಡ್ ಡಿಸ್‌ಪ್ಯೂಟ್ಸ್ ಬಗ್ಗೆ ತೀರ್ಮಾನಮಾಡಲು ಕೋರ್ಟುಗಳನ್ನು ಮಾಡಿದ್ದಾರೆ. ಆ ಕೋರ್ಟಿನಲ್ಲಿ ಒಬ್ಬರಿಗೊಬ್ಬರು ಜಮೀನು ಬಿಡಿಸಿಕೊಳ್ಳುವುದಕ್ಕಾಗುವುದಿಲ್ಲವೆಂದು ವಾದ ಮಾಡುತ್ತಾರೆ. ಆದ್ದರಿಂದ ಯಾವ ರೂಪದಲ್ಲಿ ಮಾಡಿದರೂ ಗೇಣೀದಾರರಿಗೆ ರಕ್ಷಣೆಯಾಗಿಲ್ಲ. ಅವರಿಗೆ ತಮ್ಮ ಕಾಲದಲ್ಲಿ ತಕ್ಕ ಪರಿಹಾರ ದೊರಕುವ ಅವಕಾಶ ಇದ್ದೇ ಇದೆ. ನಮಗೆ 1947ರಲ್ಲಿಯೇ ಸ್ವಾತಂತ್ರ್ಯ ಬಂತು. ಇವತ್ತಿನವರೆಗೂ ಈ ದೇಶದ ಆಡಳಿತದಲ್ಲಿ ಮುಖ್ಯ ಪಾತ್ರವನ್ನು ವಹಿಸತಕ್ಕ ಅವಕಾಶ ತಮಗೆ ಸಿಕ್ಕಿರಲಿಲ್ಲ. ಈಗ ಬಹು ಮುಖ್ಯವಾದ ಸ್ಥಾನವನ್ನು ತಾವು ಗಳಿಸಿದ್ದೀರಿ. ರೆವಿನ್ಯೂ ಮಂತ್ರಿಗಳಾಗಿದ್ದೀರಿ. ಆದ್ದರಿಂದ ತಾವು ಕೂಡ ಯಾವುದೇ ರೀತಿಯಲ್ಲಿ ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ, ಯಾರು ಯಾವ ಶಾಲು ಹೊದಿಸಿದರೂ ಅದರ ದಾಕ್ಷಿಣ್ಯಕ್ಕೆ ಒಳಗಾಗದೆ ಈ ವಿಚಾರದಲ್ಲಿ ದೀರ್ಘವಾಗಿ ಯೋಚನೆಮಾಡಬೇಕು. ಒಟ್ಟಿನಲ್ಲಿ ರೈತ ಜನಾಂಗವನ್ನು ಹಾಗೂ ವ್ಯವಸಾಯಗಾರರನ್ನು ಬಲಿಷ್ಠರನ್ನಾಗಿ ಮಾಡಿ ಸಾಕಷ್ಟು ಕಡಿಮೆ ಬೆಲೆಯಲ್ಲಿ ಆಹಾರಪದಾರ್ಥಗಳು ಜನರಿಗೆ ದೊರೆಯುವಂತೆ ಮಾಡಬೇಕು. ಕೆಲವು ಮಠದವರಿಗೆ ಬೇಕಾದಷ್ಟು ಜಮೀನು ಇರುತ್ತದೆ. ಅದರಲ್ಲಿ ಯಾರೋ ಒಬ್ಬ ರೈತ ಜಮೀನು ಮಾಡುತ್ತಿರುತ್ತಾನೆ. ಆದರೂ ಕೂಡ ಅಲ್ಲಿ ಒಂದು ಸ್ಕೂಲು ಬೇಕು ಅಂತ ಅದಕ್ಕಾಗಿ ಒಂದು ಅರ್ಜಿಯನ್ನು ಡೆಪ್ಯುಟಿ ಕಮಿಷನರಿಗೆ ಹಾಕುತ್ತಾರೆ, ಆ ರೈತನಿಂದ ಆ ಜಮೀನನ್ನು ಬಿಡಿಸಿಕೊಳ್ಳುವುದಕ್ಕೆ ಪ್ರಯತ್ನಮಾಡು

ತ್ತಾರೆ. ಏನೇನೋ ಹೆಸರು ಹೇಳಿ, ಅದು ಧರ್ಮದ ಮಠ, ಅಲ್ಲಿ ಒಂದು ಧರ್ಮ ಸಂಸ್ಥಾಪನೆ ಮಾಡಬೇಕೆಂದು ಹೇಳಿಕೊಂಡು ಜಮೀನು ಬಿಡಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಇಂತಹ ಪ್ರಸಂಗಗಳನ್ನು ಕೂಡಲೇ ಕಂಡುಹಿಡಿದು ಇದಕ್ಕೆ ಅವಕಾಶ ಕೊಡಕೂಡದೆಂದು ಹೇಳುತ್ತೇನೆ. ಮತ್ತು ಪದೇ ಪದೇ ಈ ರೀತಿ ಒಂದು ವಿಧೇಯಕವನ್ನು ಈ ಸಭೆಯು ಮುಂದೆ ತರುತ್ತಿರುವುದನ್ನು ನಿಲ್ಲಿಸಬೇಕೆಂದು ಹೇಳಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಂದಿರತಕ್ಕ ಈ ಬಿಲ್ಲಿಗೆ ಸ್ವಾಗತಬಯಸುತ್ತೇನೆ. ನನ್ನ ಮಿತ್ರರಾದಂಥ ಮಾನ್ಯ ಶ್ರೀ ವೀರಪ್ಪಗೌಡರು ಈ ಒಂದು ವಿಷಯದ ಬಗ್ಗೆ ಹೊರಗೆ ಇದ್ದುಕೊಂಡು ಮಾತನಾಡಿದ್ದಾರೆ. ನಾನು ಒಳಗೇ ಇದ್ದುಕೊಂಡು ಮಾತನಾಡುತ್ತೇನೆ. ನಾನು ಹುಟ್ಟಿದಾರಭ್ಯ ಧರ್ಮದ ಹೆಸರಿನಲ್ಲಿ ಶೋಷಣೆ ನಡೆಯುತ್ತಿರುವ ವರ್ಗದೊಳಗೆ ಹುಟ್ಟಿ ಬೆಳೆದು ಬಾಳಿದವನು. ಆದ್ದರಿಂದ ಅವರಿಗಿಂತ ಹೆಚ್ಚು ವಿಷಯಗಳು ನನಗೆ ತಿಳಿದಿರುವುದರಿಂದ ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಈ ದೇಶದಲ್ಲಿ ಧರ್ಮದ ಹೆಸರಿನಲ್ಲಿ ಆಗಿರುವ ಅನ್ಯಾಯ, ಶೋಷಣೆ ಇನ್ನು ಯಾವ ದೇಶದಲ್ಲಿಯೂ ಆಗಿಲ್ಲವೆಂದು ಹೇಳಿದರೆ ನಮ್ಮ ಸ್ನೇಹಿತರೆಲ್ಲರೂ ಒಪ್ಪುತ್ತಾರೆ. ನಾವು ಮತ್ತೆ ಮತ್ತೆ ಮಠ, ಮನೆ, ಮತ್ತು ದೇವಸ್ಥಾನಗಳಿಗೆ ಕೊಟ್ಟಿರುವ ಸವಲತ್ತುಗಳನ್ನು ನೋಡಿದರೆ ನಾವು ಪುನಃ ಒಂದು ಸಮಾಜದ ಪುನರ್ವರ್ತನೆ ಮಾಡುವುದಕ್ಕೆ ಹೊರಟಿದ್ದೇವೆಯೋ ಏನೋ ಎಂಬ ಭಾವನೆ ಬರದೇ ಇರಲಾರದು. ನಾವು ಸಮಾಜವಾದ ಎಂಬುದಾಗಿ ಒಂದು ಕಡೆ ಹೇಳುತ್ತೇವೆ. ಮತ್ತೆ ಒಂದು ಕಡೆ ಧರ್ಮದ ಹೆಸರನ್ನು ಹೇಳುತ್ತೇವೆ. ಆದರೆ ಧರ್ಮಕ್ಕೂ, ಮತಕ್ಕೂ ವ್ಯತ್ಯಾಸವಿದೆ. ಧರ್ಮ ಬೇರೆ, ಮತ ಬೇರೆ. ಮತೀಯ ಸಂಸ್ಥೆಗಳನ್ನು ಪೋಷಣೆ ಮಾಡುವುದಕ್ಕೆ ಎಂಬುದಾಗಿ ಒಂದು ಕಡೆ ಹೇಳುತ್ತೀರಿ, ಇನ್ನೊಂದು ಕಡೆ ಅವನ್ನು ಶೋಷಣೆ ಮಾಡುವುದಕ್ಕೆ ಎಂಬುದಾಗಿ ಹೇಳುತ್ತೀರಿ. ಇದು ಒಂದಕ್ಕೊಂದಕ್ಕೆ ದ್ವಂದ್ವ ಅರ್ಥ ಕೊಡುತ್ತದೆ. ಇದು ಹೇಗಿದೆಯೆಂದರೆ, ಗೋಕುಲಾಷ್ಟಮಿಗೂ ಖಾಸಿಂಗೂ ಎಷ್ಟು ವ್ಯತ್ಯಾಸವಿದೆಯೋ ಆ ರೀತಿ ಇದೆ.

ಈ ಸಮಾಜವಾದ ಮತ್ತು ಮತೀಯ ಸಂಸ್ಥೆಗಳು ಒಂದಕ್ಕೊಂದು ಹೊಂದಿಕೊಂಡು ಹೋಗುವುದಕ್ಕೆ ಸಾಧ್ಯವೇ ಇಲ್ಲ. ನಾವು ಈ ದಿವಸ ಸಾರುತ್ತಿರುವ ಸಮಾಜವಾದದ ಧೋರಣೆಯಲ್ಲಿ ಈ ಮತಮಾನ್ಯಗಳನ್ನೂ ಮತ್ತು ಧರ್ಮ ಸಂಸ್ಥೆಗಳನ್ನೂ ಕಾಪಾಡಿಕೊಂಡು ಬರುವುದಕ್ಕೆ ಸಾಧ್ಯವೇ ಇಲ್ಲ; ಅದಕ್ಕೆ ಅವಕಾಶವೂ ಕೂಡ ಇಲ್ಲ. ಇನ್ನು ಹಾಲಿ ಇರತಕ್ಕ ಸ್ವಾಮಿಗಳ ಪೈಕಿ ಆ ಪೂರಿ ಸ್ವಾಮಿಗಳು ಬಹಳ ಕ್ರಾಂತಿಕಾರಿಕ ಸ್ವಾಮಿಗಳಾಗಿದ್ದಾರೆ. ಆದ್ದರಿಂದ ಈಗಾಗಲೇ ಅವರನ್ನು ಉಳಿದೆಲ್ಲಾ ಮಠಾಧಿಪತಿಗಳೂ ಇವರನ್ನು ಹೊರಗೆ ಹಾಕಿದ್ದಾರೆ. 'ಏಕಂ ಸತ್ ವಿಪ್ರಾಃ ಬಹುಧಾ ವದಂತೀ "ಮತ್ತು ಆಕಾಶಾತ್ ಪತಿತಂ ತೋಯಂ ಸಾಗರಂ ಪ್ರತಿಗಚ್ಛತಿ' ಎಂದು ನಾವೆಲ್ಲ ಬಾಯಲ್ಲಿ ಹೀಗೆ ಬೇಕಾದಷ್ಟನ್ನು ಹೇಳುತ್ತೇವೆ. ಎಲ್ಲರೂ ಬಾಯಲ್ಲಿ 'ಏಕಂ ಸತ್ ವಿಪ್ರಾಃ ಬಹುಧಾ ವದಂತೀ' ಅಂದರೆ ಎಲ್ಲರಲ್ಲಿಯೂ ಇರತಕ್ಕ ಪರಮಾತ್ಮನು ಅಥವಾ ಆತ್ಮನು ಒಬ್ಬನೇ ಎಂದು ಅದರ ಅರ್ಥ. ಪರಮಾತ್ಮನು ಇರುವವನು ಒಬ್ಬನೇ ಆದರೂ ಆತನಿಗೆ ಹೆಸರುಗಳು ಅನಂತವಾಗಿವೆ, ಪರಮಾತ್ಮನನ್ನು ಭಕ್ತರು ಅನೇಕ ಹೆಸರುಗಳಿಂದ ಕರೆದಿದ್ದಾರೆ. ಆದರೆ ಹೇಳುತ್ತಿರುವಂತೆ ನಾವುಗಳ್ಯಾರೂ ಆಚರಣೆಯಲ್ಲಿ ನಡೆಯುತ್ತಿಲ್ಲ. ನಮ್ಮ ಮನೆಯ ಎದುರಿಗೆ ಒಂದು ಶಂಕರನಾರಾಯಣ ದೇವಸ್ಥಾನವಿದೆ. ಒಂದು ದಿವಸ ಒಬ್ಬ ಅಯ್ಯಂಗಾರ್ ಅವರು ಅಲ್ಲಿಗೆ ಬಂದರು, ಅವರು ಇಲ್ಲಿ ಯಾವುದಾದರೂ ದೇಸ್ಥಾನವಿದೆಯೇ ಎಂದು ಕೇಳಿದಾಗ ಜನರು ಇದೆ ಎಂದು ಹೇಳಿ ಈ ಶಂಕರನಾರಾಯಣ ದೇವಸ್ಥಾನದ ಹೆಸರನ್ನು ಹೇಳಿದರು. ಆಗ ಅವರು ಹೋಗಿ ದೇವಸ್ಥಾನಕ್ಕೆ ಪ್ರದಕ್ಷಿಣೆ ಮಾಡಿ, ದೇವರಿಗೆ ನಮಸ್ಕಾರ ಮಾಡಿ ಬಂದ ನಂತರ ಅಲ್ಲಿದ್ದವರು ಯಾರೋ ಅದು ಶಂಕರನಾರಾಯಣ ದೇವಸ್ಥಾನ ಎಂದು ಹೇಳಿದ್ದನ್ನು ಕೇಳಿ, ಬಹುಶಃ ಮೊದಲು ಅವರು ಈ ದೇವಸ್ಥಾನದ ಹೆಸರನ್ನು ಕೇಳಿಸಿಕೊಂಡಾಗ ಮೊದಲನೇ ಅರ್ಧಭಾಗವನ್ನು ಸರಿಯಾಗಿ ಕೇಳಿಸಿಕೊಳ್ಳದೆ ಬರಿ 'ನಾರಾಯಣ' ಅನ್ನುವುದಷ್ಟನ್ನೇ ಜ್ಞಾಪಕದಲ್ಲಿಟ್ಟುಕೊಂಡು ದೇವಸ್ಥಾನಕ್ಕೇ ಪ್ರದಕ್ಷಿಣೆ ಮಾಡಿದಂತೆ ಕಾಣುತ್ತದೆ. ಯಾವಾಗ ಆ ದೇವಸ್ಥಾನ 'ಶಂಕರನಾರಾಯಣ ದೇವಸ್ಥಾನ'ವೆಂದು ಗೊತ್ತಾಯಿತೋ ಆಗ ಅವರು ಅಲ್ಲಿ ನಿಲ್ಲಲೇ ಇಲ್ಲ ಹೊರಟೇ ಹೋದರು, ಮತ್ತೆ ಅವರು ವಾಪಸ್ ಅಲ್ಲಿಗೆ ಬರಲೇ ಇಲ್ಲ. ನಮ್ಮಲ್ಲಿ ಸ್ಪೀಕಿಂಗ್ ಟು ಪರ್ಸನ್ಸ್ ಎಂದು ಏನು ಹೇಳುತ್ತೇವೆ, ಇಂಥ ಒಂದು ಭಿನ್ನ ಭೇಧಗಳನ್ನು ಎಣಿಸತಕ್ಕಂಥ ಜನರು ನಮ್ಮ ದೇಶದಲ್ಲಿದ್ದಷ್ಟು ಇನ್ಯಾವ ದೇಶದಲ್ಲೂ ಇಲ್ಲ. ನಾನು ಒಬ್ಬ ಅದ್ವೈತಿಗಳನ್ನು ಒಂದಾವರ್ತಿ ಕೇಳಿದೆ: ನೀವು 'ಅಹಂ

(ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್)

ಬ್ರಹ್ಮಾಸ್ಮಿನ್' ಎಂದು ಹೇಳುತ್ತೀರಲ್ಲ, ಹಾಗಿರುವಾಗ ಈ ಹರಿಜನರನ್ನು ನಿಮ್ಮ ಮನೆಗಳಿಗೆ ಏಕೆ ಬಿಟ್ಟು ಕೊಳ್ಳುವುದಿಲ್ಲವೆಂದು ಕೇಳಿದ್ದಕ್ಕೆ ಅವರು ಹೇಳಿದರು–ನಾವಿನ್ನೂ ಆ ಮಟ್ಟಕ್ಕೆ ಮುಟ್ಟಿಲ್ಲ ಎಂದು. ನಾವು ಹೀಗೆ ಇಲ್ಲಿ ಶತಮಾನಗಟ್ಟಲೆ 'ಅಹಂಬ್ರಹ್ಮಾಸ್ಮಿನ್' ತತ್ವವನ್ನು ಹೇಳುತ್ತಿದ್ದರೂ ನಮ್ಮ ಸಮಾಜದಲ್ಲಿ ಕೀಳು ಮೇಲು ಎನ್ನುವುದು ಹೋಗುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ನಮ್ಮ ಈ ತತ್ವಗಳೆಲ್ಲಾ ಕೇವಲ ಹೇಳುವುದಕ್ಕೆ ಮಾತ್ರ ಇವೆಯೇ ವಿನಾ ಅವು ಆಚರಣೆಗಾಗಿ ಇರುವುದಿಲ್ಲ.

ಇನ್ನು ಈ ದಿವಸ ಸಭೆಯ ಮುಂದಿರತಕ್ಕ ಬಿಲ್ಲಿನಿಂದ ಯಾರಿಗೆ ಉಪಯೋಗ ಆಗುತ್ತದೆ? ನಾನೂ ಒಬ್ಬ ಅದ್ವೈತಿ. ಜಗತ್ತಿನಲ್ಲಿರತಕ್ಕ ಎಲ್ಲಾ ಜೀವರಾಶಿಗಳೂ ಒಂದೇ ಎನ್ನತಕ್ಕವನು. ಮೊದಲು ಅದ್ವೈತವನ್ನು ಸಾರಿದವರು ಶಂಕರಾಚಾರ್ಯರು. ಆದರೆ ಜನರು ಅದನ್ನು ಪಾಲನೆ ಮಾಡಿಕೊಂಡು ಬರಲಿಲ್ಲ. ಈ ದಿವಸ ಪ್ರತಿಯೊಂದು ದೇವಸ್ಥಾನಕ್ಕೂ ನೂರಾರು ಎಕರೆ ಜಮೀನು ಇರುತ್ತದೆ. ಅದನ್ನು ಮಾಡತಕ್ಕವರು ಎಲ್ಲರೂ ಬಡವರೇ, ಆದರೆ ಆ ಜಮೀನು ಶ್ರೀಮಂತರ ಹೆಸರಿನಲ್ಲಿರುತ್ತದೆ. ನಮ್ಮ ಸರ್ಕಾರ ಕೂಡಲೇ ಭೂಶಾಸನವನ್ನು ಜಾರಿಗೆ ತಂದು ಇದನ್ನೆಲ್ಲಾ ಹೋಗಲಾಡಿಸಬೇಕು. ಈ ದಿವಸ ಈ ಮಸೂದೆಯಿಂದ ಬಡ ಗೇಣಿದಾರನಿಗೇನೂ ಅನುಕೂಲವಾಗುತ್ತಿಲ್ಲ. ಆದರೆ ನಾನು ಒಬ್ಬ ನಿಷ್ಠಾವಂತ ಸಮಾಜವಾದಿ. ನಾನೂ ಕೂಡ ಈ ಸಭೆಯ ಮುಂದೆ 'ಇಂಟರ್ ಕ್ಯಾಸ್ಟ್ ಮ್ಯಾರೇಜ್ ಬಿಲ್ಲು.' ಮತ್ತು ಇನ್ನೊಂದು ದೇವಸ್ಥಾನಗಳಲ್ಲಿ ಪೂಜೆ ಮಾಡತಕ್ಕ ಅರ್ಚಕ ಆತನು ಯಾವ ಜಾತಿಯವನೇ ಇರಲಿ ಆತನಿಗೆ ಮಂತ್ರಗಳನ್ನು ಹೇಳುವುದು ಶಾಸ್ತ್ರ ವಿಚಾರಗಳು ಮತ್ತು ಪೂಜಾ ಕ್ರಮಗಳು ಗೊತ್ತಿದ್ದರೆ ಅಂಥವರನ್ನು ಅರ್ಚಕರನ್ನಾಗಿ ನೇಮಕ ಮಾಡಬಹುದೆಂದು ಒಂದು ಬಿಲ್ಲು- ಹೀಗೆ ಎರಡು ಬಿಲ್ಲುಗಳನ್ನು ತರತಕ್ಕವನಿದ್ದೇನೆ. ಹಿಂದಿನಿಂದಲೂ ಸಮಾಜವನ್ನು ಯಾರು ಶೋಷಣೆ ಮಾಡಿಕೊಂಡು ಬಂದಿದ್ದಾರೋ ಅಂಥವರಿಗೇ ಈ ದಿವಸ ಮತ್ತೆ ಅನುಕೂಲಗಳು ದೊರೆಯುತ್ತಿವೆ. ಈ ದಿವಸ ಇಲ್ಲಿ ತಂದಿರತಕ್ಕ ಈ ಬಿಲ್ಲೇನಿದೆ ಇದು 'ಕಾಯಕವೇ ಕೈಲಾಸ. ಅನ್ನತಕ್ಕ ಜನರಿಗಲ್ಲ. ಅಂಥ ಕಷ್ಟದಾರಿ ಜನರಿಗೆ ಇದರಿಂದೇನೂ ಅನುಕೂಲವಾಗುವುದಿಲ್ಲ' ಇದನ್ನು ಸರ್ಕಾರ ಕೂಡಲೇ ಅಂದ ನ್ಯೂನತೆಯನ್ನು ಹೋಗಲಾಡಿಸಬೇಕು. ನಮ್ಮ ಶಿವಮೊಗ್ಗಾದಲ್ಲಿ ನೂರಾರು ಎಕರೆ ಜಮೀನು ಇನ್ನೂ 'ವೈವಾಟದಾರರ' ಕೈಲೇ ಇದೆ. ದೇವರನ್ನು ಕಲಾಹೀನನ್ನಾಗಿ ಮಾಡಿದ ಮೇಲೆ ಈ ಜಮೀನುಗಳೆಲ್ಲಾ ಸರ್ಕಾರಕ್ಕೆ ಸೇರಬೇಕು. ಹೊಸನಗರ ತಾಲ್ಲೂಕ್‌ನಲ್ಲಿ ಒಂದು ದೇವಸ್ಥಾನಕ್ಕೆ ನೂರಾರು ಎಕರೆ ಜಮೀನಿತ್ತು. ಆದರೆ ಆ ದೇವಸ್ಥಾನ ಆ ಹಿರೇಭಾಸ್ಕರ ಪ್ರಾಜೆಕ್ಟನ್ನು ಕಟ್ಟಿದ ಕಾರಣ ಜಮೀನೆಲ್ಲಾ ಮುಳುಗಡೆ ಆಯಿತು. ಆಗ ಆ ದೇವಸ್ಥಾನವನ್ನು ಅಲ್ಲಿನ ದೇವರನ್ನು ಕಲಾಹೀನ ಮಾಡಲಾಯಿತು, ಅಲ್ಲಿ ಲಿಂಗನಮಕ್ಕಿ ಡ್ಯಾಮನ್ನು ಕಟ್ಟಿದನಂತರ ಹಿಂದೆ ಆ ಹೊಸನಗರದ ದೇವಸ್ಥಾನ ಕಲಾಹೀನವಾದುದರ ಜಮೀನು ಎಲ್ಲಾ ಮುಳುಗಡೆ ಆಗಿದೆ. ಅದಕ್ಕೆ ನಾನು ವೈವಾಟ್‌ದಾರ—ನನಗೆ ಪರಿಹಾರ ಇಲ್ಲಿಯವರೆಗೂ ಸಂದಾಯವಾಗಿಲ್ಲ ಎಂದು ಸರ್ಕಾರಕ್ಕೆ ಅರ್ಜಿ ಹಾಕಿ ಅಪಾರವಾದ ಹಣವನ್ನು ಪರಿಹಾರ ರೂಪದಲ್ಲಿ ಪಡೆದಿದ್ದಾರೆ. ಸರ್ಕಾರದ ಹಣವನ್ನು ಅವರು ಲೂಟಿ ಮಾಡಿದ್ದಾರೆಂದು ನಾನು ಹೇಳುತ್ತೇನೆ. ನಾವೆಲ್ಲರೂ ಸರ್ಕಾರಕ್ಕೆ ಇದರ ಬಗ್ಗೆ ತಿಳುವಳಿಕೆ ಕೊಟ್ಟ ಮೇಲೆ ಸರ್ಕಾರ ಅದನ್ನು ವಿಚಾರ ಮಾಡುವುದಕ್ಕೆ ಪ್ರಾರಂಭ ಮಾಡುವ ಕಾಲಕ್ಕೆ ಅಲ್ಲಿದ್ದ ಬುದ್ಧಿವಂತ ಜನರು ಆ ಫೈಲೇ ಇಲ್ಲದಂತೆ ಮಾಡಿದ್ದಾರೆ. ಈ ದಿವಸ ಈ ರಾಜ್ಯದಲ್ಲಿ ಸಹಸ್ರಾರು ರೂಪಾಯಿಗಳು ಕೈಲಿದ್ದರೆ ಯಾರು ಯಾರನ್ನಾದರೂ ಖೂನಿ ಮಾಡಿ ಬಚಾವಾಗಬಹುದು ಎಂದಾಯಿತು. ಅಂತೂ ಈ ದಿವಸ ಕೂಡ ಆ ಶೋಷಣೆ ಇನ್ನೂ ತಪ್ಪಲ್ಲಿಲ್ಲ. ಹೀಗೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಭೀಮನಕಟ್ಟೆಮಠ ಅಂತ ಇದೆ. ಅಲ್ಲಿನ ವೈವಾಟ್‌ದಾರರಿಗೆ ಒಂದು ನಯಾಪೈಸೆ ದಾನ ಮಾಡಿದ ಅಭ್ಯಾಸವಿಲ್ಲ —ಧರ್ಮ ಮಾಡಿದ ಅಭ್ಯಾಸವಿಲ್ಲ. ಅವರನ್ನು ನಾವು ಹೋಗಿ ಒಂದು ಆಸ್ಪತ್ರೆಗೆ ಹೊಸದಾಗಿ ಎಕ್ಸ್‌ರೇ ಪ್ಲಾಂಟನ್ನು ಹಾಕಬೇಕಾಗಿದೆ ಅದಕ್ಕೆ 500 ರೂಪಾಯಿಗಳ ದಾನ ಕೊಡಬೇಕೆಂದು ಕೇಳಿದ್ದಕ್ಕೆ ಅವರು ನಿಮ್ಮ ಸರ್ಕಾರ ದಿನಕ್ಕೊಂದು ಕಾನೂನನ್ನು ತರುತ್ತಿದೆ. ನಮ್ಮ ಗೇಣೀದಾರರು ಕಳೆದ ಹತ್ತಾರು ವರ್ಷಗಳಿಂದ ಗೇಣಿಯನ್ನೇ ಕೊಟ್ಟಿಲ್ಲ, ನಮ್ಮ ಜೀವನ ಸಾಗಿಸುವುದೇ ಕಷ್ಟವಾಗಿದೆ ಎಂದು. ಆದರೆ ಅವರು ಇರತಕ್ಕವರು ಒಬ್ಬರೇ. ಅವರಿಗೆ ಸಂಸಾರವಿಲ್ಲ. 50-100 ಎಕರೆ ತೋಟದ ಜಮೀನನ್ನು ಇಟ್ಟುಕೊಂಡಿದ್ದರೂ ಗೇಣಿ ಬರುತ್ತಿಲ್ಲ ಅನ್ನುವ ಒಂದು ಕಾರಣದಮೇಲೆ ಅವರು ದಾನ ಕೊಡುವುದಕ್ಕೇನೂ ಇಲ್ಲ ಎಂದು ಹೇಳಿಬಿಟ್ಟರು. ಇದನ್ನು ನೋಡಿಯೇ ಅನೇಕರು ಈ ಕಲಿಯುಗಕ್ಕೆ ಸಂನ್ಯಾಸಬೇಕಾಗಿಲ್ಲ ಎಂದು ಹೇಳಿದ್ದಾರೆ. ಈ ನಾನಾ ಕಾರಣಗಳಿಂದಲೇ ಸರ್ಕಾರದವರು ಈ ಮಾತೀಯ ಸಂಸ್ಥೆಗಳಿಗೆ ಸೇರಿರತಕ್ಕ ಮಠ ಮಾನ್ಯಗಳಿಗೆ ಸೇರಿರತಕ್ಕ ಆಸ್ತಿಗಳನ್ನೆಲ್ಲಾ ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಹೇಳುತ್ತಿದ್ದೇನೆ ನಾನೂ ಒಬ್ಬ ಬ್ರಾಹ್ಮಣ. ಅದರೆ ಹಿಂದೂ ದೇವಸ್ಥಾನಗಳು ಕೇವಲ ಕೆಲವರಿಗೆ ನಾಲ್ಕಾರು

ಜನರಿಗೆ ಮಾತ್ರ ಬಿಟ್ಟಿ ಊಟ ಹೊಡೆಯುವುದಕ್ಕೆ ಇವೆ ಎನ್ನುವುದಾದರೆ ಅದು ತೀರಾ ನಾಚಿಕೆಗೇಡಿನ ವಿಚಾರ. ಇಂಥ ಜನರನ್ನು ಸಮಾಜದಿಂದ ಹೊರಗೆ ಹಾಕಬೇಕೆಂದು ನಾನು ಹೇಳುತ್ತೇನೆ.

4-30 P.M.

ಇಂಥ ಮಠಗಳನ್ನು ಉಳಿಸಿಕೊಂಡು ಬರಬೇಕಾಗಿಲ್ಲ. ಯಾವ ಮಠ ಮಾತ್ರೀಯ ಸಂಸ್ಥೆಯಾಗಿರುವುದೋ ಯಾವುದು ಸಮಾಜಕ್ಕೆ ಸರಿಯಾಗಿ ಸಹಾಯಮಾಡುವುದಿಲ್ಲವೋ ಅದನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಈ ತಿರುಪತಿಯ ದೇವಸ್ಥಾನ ತೆಗೆದುಕೊಳ್ಳಿ, ಅಲ್ಲಿ ಕೋಟಿಗಟ್ಟಲೆ ಹಣ ಬರುವುದು. ಬಡವನಿಗೆ ಸಾಯಂಕಾಲದವರೆಗೆ ದುಡಿದ ರೂ ಹತ್ತು ರೂಪಾಯಿ ಸಿಕ್ಕುವುದಿಲ್ಲ. ಆದುದರಿಂದ ತಿರುಪತಿಯಲ್ಲಿ ಬರುವ ಆದಾಯವನ್ನು ಬಡವರ ಉದ್ಧಾರಕ್ಕೆ, ಸಮಾಜ ಸೇವೆಗೆ ಉಪಯೋಗಿಸಬೇಕು. ಈ ವಿಚಾರವನ್ನು ಪರಿಶೀಲಿಸಬೇಕು. ಈ ದಿವಸ ಸನ್ಯಾಸಿಗಳು ಎಷ್ಟು ಜನ ಅವರ ಧರ್ಮದಂತೆ ನಡೆಯುತ್ತಿದ್ದಾರೆಂಬುದನ್ನು ಯೋಚನೆಮಾಡಬೇಕು. ಉಡುಪಿಯಲ್ಲಿ 8 ಮಠಗಳಿವೆ. ಅದರ ಇತಿಹಾಸ ಹೇಳುವುದಾದರೆ ಆ ಮಠಗಳ ವೆಚ್ಚ, ಬೊಂಬಾಯಿನಲ್ಲಿ ಅವರು ನಡೆಸುವ ಭೋಗ, ಅವರ ನಿರಂಕುಶ ಪ್ರಭುತ್ವ ನೋಡಿದರೆ ಈ ಮಠಗಳಿಗೆ ಮುಟ್ಟುಗೋಲು ಹಾಕುವುದು ಒಳ್ಳೆಯದೆಂದು ತೋರುವುದು. ಅನೇಕರು ಹೊಟ್ಟೆಗಿಲ್ಲದೆ ಎಂಜಲೆಲೆಗಳನ್ನು ತೆಗೆದುಕೊಂಡು ಅದರಲ್ಲಿರುವುದನ್ನು ತಿನ್ನುವರು. ಹೀಗಿರುವಾಗ ಅನೇಕರಿಗೆ ಹೊಟ್ಟೆಗಿಲ್ಲದೆ ಕಷ್ಟಪಡುತ್ತಿರುವಾಗ ಮಠಗಳಿಗೆ ಅಲ್ಲಿ ಬೇಕಾದ ಹಾಗೆ ಖರ್ಚು ಮಾಡಲು ಅವಕಾಶ ಕೊಡುವುದು ಉಚಿತವಲ್ಲ. ಬಡವರು ಊಟ ಕೇಳಿದರೆ ಕಲ್ಲು ತೆಗೆದುಕೊಂಡು ಹೊಡೆಯುವರು. ಕೆಲವು ಕಡೆ ಕೇವಲ ಬ್ರಾಹ್ಮಣರಿಗೆ ಮಾತ್ರ ಸಂತರ್ಪಣೆ ನಡೆಯುವುದು ಇಂಥ ಮಠಗಳೇಕಿರಬೇಕು ? ಪ್ರತಿಯೊಬ್ಬ ವಿಚಾರಪರರಿಗೂ ಇದು ಗೊತ್ತಿದೆ. ಇಂದು ತಂದಿರುವ ಬಿಲ್ಲಿಗೆ ನಾವು ಬೆಂಬಲ ಕೊಡಲೇಬೇಕು. ಆದರೆ ಈ ಬಿಲ್ಲಿನಿಂದ ಕೇವಲ ಧರ್ಮ ಸಂಸ್ಥೆಗಳಿಗೆ ಆಶೀರ್ವಾದ ಮಾಡಿದಂತಾಗುತ್ತದೆ. ಇಂದು ಯಾವ ಮಠಗಳು ಮತ್ತು ವಿದ್ಯಾ ಸಂಸ್ಥೆಗಳು ಎಲ್ಲ ವರ್ಗದವರಿಗೂ ವೆಚ್ಚಮಾಡದೆ ಒಂದು ಕೋಮಿನವರಿಗೆ ಮೀಸಲಾಗಿವೆ ಅಂಥವುಗಳಿಗೆ ಮುಟ್ಟುಗೋಲು ಹಾಕಲೇಬೇಕು. ಶ್ರೀ ಬಸವರಾಜ ಕಟ್ಟೀಮನಿಯವರ ಜರತಾರಿ ಜಗದ್ಗುರು ಎಂಬ ಪುಸ್ತಕವನ್ನು ಓದಿದರೆ ಮಠಾಧಿಪತಿಗಳ ಲೋಲಾಪ್ತಿ, ಭೋಗವಿಲಾಸ ವಗೈರೆ ಗೊತ್ತಾಗುವುದು. ಇಷ್ಟು ಹೇಳಿ ಈ ಬಿಲ್ಲಿಗೆ ಬೆಂಬಲ ಕೊಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಾಡಿರುವ ಟೀಕೆಗಳು ಈ ಮಸೂದಾಕಾನೂನಿಗೆ ಅಷ್ಟಾಗಿ ಸಂಬಂಧಪಡುವುದಿಲ್ಲ. ನಾನು ಅವುಗಳಿಗೆ ಹೆಚ್ಚು ಗಮನ ಕೊಡಲು ಸಾಧ್ಯವಿಲ್ಲ.

Sri C. M. ARUMUGAM.—I am raising a point of order, Sir. I submit that just now the Revenue Minister said that the discussion that has taken place here is not within the purview of the Bill. That means that what has been said so far is not relevant to the Bill. Mr. Deputy Speaker Sir, what has been said here, is deemed to have been said with your permission and indirectly the statement of the Hon'ble Minister has questioned the authority of the Speaker. I submit whether it is open to a Minister to make that sort of a remark to say that what was said on the floor of the House was not relevant. The Speaker is something like a Vigilance Officer and presides over the House. If he has not stopped any Member from speaking, it means that what he has said is quite relevant and the Speaker has permitted it.

Mr. DEPUTY SPEAKER.—I have fully followed the Hon'ble Member. What the Hon'ble Minister meant is that certain portions of the speeches are extraneous to the scope of the Bill. He means to say that certain portions cannot be said strictly to be within the scope of the Bill, neither *intra vires* nor *ultra vires* but extraneous. That is why I am unable to uphold the point of order.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಮಸೂದಾಕಾನೂನಿನಲ್ಲಿರತಕ್ಕ ಮುಖ್ಯಾಂಶಗಳ ಕಡೆಗೆ ಯಾರ್ಯಾರು ಸರಕಾರದ ಗಮನ ಸೆಳೆದಿದ್ದಾರೋ ಅವರು ಹೇಳಿರತಕ್ಕ ವಿಷಯಗಳಿಗೆ ಮಾತ್ರ ಉತ್ತರ ಕೊಡಲಿಚ್ಛಿಸುತ್ತೇನೆ. ಈಗ ಇಲ್ಲಿ ದೇವಸ್ಥಾನಗಳ ಸ್ವಾಧೀನದಲ್ಲಿರುವ ಜಮೀನುಗಳು ಹೆಚ್ಚಾಗಿ ಗೇಣಿದಾರರ ವಶದಲ್ಲಿವೆ. ಆ ಗೇಣಿದಾರರಿಗೆ ನ್ಯಾಯವಾದ ಹಕ್ಕು ಸಲ್ಲಬೇಕು. ಅವರು ಸಾಗುವಳಿ ಮಾಡುವ ಭೂಮಿ ಅವರಿಗೆ ಸೇರಬೇಕು, ಅದಕ್ಕೆ ಲೋಪ ಬಾರದಹಾಗೆ ನೋಡಿಕೊಳ್ಳಬೇಕು ಎಂದು ಸಲಹೆಮಾಡಿದ್ದಾರೆ. ಆ ವಿಷಯಗಳಿಗೆ ಲೋಪ ಬಾರದಹಾಗೆ ನೋಡಿಕೊಳ್ಳಲು ಈ ಕಾನೂನಿನಲ್ಲಿ ಯಾವ ಕಲಮುಗಳಿವೆ ಅವುಗಳಲ್ಲಿ ದೋಷವಿದ್ದರೆ ಸರಿಪಡಿಸಬೇಕಾದ್ದು ಅಗತ್ಯ ಎಂದು ತಿಳಿಸುವುದಕ್ಕೆ ನಾನು ಇಷ್ಟ ಪಡುತ್ತೇನೆ.

ಇನ್ನೊಂದು ವಿಚಾರ. ದೇವಸ್ಥಾನದ ಜಮೀನುಗಳನ್ನು ದೊಡ್ಡದೊಡ್ಡ ಭೂಮಾಲೀಕರು ವಶಪಡಿಸಿಕೊಂಡಿದ್ದಾರೆ, ಅದನ್ನು ತಪ್ಪಿಸಿ ಯಾರು ಬಡವರಾಗಿ ಗೇಣಿ ಮಾಡುತ್ತಿರುವರೋ ಅವರಿಗೆ ಸಲ್ಲುವಂತೆ ಮಾಡಬೇಕು, ದೊಡ್ಡದೊಡ್ಡ ಜಮೀನುದಾರರು ಸ್ವತಃ ಸಾಗುವಳಿ ಮಾಡದಿರುವಾಗ ಅವರಿಗೆ ಸಲ್ಲದಂತೆ ನೋಡಿಕೊಳ್ಳಬೇಕು ಎಂದು ಮಾನ್ಯ ಸದಸ್ಯರು ಸಲಹೆ ಮಾಡಿದ್ದಾರೆ. ಇದು ಕೆಲವು ಭಾಗಗಳಲ್ಲಿರುವ ದೇವಸ್ಥಾನಗಳಲ್ಲಿ ಆಗಿರುವುದು ನಿಜ. ನೂರಾರು ಎಕರೆ ಇರತಕ್ಕಂಥ ಪ್ರದೇಶದಲ್ಲಿ ದೊಡ್ಡ ದೊಡ್ಡವರು ಅಪರ ಹೆಸರಿಗೆ ಅವರೇ ಗೇಣಿದಾರರಾಗಿ ಅದನ್ನು ಮಾಡಿಕೊಂಡು ಬೇರೆಯವರ ಮುಖಾಂತರ ಸಾಗುವಳಿ ಮಾಡಿಸುತ್ತಿದ್ದಾರೆ. ದಕ್ಷಿಣ ಕನ್ನಡ ಭಾಗಗಳಲ್ಲಿ ಮೂಲ ಗೇಣಿದಾರರ ಪಾತ್ರ ವಹಿಸಿದ್ದಾರೆ. ರೈತನ ಹತ್ತಿರ ಹೆಚ್ಚು ದವಸ ದುಡ್ಡನ್ನು ವಸೂಲ್ಮಾಡುವುದು ದೇವಸ್ಥಾನಕ್ಕೆ ಅಲ್ಪಸ್ವಲ್ಪ ಕೊಡುವುದು ಈರೀತಿ ಕೊಡುವವರು ಇದ್ದಾರೆ. ಅದನ್ನು ತಪ್ಪಿಸುವುದಕ್ಕೆ ತಕ್ಕ ಕಾರ್ಯಕ್ರಮವನ್ನು ಯೋಚನೆ ಮಾಡಬೇಕು ಎಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ಅಗತ್ಯವೆಂದು ನಾನೂ ಕೂಡ ಭಾವಿಸುತ್ತೇನೆ. ಇದು ಯಾವರೀತಿ ಮಾಡಬೇಕು ಎನ್ನುವುದನ್ನು ಅನಂತರ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ದೇವಸ್ಥಾನಕ್ಕೆ ಸಲ್ಲಿಸಬೇಕಾದಂಥ ಆನ್ಯೂಯಿಟಿ ಕೊಡುವ ವಿಷಯವಲ್ಲಿ ಕೆಲವರು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಆ ದೇವಸ್ಥಾನಗಳಿಗೆ ಆನ್ಯೂಯಿಟಿ ಕೊಡಬೇಕಾದ ಅಗತ್ಯವಿಲ್ಲ, ಅಲ್ಲಿ ಅನೇಕ ಅನ್ಯಾಯ ಪರಂಪರೆಗಳು ನಡೆಯುತ್ತವೆ. ಹಿಂದಿನಿಂದಲೂ ಬೇಕಾದಷ್ಟು ಪಂಗಡಗಳ ದೃಷ್ಟಿಯನ್ನಿಟ್ಟುಕೊಂಡು ಕೆಲವರನ್ನು ಇಟ್ಟುಕೊಳ್ಳುತ್ತಾರೆ, ಕೆಲವರನ್ನು ಬಿಡಿಸುತ್ತಾರೆ ಹೀಗೆಲ್ಲಾ ಕೆಲವು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಈಗತಾನೇ ಮಾತನಾಡಿದಂಥ ಶ್ರೀರನಾಳಿ ಚಂದ್ರಶೇಖರ್‌ರವರು ಕೆಲವು ಮಠಗಳನ್ನೂ ಕೂಡ ಸರ್ಕಾರದ ವಶಕ್ಕೆ ತೆಗೆದುಕೊಂಡು ಅಲ್ಲಿ ನಡಯುತ್ತಾ ಇರತಕ್ಕಂಥ ಅನ್ಯಾಯಗಳನ್ನು ತಪ್ಪಿಸುವುದಾದರೆ ನೀವು ಕೊಟ್ಟಂಥ ಆನ್ಯೂಯಿಟಿ ಹಣ ರಕ್ಷಣೆ ಆಗುತ್ತದೆ ಇಲ್ಲದೇ ಇದ್ದರೆ ಇಲ್ಲ ಎಂದು ತಿಳಿಸಿದರು. ಇದೆಲ್ಲಾ ಮಾನ್ಯ ಸಭೆಗೆ ಗೊತ್ತಿರುವ ಹಾಗೆ ಅನೇಕ ಕಡೆಗಳಲ್ಲಿ ಈರೀತಿ ನಡೆಯುತ್ತಾ ಇದೆ. ಇಲ್ಲ ಎಂದು ಹೇಳುವ ಹಾಗೆ ಇಲ್ಲ. ಕಾನೂನಿನ ಮುಖಾಂತರ ಅಲ್ಲಿ ಆಗತಕ್ಕಂಥಾ ಅನ್ಯಾಯಗಳನ್ನು ತಪ್ಪಿಸತಕ್ಕಂಥಾ ವಿಷಯ ಈವೊತ್ತು ಚರ್ಚೆ ಮಾಡುತ್ತಾ ಇಲ್ಲ. ಈವೊತ್ತು ಚರ್ಚೆ ಮಾಡತಕ್ಕಂಥಾದ್ದು ಭೂಮಿ ಯಾರಿಗೆ ಸಲ್ಲಬೇಕು ಎಂದು. ಈ ಸಂಸ್ಥೆಗಳು ಯಾವರೀತಿ ನಡೆಯಬೇಕು ಎನ್ನುವುದು ಮುಖ್ಯವಾದ ವಿಷಯ. ಹಳೇ ಮೈಸೂರು ರಾಜ್ಯದಲ್ಲಿ ಕಾನೂನು ಈಗಾಗಲೇ ಜಾರಿಯಲ್ಲಿದೆ. ಆದರೆ ಇದೇ ಭಾಗದಲ್ಲಿ ಹೈದ್ರಾಬಾದ್ ಪ್ರದೇಶದಲ್ಲಿ ಮತ್ತು ಬಾಂಬೆ ಪ್ರದೇಶದಿಂದ ಬಂದಿರತಕ್ಕಂಥ ಪ್ರದೇಶದಲ್ಲಿ ಇದು ಜಾರಿಯಲ್ಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಮದ್ರಾಸ್ ಪ್ರದೇಶದಿಂದ ಬಂದಿರತಕ್ಕ ಭಾಗದ ಇನಾಂ ಜಮೀನುಗಳಿಗೆ ಏನು ಪರಿಹಾರ ಸೂಚಿಸುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದನ್ನೂ ಕೂಡ ಇದರೊಳಗೇನೇ ಸೇರಿಸಬೇಕಾದ ಅಗತ್ಯ ಇದೆ. ಏತಕ್ಕೆಂದರೆ ಅಲ್ಲಿಯೂ ಕೆಲವು ಭಾಗಗಳಲ್ಲಿ ಇವೆ. ಹೆಚ್ಚಾಗಿ ಮುಜರಾಯಿ ಸಂಸ್ಥೆಗೆ ಸೇರಿರತಕ್ಕಂಥ ಕೆಲವು ಇನ್ಸ್ಟಿಟ್ಯೂಷನ್ಸ್ ಏನು ಇವೆ ಅವುಗಳಿಗೆ ಸಂಬಂಧಪಟ್ಟ ಹಾಗೆ ಈ ಮಸೂದಾ ಕಾನೂನು ಇರುವುದು. ಅವುಗಳ ಸ್ವಾಧೀನದಲ್ಲಿರತಕ್ಕಂಥಾ ಭೂಮಿಯನ್ನೂ ಕೂಡ ಹಳೆಯ ಮೈಸೂರಿನಲ್ಲಿರತಕ್ಕಂಥ ಭಾಗಗಳಿಗೂ ಅನ್ವಯಿಸುವ ಹಾಗೆ ಕಾನೂನು ಮಾಡಬೇಕು. ಇದು ಎಷ್ಟರಮಟ್ಟಿಗೆ ಮೈಸೂರು ರಾಜ್ಯದಲ್ಲಿಯೂ ಎಲ್ಲಾ ಭಾಗಗಳಿಗೂ ಅನ್ವಯವಾಗುತ್ತದೆ ಎನ್ನುವುದನ್ನು ನೋಡಬೇಕು. ಇದರಲ್ಲಿ ಕುಂದುಕೊರತೆಗಳು ಏನು ಇವೆ ಎನ್ನುವುದನ್ನು ಯೋಚನೆ ಮಾಡುವ ಕಾಲವೂ ಬರಬಹುದು. ನನ್ನ ಅಭಿಪ್ರಾಯದಲ್ಲಿ ಇವುಗಳನ್ನೆಲ್ಲಾ ಸರಿಪಡಿಸಬೇಕಾದು

ಅಗತ್ಯ ಇದೆ ಎಂದು ಹೇಳುತ್ತೇನೆ. ಮಾನ್ಯ ಸದಸ್ಯರೂ ಕೂಡ ಇದರ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಈ ದೃಷ್ಟಿಯಿಂದ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಿದರೆ ಅದರಲ್ಲಿರುವ ದೋಷಗಳನ್ನು ತಿದ್ದುವುದಕ್ಕೆ ಅನುಕೂಲವಾಗುತ್ತದೆಂದು ನನ್ನ ಭಾವನೆ. ಇದರ ಬಗ್ಗೆ ಇನ್ನೂ ಹೆಚ್ಚು ಹೆಚ್ಚಾಗಿ ಸಲಹೆಗಳನ್ನು ಕೊಟ್ಟಿದ್ದಾರೆ. ಈಗ ತಂದಿರತಕ್ಕಂಥಾ ಕಾನೂನಿನ ಉದ್ದೇಶ ಸೂಕ್ತವಾಗಿರುವುದರಿಂದ ಅದಕ್ಕನುಗುಣವಾಗಿ ಸಲಹೆಗಳನ್ನು ಅಳವಡಿಸಬೇಕಾದರೆ ಮೇಲ್ಮನೆಯಲ್ಲಿ ಮತ್ತು ಈ ಮನೆಯಲ್ಲಿ ಎರಡೂ ಮನೆಯ ಸದಸ್ಯರನ್ನು ಕೂಡಿಸಿರತಕ್ಕಂಥ ಒಂದು ಜಂಟಿ ಸಮಿತಿಯನ್ನು ನೇಮಕ ಮಾಡುವುದು ಸೂಕ್ತವೆಂದು ನಾನು ಭಾವಿಸುತ್ತೇನೆ. ಈ ಮಸೂದಾ ಕಾನೂನನ್ನು ಈ ಸಭೆಯ ಮುಂದೆ ಇಟ್ಟಾಗ ಇದರ ಉದ್ದೇಶವೇನು ಇದರಲ್ಲಿರುವ ತೊಂದರೆಗಳೇನು ಎನ್ನುವುದನ್ನು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಆದುದರಿಂದ ಇದರ ಬಗ್ಗೆ ಇನ್ನೂ ಸವಿಸ್ತಾರವಾಗಿ ನಾನು ಹೇಳಬೇಕಾದ್ದು ಅಗತ್ಯವಿಲ್ಲವೆಂದು ನಾನು ಭಾವಿಸುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಇದರಲ್ಲಿ ತಿದ್ದುಪಡಿಯಾದ ಮೇಲೆ ಹಳೇ ಮೈಸೂರು ಪ್ರದೇಶದಲ್ಲಿರತಕ್ಕಂಥ ಶಾಸನವನ್ನು ಹೊಸದಾಗಿ ದಕ್ಷಿಣ ಕನ್ನಡ, ಬಳ್ಳಾರಿ, ಕೊಡಗು ಈ ಜಿಲ್ಲೆಗಳಿಗೆ ಅನ್ವಯಿಸತಕ್ಕಂಥ ಶಾಸನ ಏಕರೂಪಕ್ಕೆ ತರುವಂತೆ ಯಾವ ರೀತಿ ಹೊಂದಾಣಿಕೆ ಮಾಡಲಾಗುತ್ತದೆ ಎಂದು ಹೇಳಿದ್ದರೆ ಚೆನ್ನಾಗಿತ್ತು.

Mr. DEPUTY SPEAKER.—How can he anticipate the deliberation of the Select Committee ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಕೊಡಗಿನಲ್ಲಿ ಕೆಲವು ಜಮೀನುಗಳು ಇವೆ. ಕೆಲವು ಕಡೆ ಇಂತಹ ಸಂಸ್ಥೆಗಳು ಇವೆ. ಕೆಲವು ಕಡೆ ಮೈನರ್ಸ್ ಜಮೀನುಗಳು ಇವೆ. ಕೆಲವು ಭಾಗದಲ್ಲಿ ಜಮ್ಮ ಜಮೀನುಗಳು ಇವೆ. ಮತ್ತು ಅದಕ್ಕೆ ಸಂಬಂಧಪಟ್ಟಂತೆ 5–6 ತರಹ ಬಗೆಯ ಭೂಮಿ ಕೊಡಗಿನಲ್ಲಿದೆ. ಅವುಗಳನ್ನೆಲ್ಲಾ ಅಬಾಲಿಷ್ ಮಾಡುವುದಕ್ಕೆ ಪ್ರತ್ಯೇಕವಾದ ಒಂದು ಕಾನೂನು ತರುವ ಸಂದರ್ಭ ಇದೆ. ಮತ್ತೆ ಸಂಡೂರಿನಲ್ಲಿ ಶಿವಾಯಿ ಜಮಾಯಿ ಭೂಮಿ ಇದೆ. ಅದನ್ನು ಯಾವರೀತಿ ಹೊಂದಾವಣಿಕೆ ಮಾಡಬೇಕು ಅಥವಾ ಅದನ್ನು ಹಾಗೆಯೇ ಗೇಣಿದಾರರಿಗೆ ಒಪ್ಪಿಸಬೇಕೇ ಎನ್ನುವುದೂ ಕೂಡ ಸರ್ಕಾರದ ಪರ್ಯಾಲೋಚನೆಯಲ್ಲಿದೆ. ಈಗ ಅಮೆಂಡ್‌ಮೆಂಟ್ ಇರತಕ್ಕಂಥಾದ್ದು ಸ್ಪಷ್ಟವಾಗಿದೆ. ಇದು ಜಾಯಿಂಟ್ ಸಲೆಕ್ಟ್ ಕಮಿಟಿಗೆ ಹೋಗಿ ಅಲ್ಲಿಂದ ಇದು ನಮ್ಮ ಹತ್ತಿರ ಬಂದ ಮೇಲೆ ಮುಂದೆ ಏನು ಮಾಡತಕ್ಕದ್ದು ಎನ್ನುವುದನ್ನು ಯೋಚನೆ ಮಾಡಬೇಕು. ಈಗ ಏನೂ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಇದು ಜಂಟಿ ಸಮಿತಿಗೆ ಹೋಗಬೇಕಾದ್ದು ಅವಶ್ಯಕ ಇರುವುದರಿಂದ ಇದರಲ್ಲಿರುವ ಎಲ್ಲಾ ಅಂಶಗಳಿಗೂ ಮತ್ತು ಮಾನ್ಯ ಸದಸ್ಯರು ಎತ್ತಿದ ಅಂಶಗಳಿಗೂ ಉತ್ತರ ಕೊಡಬೇಕಾದ ಅಗತ್ಯವಿಲ್ಲ ಎಂದು ಭಾವಿಸಿದ್ದೇನೆ. ಮುಖ್ಯವಾಗಿ ಮಾನ್ಯ ಸದಸ್ಯರು ಹೇಳತಕ್ಕಂಥ ಸಲಹೆಗಳನ್ನು ಪರಿಶೀಲನೆಗೆ ತೆಗೆದುಕೊಳ್ಳುವುದಕ್ಕೆ ಇದು ಜಂಟಿ ಸಮಿತಿಗೆ ಹೋದರೆ ಸಾಧ್ಯವಾಗುತ್ತದೆ. ಆದುದರಿಂದ ಮಾನ್ಯ ಸದಸ್ಯರುಗಳು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ನಾನು ಹೇಳುತ್ತೇನೆ.

Mr. DEPUTY SPEAKER.—The question is :

"That the Mysore (Bombay and Hyderabad Areas) Religious and Charitable Inams Abolition Bill, 1972" be taken into consideration."

The motion was adopted.

Motion to Refer to a Joint Select Committee

Sri N. HUTCHAMASTHY GOWDA (Minister for Revenue) : Sir, I move :

"That the Mysore (Bombay and Hyderabad Areas) Religious and Charitable Inams Abolition Bill, 1972, be referred to a Joint Select Committee consisting of a total number of 20 Members (15 from the Legislative Assembly and